ಏಪ್ರಿಲ್
2026

ಸಂಪುಟ 41
ಸಂಚಿಕೆ 4

# ಪ್ರಸಾದ

ಮಾಸಿಕ



ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು



ಬೆಂಗಳೂರಿನಲ್ಲಿ ನಡೆದ ಹಿಂದೂ ಧರ್ಮ ಆಚಾರ್ಯ ಸಭಾದ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕರಾದ ಶ್ರೀ ಮೋಹನ್ ಭಾಗವತ್‌ರವರು ಹಾಗೂ ಪರಮಪೂಜ್ಯ ಜಗದ್ಗುರುಗಳವರು ಭೇಟಿಯಾದ ಸಂದರ್ಭ (3 ಏಪ್ರಿಲ್ 2026)

# ಪ್ರಸಾದ

ಸಂಪುಟ 41 : ಸಂಚಿಕೆ 4 ಏಪ್ರಿಲ್ 2026

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 49




**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

ಮುಖಪುಟ ಚಿತ್ರ

ಮೈಸೂರು ಕಲಾಮಂದಿರದಲ್ಲಿ ಕರ್ನಾಟಕ ಸರ್ಕಾರ ಮತ್ತು ಬಸವ ಬಳಗಗಳ ಒಕ್ಕೂಟವು ಆಯೋಜಿಸಿದ್ದ ಬಸವ ಜಯಂತಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬೆಲ್ದಾಳ ಶ್ರೀ ಸಿದ್ದರಾಮ ಶರಣರಿಗೆ ರಾಷ್ಟ್ರೀಯ ಬಸವ ಪುರಸ್ಕಾರವನ್ನು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಪ್ರದಾನ ಮಾಡಿದರು. ಮಾತೆ ಗಾಯಿತ್ರಿ, ಮಾತೆ ಸತ್ಯದೇವಿ, ಶ್ರೀ ಶಿವರಾಜ್ ತಂಗಡಗಿ, ಡಾ. ಹೆಚ್.ಸಿ. ಮಹದೇವಪ್ಪ, ಡಾ. ಪುಷ್ಪಾ ಅಮರನಾಥ್, ಶ್ರೀ ಸಿ.ಎನ್. ಮಂಜೇಗೌಡ, ಶ್ರೀ ಕೆ. ಶಿವಕುಮಾರ್, ಶ್ರೀ ಜೆ. ಮಂಜುನಾಥ್ ಮೊದಲಾದವರುಗಳಿದ್ದಾರೆ (20 ಏಪ್ರಿಲ್ 2026)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 8

ಮತಮೌನ ಸತ್ಯದರ್ಶನ 10
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ನಾ ಕಂಡ ಬಸವಣ್ಣ 15
ಸಿ. ಅಂಕಪ್ಪ

ಶಬರಶಂಕರ ವಿಲಾಸ ಟೀಕು : ತೃತೀಯಾಶ್ವಾಸ 21
ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಸೌಜನ್ಯದ ಸಾಕಾರಮೂರ್ತಿ : ಡಾ. ಎಚ್. ತಿಪ್ಪೇರುದ್ರಸ್ವಾಮಿ 28
ಡಾ. ಬಿ. ನಂಜುಂಡಸ್ವಾಮಿ

ಕಂತೆಭಿಕ್ಷದ ಹರಿಕಾರ – ಮಹಾತ್ಮ ಶ್ರೀ ಗುರುಮಲ್ಲೇಶ್ವರರು 34
ಡಾ. ಡಿ.ಎಸ್. ಗುರು

ಕದಿರ ರೆಮ್ಮವ್ವೆ 43
ಡಾ. ಉಷಾದೇವಿ ಹಿರೇಮಠ

ಅಕ್ಕಮಹಾದೇವಿ : ಒಲವು–ನಿಲುವು 47
ಡಾ. ವೈ. ಸುಶ್ಮಿತಾ

ವಾರ್ತಾವಿಹಾರ 56
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

## ಶಾಂಭವದ್ವೀಪ

ಮುತ್ತಿ ಮೂದಲಿಸಿ ಮೊನೆಗೆಡಿಸುವ
ಮಾಯಾಪ್ರಪಂಚಿನ ಬಲೆಗೆ ಸಿಲುಕದೆ
ನಾನು
ಧ್ಯಾನ-ಮೌನ-ಉಪಾಸ್ತಿಯಿಂದ
ಷಟ್‌ಕೋಣೆಯ ಸುವರ್ಣದ್ವೀಪದ ಅರಸಿನ ಬಲವಿಡಿದು,

ಪಂಚವಿಂಶತಿ ತತ್ತ್ವಂಗಳೆಂಬ
ಮಾಯಾ ಸುಭಟರ ಸುಡಕೊಂದು,
ಪಂಚ ಬ್ರಹ್ಮವೇ ಪಂಚಭೂತಂಗಳಾಗಿ
ತನುವಿಡಿದು,
ಲಿಂಗನಿಷ್ಠೆಯಿಂದ ಓಂಕಾರ ಸ್ವರೂಪನಾಗಿ
ಅಹಂಕರಿಸದೆ
ದಾಸೋಹಂಭಾವದಿಂದ–
ತ್ರಿಕೂಟಪರ್ವತಕ್ಕೆ ಪಶ್ಚಿಮ ದಿಕ್ಕಿನಲ್ಲಿ
ಅನಂತ
ಕಾರ್ಮುಗಿಲ ಮಿಂಚಿನಂತೆ
ಕೂತಿ(ರ್ಪ)ರ್ಪುದೀಗ ಶಾಂಭವ ದ್ವೀಪ!

ಆ ಶಾಂಭವ ದ್ವೀಪದಲ್ಲಿ
ನೆಲಸಿರ್ಪ
ನಿರವಯಲ
ಬೆಳ್ಳಿಂಗಳ ಬೀಜಮಂ ನಾನು ಕಂಡು
ಕಂಬನಿದುಂಬಿ
ನಮಸ್ಕಾರಮಂ ಮಾಡಿದ ಘನದಿಂದ–
ಬ್ರಹ್ಮ
ವಿಷ್ಣು
ರುದ್ರ
ಇಂತೀ ಮೂವರಂ ಕೆಡೆಮೆಟ್ಟಿ
ಜನನ-ಮರಣಂಗಳಂ ಗೆಲಿದು–ನಾನು ಹುಟ್ಟುಗೆಟ್ಟೆನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

– ಘನಲಿಂಗಿದೇವರು

# ಗುರುವಾಣಿ

ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ।
ಮೋಹಾತ್ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥
(ಭಗವದ್ಗೀತೆ, 18.7)

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಗೀತಾರ್ಥವನ್ನು ತಿಳಿಸುತ್ತಾ, ನಿಷಿದ್ಧ ಮತ್ತು ಕರ್ಮಗಳ ಸ್ವರೂಪದಿಂದ ತ್ಯಾಗ ಮಾಡುವುದು ಉಚಿತವೇ ಆಗಿದೆ; ಆದರೆ ನಿಯತ ಕರ್ಮವನ್ನು ಸ್ವರೂಪದಿಂದ ತ್ಯಾಗ ಮಾಡುವುದು ಯೋಗ್ಯವಲ್ಲ. ಹಾಗಾಗಿ ಮೋಹದಿಂದ ಅದನ್ನು ತ್ಯಜಿಸುವುದು ತಾಮಸ ತ್ಯಾಗವಾಗುತ್ತದೆ ಎಂದು ಹೇಳುತ್ತಾನೆ.

ಶ್ರೀಕೃಷ್ಣನ ಈ ಮಾತಿಗೆ ಪೂರ್ವಪೀಠಿಕೆಯಾಗಿ ಅರ್ಜುನ "ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ – ರಾಜ್ಯದ ಆಸೆಗಾಗಿ ಸ್ವಜನ ಸಮುದಾಯವನ್ನು ನಾನೇಕೆ ಕೊಲ್ಲಲಿ, ನನಗೆ ಜಯವೂ ಬೇಡ, ರಾಜತ್ವವೂ ಬೇಡ, ಸುಖಭೋಗಗಳೂ ಬೇಡ" ಎನ್ನುತ್ತಾನೆ. ಅದಕ್ಕೆ ಪ್ರತಿಕ್ರಿಯೆಯಾಗಿ ಶ್ರೀಕೃಷ್ಣನು ಮೇಲಿನ ಸಂದೇಶವನ್ನು ನೀಡುತ್ತಾನೆ.

ಅರ್ಜುನ ಒಬ್ಬನಲ್ಲಿ ಮಾತ್ರವಲ್ಲ, ಮಹಾಭಾರತದಲ್ಲಿ ಈ ಬಗೆಯ ಮೋಹಪಾಶದಿಂದ ಬಂಧಿತವಾದ ದೊಡ್ಡದೊಂದು ಬಳಗವೇ ಇದೆ. ಅದು ಸ್ವಜನ, ಸಹಕುಟುಂಬ, ಬಂಧುಬಳಗ – ಹೀಗೆ ಅಪಾರವಾದ ಕರ್ಮಪಾಶದಿಂದ ಬಂಧಿತವಾಗಿದೆ. ಅದು ಹಲವೊಮ್ಮೆ ಬಹಿರಂಗವಾಗಿ, ಕೆಲವೊಮ್ಮೆ ಆಂತರಿಕವಾಗಿ ಕಾರ್ಯ ನಿರ್ವಹಿಸುತ್ತದೆ. ಜೀವನದ ಈ ಮಹಾಪ್ರವಾಹದ ಹರಿವನ್ನು, ತೀವ್ರತೆಯನ್ನು, ಸೆಳೆತವನ್ನು ಅರಿಯಲು ಸಾಧ್ಯವಾಗದೆ ಕೆಲವರು ತೇಲಿದರೆ, ಕೆಲವರು ಮುಳುಗುತ್ತಾರೆ, ಕೆಲವರು ಕೊಚ್ಚಿಹೋಗುತ್ತಾರೆ, ಮತ್ತೆ ಕೆಲವರು ಅದರ ಸುಳಿಯಲ್ಲಿ ಸಿಲುಕುತ್ತಾರೆ. ಹೀಗೆ ಸಿಲುಕುವವರಿಗೆ ಅವರ ಬದುಕು 'ಪದ್ಮಪತ್ರಜಲ ಬಿಂದು' ಎಂಬ ಅರಿವಿರುವುದಿಲ್ಲ. ಕಮಲದ ಎಲೆಯು ನೀರಿನಲ್ಲಿಯೇ ಇದ್ದರೂ, ಅದರಲ್ಲೇ ಹುಟ್ಟಿ ಬೆಳೆದರೂ ಒಂದು ಹನಿಯನ್ನೂ ಅಂಟಿಸಿಕೊಳ್ಳುವುದಿಲ್ಲ. ನೀರಿನಲ್ಲಿದೆ, ಆದರೆ ನೀರಜವಲ್ಲ. ಅದಕ್ಕೆ ಸಾರ್ಥಕತೆ ಬರುವುದು ಅದು "ಮುಡಿವ ಭೋಗಿಗಳಿಗೆ" ಸಂದಾಗ ಮಾತ್ರ. ಆದರೆ ಈ ಬದುಕಿನ ಸಂಕೀರ್ಣ ಸಮಸ್ಯೆಯನ್ನು ನಿರಾಕರಿಸುವುದು ಅಷ್ಟು ಸುಲಭವಲ್ಲ.

ಮಹಾಭಾರತದಲ್ಲಿ ಸ್ವತಃ ಮಹಾನ್ ಶಾಸ್ತ್ರವಿದರೂ ಶಸ್ತ್ರಜ್ಞರೂ ಆದ ಭೀಷ್ಮರಂಥವರಿಗೂ ಈ ಪಾಶವನ್ನು ಬಿಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅವರು ಜೀವನಪರ್ಯಂತ ಈ ಸಕರ್ಮ ಮತ್ತು ಅಕರ್ಮಗಳ ತಾಕಲಾಟದಲ್ಲಿಯೇ ಬದುಕನ್ನು ವ್ಯರ್ಥವಾಗಿ ಸವೆಸಿದರು. ಅವರ ಅಂತರಂಗ ಮತ್ತು ಬಹಿರಂಗಗಳ ಸಂಘರ್ಷಕ್ಕೆ ಉದಾಹರಣೆಯೆಂದರೆ ಹದಿನೆಂಟು ದಿನಗಳ ಕಾಲ ನಡೆದ ಮಹಾಭಾರತ ಯುದ್ಧದಲ್ಲಿ ಮೊದಲ ಹತ್ತು ದಿನ ಭೀಷ್ಮರದೇ ಸಾರಥ್ಯ. ಆ ಹತ್ತು ದಿನಗಳಲ್ಲಿ ಎಷ್ಟೋ ಅಕ್ಷೋಹಿಣಿ ಸೇನೆ ನಾಶವಾಯಿತು. ಆದರೆ ಪಾಂಡವರು ಮತ್ತು ಕೌರವರ ಎರಡೂ ಪಕ್ಷಗಳಲ್ಲಿ ಭೀಷ್ಮರ ಬಂಧುಗಳು ಯಾರೂ ಸಾಯುವುದಿಲ್ಲ. ಪಾಂಡವರು ಮತ್ತು ಕೌರವರ ಆಪ್ತರೆಲ್ಲರೂ ಜೀವಂತವಾಗಿಯೇ ಇರುವಂತೆ ಅವರು ನೋಡಿಕೊಳ್ಳುತ್ತಾರೆ. ಯುದ್ಧದ ಪ್ರಾರಂಭದಲ್ಲಿ ಅರ್ಜುನನಿಗೆ ಹುಟ್ಟಿದ ವಿಷಾದವನ್ನು ಶ್ರೀಕೃಷ್ಣ ಪರಿಹರಿಸಲು ಯತ್ನಿಸುತ್ತಾನೆ. ಏಕೆಂದರೆ ಅರಿಷಡ್ವರ್ಗಗಳನ್ನು ಗೆಲ್ಲುವುದು ಅಷ್ಟು ಸುಲಭ ಸಾಧ್ಯವಾದುದಲ್ಲ. ಮನೆಯ ಕಸವನ್ನು ಎಷ್ಟು ಬಾರಿ ಗುಡಿಸಿದರೂ ಅದು ಮತ್ತೆ ಮತ್ತೆ ಆವರಿಸಿಕೊಳ್ಳುವಂತೆ, ಅರಿಷಡ್ವರ್ಗಗಳು ದೂರ ತಳ್ಳಿದಷ್ಟೂ ಮತ್ತೆ ಮತ್ತೆ ಒಳಸುಳಿಯುತ್ತಿರುತ್ತವೆ. ಹಾಗಾಗಿ ಅರ್ಜುನನಿಗೆ ಮೋಹ ತಲೆದೋರಿದಾಗಲೆಲ್ಲ ಶ್ರೀಕೃಷ್ಣನ ದಿವ್ಯ ಬೆಳಕು ಬೇಕಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಅರ್ಜುನ ಅವನ ಮೋಹವನ್ನು ಮಾತಿನಲ್ಲಿ ತೋರ್ಪಡಿಸುತ್ತಾನೆ, ಆದರೆ ಭೀಷ್ಮರು ಅವರ ಅಂತರಂಗದಲ್ಲಿ ಅಡಗಿರುವ ಮೋಹವನ್ನು ಅವರ ಕೆಲಸದ ಮೂಲಕ ಅಭಿವ್ಯಕ್ತಿಸುತ್ತಾರೆ. ಅಂತಿಮವಾಗಿ ಭೀಷ್ಮರು ಮರಣಶಯ್ಯೆಯಲ್ಲಿ ಇರುವಾಗ ಅವರ ಎಲ್ಲ ಶಾಸ್ತ್ರಜ್ಞಾನವನ್ನೂ ಧರ್ಮರಾಯನಿಗೆ ಉಪದೇಶಿಸಿ ಕೇವಲ ಆತ್ಮವನ್ನು ನಂಬಿ, ಶರೀರದ ಮೂಲಕ ಪಡೆದ ಸರ್ವಸ್ವವನ್ನೂ ತ್ಯಾಗ ಮಾಡುತ್ತಾರೆ.

'ತ್ಯಾಗ' ಪದದ ಮೂಲ ಧಾತು 'ತ್ಯಜ್' ಎಂದರೆ ಬಿಡುವುದು ಅಥವಾ ತ್ಯಜಿಸುವುದು. ಬಿಡುವುದು ಎಂದರೆ ನಾನು ಏನನ್ನೋ ಹಿಡಿದುಕೊಂಡಿದ್ದೇನೆ ಎಂಬ ಭಾವ ತನಗೆ ತಾನೇ ಧ್ವನಿಸುತ್ತದೆ. ಆದರೆ ಹಿಡಿದುಕೊಂಡಿರುವುದೇನು ಎಂಬುದನ್ನು ಹಿಡಿದವರೇ ಅರಿಯದೆ ಹೋಗುತ್ತಾರೆ. ಏಕೆಂದರೆ ಅದು ದೃಗ್ಗೋಚರವಲ್ಲ. ಬಾಹ್ಯ ಸ್ವರೂಪವನ್ನು ಮಾತ್ರ ತಿಳಿಯುವ ಸಾಧ್ಯತೆಯುಳ್ಳವರಿಗೆ ಅವರು ಹಿಡಿದುಕೊಂಡಿರುವ ಅಗೋಚರವಾದ ಪಾಶದ ಅರಿವೆ ಇರುವುದಿಲ್ಲ.

ಸನ್ಯಾಸವೆಂದರೆ, ಸಂ – ಎಲ್ಲವನ್ನೂ , ಸಮ್ಯಕ್ಕಾಗಿ, ನ್ಯಾಸ – ಬಿಡುವುದು, ತ್ಯಜಿಸುವುದು ಎಂಬ ಅರ್ಥವಿದೆ. ಸನ್ಯಾಸಕ್ಕೂ ತ್ಯಾಗಕ್ಕೂ ನಡುವೆ ಇರುವ ಅಂತರವನ್ನು ಇಲ್ಲಿ ಅರಿಯಬೇಕಾದುದು ಅಗತ್ಯ. ಸನ್ಯಾಸಿಯಾದವನು ಎಲ್ಲ ಕರ್ಮಗಳಿಂದಲೂ ಮುಕ್ತವಾಗಿರುತ್ತಾನೆ. ಆತನಿಗೆ ಆತ್ಮ ಮತ್ತು ಪರಮಾತ್ಮನ ನಡುವೆ ಇರುವ ಸಂಬಂಧ

ಮಾತ್ರ ಅನ್ವಯವಾಗುತ್ತದೆ. ಆದರೆ ಎಲ್ಲರೂ ಸನ್ಯಾಸಿಯಾಗಲು ಸಾಧ್ಯವಿಲ್ಲವಲ್ಲ! ಈ ಜಗತ್ತಿನಲ್ಲಿರುವ ಲೌಕಿಕರಿಗೆ ಕೂಡ ತ್ಯಾಗದ ಮಹತ್ವ ತಿಳಿಯಬೇಕಾದುದು ಅಗತ್ಯ. ಸನ್ಯಾಸಿಯಾದವನು ಸ್ವತಃ ತ್ಯಾಗದ ಸಂಕೇತವಾಗಿರುತ್ತಾನೆ. ಲೌಕಿಕರಾದವರು ಕೂಡ ಸನ್ಯಾಸದ ಸಾಧನಾಪಥವನ್ನು ಅರಿಯಬೇಕು. ಅವರು ಆ ಮಾರ್ಗದಲ್ಲಿ ನಡೆಯಬೇಕಾಗಿಲ್ಲ ; ನಡೆದರೆ ಆತ ಕೂಡ ಸನ್ಯಾಸಿಯಾಗುತ್ತಾನೆ. ಆದರೆ ಲೋಕಕ್ಕೆ ತನ್ನದೇ ಆದ ಒಂದು ನಿಯತಿಯಿದೆ. ಆ ನಿಯತಿಯಂತೆ ವ್ಯಕ್ತಿಯು ಸದಾ ಇಹವನ್ನು ಅಪೇಕ್ಷಿಸುತ್ತಾನೆ. ಆದುದರಿಂದ ಆತ ಲೌಕಿಕ ವಿಷಯಗಳನ್ನು ತ್ಯಜಿಸುವ ಮರ್ಮವನ್ನು ಅರಿಯಬೇಕು. "ಗಹನಾ ಕರ್ಮೇಣೋ ಗತಿಃ". ಕರ್ಮದ ಗತಿ ಅರಿವಿಗೆ ಮೀರಿದ್ದು; ಅದು ಅಷ್ಟು ಸುಲಭವಲ್ಲ.

ಕರ್ಮ, ಅಕರ್ಮ, ವಿಕರ್ಮ ಎಂಬ ಮೂರು ಬಗೆಯ ಕರ್ಮಗಳನ್ನು, ಈ ಲೋಕದಲ್ಲಿರುವ ಜನರು ಅವುಗಳ ನಡುವಣ ವ್ಯತ್ಯಾಸಗಳನ್ನು ಮೊದಲಿಗೆ ಅರ್ಥ ಮಾಡಿಕೊಳ್ಳಬೇಕು. "ಕರ್ಮ"ವೆಂದರೆ ಇಲ್ಲಿ ಕೆಲಸ ಎಂದರ್ಥ. ಮನುಷ್ಯ ತನ್ನ ಜೀವನ ನಿರ್ವಹಣೆಗೆ ಮಾಡಲೇಬೇಕಾದ ಹಲವಾರು ಕೆಲಸಗಳಿರುತ್ತವೆ. ದುಡಿಯಬೇಕು, ಇತರರೊಡನೆ ಸಹಜೀವನ ನಡೆಸಬೇಕು ಇತ್ಯಾದಿ. ಅಂತೆಯೇ, "ಅಕರ್ಮ"ವೆಂದರೆ ಯಾವುದೇ ಕಾರ್ಯವನ್ನು ಮಾಡದೆ ಇರುವುದು ಎಂದರ್ಥವಲ್ಲ. ಯುಕ್ತವಾದ ಕಾರ್ಯ ಯಾವುದೆಂದು ಆಲೋಚಿಸಿ ವಿವೇಕದಿಂದ ಆ ಕಾರ್ಯವನ್ನು ಮಾಡಿ, ಅಕರ್ಮಭಾವದಿಂದ ಅದನ್ನು ಮಾಡಿದ್ದೇನೆಂದು ಭಾವಿಸಿ ಕರ್ಮದ ಹೊಣೆಗಾರಿಕೆಯಿಂದ ದೂರಾಗಬೇಕು, ನಿರಹಂಕಾರಿಯಾಗಬೇಕು. ಇದು ಅಕರ್ಮ. ಬಸವಣ್ಣನವರು "ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ" ಎಂದದ್ದು ಇದನ್ನೇ. ಮತ್ತೆ "ವಿಕರ್ಮ"ವೆಂದರೆ ವಿಪರೀತವಾದ ಕಾರ್ಯ. ಇವೇ ಗುಪ್ತವ್ಯಸನಗಳು, ಅರಿಷಡ್ವರ್ಗಗಳು, ದುಶ್ಚಟಗಳು. ಈ ಹಿನ್ನೆಲೆಯಲ್ಲಿ ತ್ಯಾಗ, ಕರ್ಮ ಕಾರ್ಯಗಳ ಅಂತರಾರ್ಥವನ್ನು ಅರಿತು ನಡೆಯುವುದಕ್ಕೆ ಇದು ಸಕಾಲ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಅರಸು ರಾಕ್ಷಸ ಮಂತ್ರಿಯೆಂಬುವ
ಮೊರೆವ ಹುಲಿ ಪರಿವಾರ ಹದ್ದಿನ
ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು ।
ಉರಿ ಉರಿವುತಿದೆ ದೇಶ ನಾವಿ
ನ್ನಿರಲು ಬಾರದೆನುತ್ತ ಜನ ಬೇ
ಸರದ ಬೇಗೆಯಲಿರದಲೇ ಭೂಪಾಲ ಕೇಳೆಂದ ॥

(ಸಭಾಪರ್ವ, ಸಂಧಿ 1, ಪದ್ಯ 62)

ಕುಮಾರವ್ಯಾಸ ಭಾರತದ ಸಭಾಪರ್ವದಲ್ಲಿ ನಾರದರು ಧರ್ಮರಾಯನಿಗೆ ರಾಜನೀತಿಯನ್ನು ಬೋಧಿಸುತ್ತ ಮೇಲಿನ ಮಾತನ್ನು ಹೇಳುತ್ತಾರೆ. "ರಾಜನಾದವನೋ ರಾಕ್ಷಸ, ಮಂತ್ರಿಗಳು ಗರ್ಜಿಸುವ ಹುಲಿ, ಹಿಂಬಾಲಕರು ಮತ್ತು ಸೇವಕರು ಹದ್ದಿನ ಗುಂಪು. ಹೀಗಿರುವಾಗ ಬಡವರ ನೋವನ್ನು ಕೇಳುವವರು ಯಾರು? ಹೀಗೆ ಎಲ್ಲರೂ ನೋವಿನ ಜ್ವಾಲೆಯಂತೆ ಉರಿಯುತ್ತಿರಲು ನಾವು ಈ ದೇಶದಲ್ಲಿ ಇರಬಾರದೆಂದು ಪ್ರಜೆಗಳು ಬೇಸರದ ಬೇಗೆಯಲ್ಲಿ ಬೇಯುತ್ತಾರೆ ತಾನೆ" ಎನ್ನುತ್ತಾರೆ.

ಈ ಪದ್ಯದಲ್ಲಿ ಮುಖ್ಯವಾದ ಸ್ವಾರಸ್ಯವೊಂದಿದೆ. ನಾರದರು 'ಅರಸು ರಾಕ್ಷಸ', 'ಮಂತ್ರಿ ಹುಲಿ' ಎಂದು ಸ್ವತಃ ಅರಸನಾದ ಧರ್ಮರಾಯನಿಗೆ ಹೇಳುತ್ತಿದ್ದಾರೆ. ಅದೂ ಮಂತ್ರಿಗಳು ಹಾಗೂ ಅರಸುಪರಿವಾರದಿಂದ ತುಂಬಿದ ಸಭೆಯಲ್ಲಿ. ನಾರದರಂಥ ವಿರಕ್ತರಿಗೆ ಮಾತ್ರ ಇಂಥ ನಿಲುವನ್ನು ಹೊಂದುವುದು ಸುಲಭ. ಈ ಪದ್ಯದ ಮೂಲಕ ನಾರದರು ಧ್ವನ್ಯರ್ಥವೊಂದನ್ನು ಹೊಮ್ಮಿಸುತ್ತಿದ್ದಾರೆ. ರಾಜನಾದವನು ರಾಕ್ಷಸನಾಗಬಾರದು, ಮಂತ್ರಿ ಹುಲಿಯೂ ಆಗಬಾರದು, ಪರಿವಾರ ಹದ್ದೂ ಆಗಬಾರದು. ಆದರೆ ವಾಸ್ತವದಲ್ಲಿ ಯಾವುದು ಆಗಬಾರದೋ ಅದೇ ಆಗುತ್ತಿದೆ. ಪ್ರಜೆಗಳ ರಕ್ಷಣೆಗಾಗಿ ರೂಪುಗೊಂಡ ರಾಜ್ಯದಲ್ಲಿ ಪ್ರಜೆಗಳ ದುಃಖಕ್ಕೆ ಇವರೇ ಕಾರಣರಾದರೆ ಏನು ಮಾಡುವುದು? ಅದಕ್ಕೆ ಪರಿಹಾರವೆಂದರೆ ಅಂತಹ ಹಿಂಸೆಯ ರಾಜ್ಯದಿಂದ ಪ್ರಜೆಗಳು ದೂರ ಹೋಗಬೇಕು. ಹೀಗೆ ಓಡಿಹೋದರೆ ರಾಜ್ಯದ ಅಸ್ತಿತ್ವವೇ ಅಳಿದು ಹೋಗುವುದಿಲ್ಲವೆ? ಆದುದರಿಂದ ಅರಸನಾದವನು ಜನರ, ಅದರಲ್ಲೂ ವಿಶೇಷತಃ ಬಡವರ ಪರವಾಗಿ ನಿಲ್ಲಬೇಕು.

ಭೀಷ್ಮರು ತಮ್ಮ ಅವಸಾನಕಾಲದಲ್ಲಿ ಧರ್ಮರಾಯನಿಗೆ ರಾಜಧರ್ಮವನ್ನು ಬೋಧಿಸುತ್ತಾ ಒಂದು ಮಹತ್ವದ ಮಾತನ್ನು ಹೇಳುತ್ತಾರೆ. ರಾಜನಾದವನು ಯಾವಾಗಲೂ

ಶ್ರೀಮಂತರನ್ನು ಸ್ನೇಹಿತರನ್ನಾಗಿ ಹೊಂದಬೇಕು; ಲೋಕಪಾಲಕನಾದ ವಿಷ್ಣು ಲಕ್ಷ್ಮಿಯನ್ನು ವರಿಸಿದಂತೆ, ಜಗದೋದ್ಧಾರಕನಾದ ಶಿವನು ಕುಬೇರನನ್ನು ಪರಮಾಪ್ತ ಸಖನಾಗಿ ಹೊಂದಿದಂತೆ. ಆದರೆ ಆತ ಸದಾ ಬಡವರ ಉದ್ಧಾರವೇ ತನ್ನ ಆದ್ಯ ಕರ್ತವ್ಯವೆಂದು ತಿಳಿಯಬೇಕು. ಇಲ್ಲವಾದರೆ ರಾಜ್ಯ ಎಂದೂ ಸಮೃದ್ಧಿಯಾಗಲಾರದು.

ನಾರದರ ಉಪದೇಶ ಇರುವುದು ಸಭಾಪರ್ವದಲ್ಲಿ; ಭೀಷ್ಮರು ಉಪದೇಶ ಮಾಡುವುದು ಗದಾಪರ್ವದಲ್ಲಿ. ಅದೂ ಮಹಾಭಾರತ ಯುದ್ಧ ಮುಗಿದ ಮೇಲೆ ಧರ್ಮರಾಯನ ಪಟ್ಟಾಭಿಷೇಕಕ್ಕೆ ಮುಂಚೆ ಎನ್ನುವುದು ಮುಖ್ಯ. ಮಹಾಭಾರತದ ಈ ಉಪದೇಶ ಕೇವಲ ಆ ಕಾಲಕ್ಕೆ ಅಥವಾ ಧರ್ಮರಾಯನಿಗೆ ಮಾತ್ರ ಸೀಮಿತವಲ್ಲ. ಅದು ಎಲ್ಲ ಕಾಲದ ಅರಸೊತ್ತಿಗೆಗೆ ನೀಡಿದ ಬುದ್ಧಿವಾದ. ಆದರೆ ಅರಸೊತ್ತಿಗೆ ಅಂಥ ಹಿತವಚನ ವನ್ನು ಎಂದೂ ಕೇಳುವುದಿಲ್ಲ ಎನ್ನುವುದೂ ಅಷ್ಟೇ ಸತ್ಯ. ಹಿರಿಯರ ಉಪದೇಶ ಇಂದು ಕೇವಲ ಮಾತಾಗಿ ಮಾತ್ರ ಉಳಿದಿದೆ. ಕಾಲ ಬದಲಾದರೂ, ಅರಸುಗಳ ಜಾಗದಲ್ಲಿ ರಾಜಕಾರಣಿಗಳು ಬಂದರೂ ಪರಿಸ್ಥಿತಿಯೇನೂ ಬದಲಾಗಿಲ್ಲ, ಚರಿತ್ರೆಯ ಪುಟಗಳು ಬದಲಾಗಿವೆ, ಅಷ್ಟೆ.

ಇದಕ್ಕೊಂದು ಇತ್ತೀಚಿನ ಉದಾಹರಣೆ ಎಂದರೆ, ಸರ್ಕಾರದ ವರದಿಯ ಪ್ರಕಾರವೇ, ಕರ್ನಾಟಕದಲ್ಲಿ ಸುಮಾರು 22,000 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು, ಸಾಕಷ್ಟು ಜನ ವಿದ್ಯಾರ್ಥಿಗಳು ಇಲ್ಲವೆಂಬ ಕಾರಣಕ್ಕೆ ಮುಚ್ಚಲಾಗುತ್ತಿದೆ. ಈ ಸುದ್ದಿ ಹೊರಬಿದ್ದ ಬಳಿಕ ಕೆಲವೆಡೆ ವಿರೋಧ ವ್ಯಕ್ತವಾಗಿದ್ದರಿಂದ ಆ ಶಾಲೆಗಳನ್ನು ಮುಚ್ಚುವ ನಿರ್ಧಾರ ಅಧಿಕೃತವಾಗಿ ಪ್ರಕಟವಾಗದಿದ್ದರೂ ಮುಚ್ಚುವ ಪ್ರಕ್ರಿಯೆಯಂತೂ ನಡೆದೇ ಇದೆ. ಇಂಥ ನಡೆ ಒಂದು ಪಕ್ಷ ಅಥವಾ ಸರ್ಕಾರಕ್ಕೆ ಮಾತ್ರ ಸೀಮಿತವಾಗಿಲ್ಲ. ಇದರಲ್ಲಿ ಎಲ್ಲರೂ ಒಂದೆ. ಭಾರತದ ಸಂವಿಧಾನವು ತನ್ನ ರಾಜ್ಯನಿರ್ದೇಶಕ ತತ್ವದಲ್ಲಿ ಶಿಕ್ಷಣವು ಆದ್ಯತೆಯ ವಿಷಯವಾಗಿರಬೇಕೆಂದು ಹೇಳಿದ್ದರೂ ಕೂಡ ಯಾವ ಸರ್ಕಾರವೂ ಅದನ್ನು ಮೂಲಭೂತ ಹಕ್ಕಾಗಿ ಮಾಡಲಿಲ್ಲ.

ಅನಗತ್ಯವಾದ ಎಷ್ಟೋ ವಿಷಯಗಳನ್ನು ಬದಲಾಯಿಸಲು ತೋರುವ ಆಸಕ್ತಿಯನ್ನು ನಮ್ಮನ್ನು ಆಳುವವರು ಶಿಕ್ಷಣದ ಬಗ್ಗೆ ತೋರಿಸುವುದಿಲ್ಲ. ಸರ್ಕಾರಿ ಶಾಲೆಗಳು ಮುಚ್ಚುತ್ತಿರುವ ದಾರುಣ ಪರಿಸ್ಥಿತಿಯಲ್ಲಿ ಜನರು ಲಕ್ಷಾಂತರ ರೂಪಾಯಿ ತೆತ್ತು ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಬಯಸುತ್ತಾರೆ. ಶಿಕ್ಷಣ ಎಂಬುದು ನಿಜವಾಗಿ ಸರ್ಕಾರದ ಸುಪರ್ದಿಯಲ್ಲಿರಬೇಕು. ಅದು ಮಾರಾಟದ ಸರಕಾಗಬಾರದು. ಹಾಗಾದಾಗ ಜೀವನ ದುಬಾರಿಯಷ್ಟೇ ಅಲ್ಲ, ದುರ್ಭರವೂ ಆಗುತ್ತದೆ.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ಮತಮೌನ ಸತ್ಯದರ್ಶನ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಲೋಕದಲ್ಲಿ ಎಷ್ಟು ಜನರೋ ಅಷ್ಟು ದೃಷ್ಟಿಕೋನಗಳು. ಹೀಗಾಗಿ ವಸ್ತುಗಳು ಒಂದಾಗಿದ್ದರೂ ಕೂಡ ದೃಷ್ಟಿಗಳು ಭಿನ್ನಭಿನ್ನವಾಗಿರುವುದರಿಂದ ವಸ್ತುವಿನ ದರ್ಶನ ಭಿನ್ನಭಿನ್ನವಾಗಿರುತ್ತದೆ. ವಸ್ತುವಿನ ಜ್ಞಾನ ಭಿನ್ನಭಿನ್ನವಾಗಿರುತ್ತದೆ. ಒಬ್ಬ ವ್ಯಕ್ತಿ ಒಬ್ಬನಿಗೆ ಒಳ್ಳೆಯವನಾಗಿ ಕಾಣುತ್ತಾನೆ. ಇನ್ನೊಬ್ಬನಿಗೆ ಅದೇ ವ್ಯಕ್ತಿ ಕೆಟ್ಟವನಾಗಿ ಕಾಣುತ್ತಾನೆ. ನಮಗೆ ತಿಳಿದುದು ನಮಗೆ ಸರಿ, ಅವರಿಗೆ ತಿಳಿದುದು ಅವರಿಗೆ ಸರಿ. ಹಾಗೆ ನಮ್ಮ ನಮ್ಮ ಭಾವ. ಅಷ್ಟೇ ಏಕೆ? ಕಾಲ ಹಾಗೂ ದೇಶಗಳೂ ಕೂಡ ವಿವಿಧ ಗತಿಯಲ್ಲಿ ಚಲಿಸುವ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ. ಐನ್‌ಸ್ಟೀನರ ಸಾಪೇಕ್ಷ ಸಿದ್ಧಾಂತ ಈ ಮಾತನ್ನು ಪುರಸ್ಕರಿಸಿದೆ.

ಒಂದು ಬೆಟ್ಟ, ಆ ಬೆಟ್ಟದ ತುಟ್ಟತುದಿಯಲ್ಲಿ ಒಬ್ಬ ಮನುಷ್ಯ ನಿಂತಿದ್ದಾನೆ. ಬೆಟ್ಟದ ಕೆಳಗೆ ಒಂದು ಆಕಳು ನಿಂತಿದೆ. ಮೇಲಿರುವ ಮನುಷ್ಯ ಕೆಳಗಿರುವ ಆಕಳನ್ನು ನೋಡಿ ಹೇಳುತ್ತಾನೆ, 'ಎಷ್ಟು ಚಿಕ್ಕದು ಈ ಆಕಳು!' ಕೆಳಗಿರುವ ಆಕಳು ಮೇಲೆ ನಿಂತ ಮನುಷ್ಯನ ಕಂಡು 'ಎಷ್ಟು ಚಿಕ್ಕವ ಈ ಮನುಷ್ಯ' ಎನ್ನುತ್ತದೆ. ಒಬ್ಬರ ದೃಷ್ಟಿಯಲ್ಲಿ ಒಬ್ಬರು ಚಿಕ್ಕವರು. ಮಾಲೀಕನ ದೃಷ್ಟಿಯಿಂದ ಆಕಳು ಸಣ್ಣದು. ಆಕಳ ದೃಷ್ಟಿಯಿಂದ ಮಾಲೀಕ ಸಣ್ಣವ. ಇದು ಸಾಪೇಕ್ಷತೆ. ಕಡಮೆ ತಿಳಿದವರ ದೃಷ್ಟಿಯಲ್ಲಿ ನಾನು ಹೆಚ್ಚು ತಿಳಿದವ, ಹೆಚ್ಚು ತಿಳಿದವರ ದೃಷ್ಟಿಯಲ್ಲಿ ನಾನು ಕಡಮೆ ತಿಳಿದವ! ನಿಖರವಾಗಿ ನಾವು ಜಾಣರೋ, ದಡ್ಡರೋ? ನಿರ್ಧರಿಸುವುದು ಬಹಳ ಕಷ್ಟ. ನಮ್ಮ ಬಗೆಗೆ ನಾವು ನಿರ್ಧಾರ ಮಾಡುವುದು ಸಾಧ್ಯವಿಲ್ಲ ಎಂದ ಬಳಿಕ ಜಗತ್ತಿನ ಬಗ್ಗೆ ನಿರ್ಧಾರ ಮಾಡುವುದು ಹೇಗೆ ಸಾಧ್ಯ? ಈ ಸಾಪೇಕ್ಷ ಸಿದ್ಧಾಂತ ಅರಿತುಕೊಂಡರೆ ನಮ್ಮ ಭಾಷೆ ತಿಳಿಯಾಗುತ್ತದೆ. ಸಮತೋಲಗೊಳ್ಳುತ್ತದೆ. ಇಲ್ಲವಾದರೆ ಕಲಹ, ಛಲ, ಮತಾಂಧತೆ ಎಲ್ಲ ಕಾಣಬರುತ್ತವೆ.

ರಾಮನನ್ನು ಎತ್ತಿ ಹಿಡಿದವರು ಹಲವರು. ರಾವಣನನ್ನು ಎತ್ತಿ ಹಿಡಿದವರು ಕೆಲವರು. ತ್ರೇತಾಯುಗದಲ್ಲೇ ರಾಮನನ್ನು ಅವರ ದೇವರೆಂದು ತಿಳಿದವರೂ ಇದ್ದರು. ರಾಮನನ್ನು ದೋಷದೃಷ್ಟಿಯಿಂದ ನೋಡುವ ಅಗಸನಂಥವರೂ ಇದ್ದರು. ಇಬ್ಬರ ಅಭಿಪ್ರಾಯಗಳೂ ಅರ್ಧ ಅರ್ಧ ಸತ್ಯ, ಅವರವರ ದೃಷ್ಟಿಯಲ್ಲಿ. ಜನಾಭಿಪ್ರಾಯ ಅಸ್ಥಿರ ಹಾಗೂ ಅಪೂರ್ಣ ಸತ್ಯ.

ಜನ ನೆಪೋಲಿಯನ್‌ನನ್ನು ಮೊದಲು ತುಂಬಾ ಕೊಂಡಾಡಿದರು! ಕೊನೆಗೆ ಸೋತ; ಎಲ್ಲರೂ ಬೈದರು! ಬಸವಣ್ಣನವರು ಒಳಗೆ ಹೊರಗೆ ಶುದ್ಧ. ಕೂಡಲಸಂಗಮನಿಗೆ

ಅಚ್ಚುಮೆಚ್ಚು. ಅವರನ್ನು ಲಕ್ಷಾಂತರ ಶರಣರು ಕೊಂಡಾಡಿದರು. ಅದೇ ಸಮಯಕ್ಕೆ ಅವರ ಮಗ್ಗುಲಲ್ಲಿಯೇ ಕುಳಿತ ಮಂಚಣ್ಣ ಅವರನ್ನು ಜರೆದ. ಅವನ ದೃಷ್ಟಿಯಲ್ಲಿ ಬಸವಣ್ಣನವರು ಧರ್ಮಹೀನರು; ಮತವಿರೋಧಿಗಳು; ಅಪ್ರಾಮಾಣಿಕರು!

ಎಲ್ಲರ ವಿಷಯದಲ್ಲೂ ಇದು ಹೀಗೆಯೇ. ನಮ್ಮನ್ನು ಸರಿಯಾಗಿ ಅರ್ಥಮಾಡಿಕೊಂಡವರು ಅಷ್ಟಕ್ಕಷ್ಟೇ. ನೀವು ಬೇಕಾದರೆ ಮನೆಗೆ ಹೋಗಿ ಕೇಳಿ. ಅವರಿಗೆ ಏನಾದರೂ ಅವಶ್ಯಕತೆ ಇದ್ದರೆ ನಿಮ್ಮನ್ನು ಬಹಳ ಚೆನ್ನಾಗಿ ವರ್ಣಿಸುತ್ತಾರೆ. ನಿಮ್ಮ ಬುದ್ಧಿವಂತಿಕೆಯನ್ನು, ನಿಮ್ಮ ಮಾತುಗಾರಿಕೆಯನ್ನು, ನಿಮ್ಮ ಶ್ರೇಷ್ಠತೆಯನ್ನು ಬೇಕಾದಷ್ಟು ಬಾಯಿತುಂಬ ಹೊಗಳುತ್ತಾರೆ. ಪ್ರಸಂಗ ಬಂದರೆ ಅಷ್ಟೇ ತೀವ್ರವಾಗಿ ತೆಗಳುತ್ತಾರೆ. ನಿಮ್ಮ ಕುಂದುಕೊರತೆಗಳನ್ನು ಬೆಟ್ಟದಷ್ಟು ದೊಡ್ಡದಾಗಿಸುತ್ತಾರೆ. ಲೋಕದ ಜನ ತಪ್ಪು ಮಾಡುತ್ತಾರೆಂದಲ್ಲ. ಜನ ಭಿನ್ನಭಿನ್ನ ದೃಷ್ಟಿಯಿಂದ ನೋಡುತ್ತಿರುತ್ತಾರೆ! ಸೂರ್ಯನನ್ನು ನಾವು ಟೆಲಿಸ್ಕೋಪ್‌ದಿಂದ ನೋಡಿದರೆ ಅಲ್ಲಿ ಕಲೆಗಳು ಕಾಣಿಸುತ್ತವೆ. ನೀವು ಸೂರ್ಯನಿಗೆ ಅತ್ಯಂತ ಸನಿಹ ಹೋದರೆ ಏನೂ ಇಲ್ಲ ಅಲ್ಲಿ. ಉಷ್ಣತೆಯ ಅಂತರ ಇದೆ ಅಷ್ಟೆ. ಆದರೆ ಆ ಕಲೆಗಳು ಇಲ್ಲ. ಆ ಕಪ್ಪುಗಳು ಇಲ್ಲ. ಹೀಗೆ ಸೂರ್ಯನಂತಹ ತೇಜೋರಾಶಿಯನ್ನು ಈ ದೃಷ್ಟಿಯಿಂದ ನೋಡುತ್ತೇವೆ. ಬಸವಣ್ಣನಂತಹ ಮಹಾಜ್ಞಾನಿಯನ್ನು ಇಷ್ಟು ಭಿನ್ನ ದೃಷ್ಟಿಯಿಂದ ನೋಡುತ್ತೇವೆ ಎಂದಾಗ ನಮ್ಮನ್ನು ಜಗತ್ತಿನ ಜನ ಭಿನ್ನಭಿನ್ನವಾಗಿ ನೋಡಬಾರದು ಎಂದರೆ ಹೇಗಾದೀತು ಹೇಳಿ? ಸಾಕ್ಷಾತ್ ಭಗವಂತನನ್ನು 'ಒಂದು' ಎಂದು ಕಂಡವರು ಕೆಲವರು. ಹಲವು ರೂಪ ಎಂದು ನೋಡಿದವರು ಕೆಲವರು. ಮೇಲೆ ಇದ್ದಾನೆ ಎಂದು ಕೆಲವರು, ಎಲ್ಲಾ ಕಡೆ ಇದ್ದಾನೆ ಎಂದು ಮತ್ತೆ ಕೆಲವರು! ಅವನು ಇಲ್ಲವೇ ಇಲ್ಲ, ಶೂನ್ಯ ಎಂದು ಪ್ರತಿಪಾದಿಸುವವರು ಹಲವರು. ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಒಬ್ಬರು ಹೇಳಿದರೆ, ಅವನು ಸುವೇದ್ಯ ಎಂದವರು ಅನೇಕ. ಯಾವುದು ಸತ್ಯ! ಯಾವುದು ಸುಳ್ಳು! ನೋಡುವ ದೃಷ್ಟಿಕೋನ ಎಷ್ಟು!

ಈ ದೃಷ್ಟಿವೈವಿಧ್ಯದ ಅರಿವು ನೀಡುವುದು ಅಧ್ಯಾತ್ಮ. ಇದರಿಂದ ವಸ್ತುವಿನ ಸಹಜ ದರ್ಶನ ಸಮನಿಸುತ್ತದೆ. ಆಗ ಮನುಷ್ಯ ಸರ್ವಮತ ಸಹಿಷ್ಣುವಾಗುತ್ತಾನೆ. ಯಾರನ್ನೂ ಅತ ಕಟುವಾಗಿ ಟೀಕಿಸಲಾರ. ಐನ್‌ಸ್ಟೀನ್ ಒಂದು ಮಾತು ಹೇಳುತ್ತಾರೆ: 'When we get the comprehensive vision of the universe, we change our language; we never make assertions.' ಪರಿಮಿತವಾದರೂ ಅನಂತವಾದುದು ವಿಶ್ವ. ಅದನ್ನು ಮನುಷ್ಯ ಸರಿಯಾಗಿ ತಿಳಿದುಕೊಂಡರೆ ಅವನ ಭಾಷೆ ಬದಲಾಗುತ್ತದೆ! ಮಾತಿನೊಳಗಿನ ಛಲ ಮರೆಯಾಗುತ್ತದೆ. 'ಇದಮಿತ್ಥಂ' ಇದು ಹೀಗೆಯೇ ಇದೆ! ಎಂಬ ಖಚಿತ ಭಾಷೆ ಬಳಸಲಾರ.

ಆಚಾರ್ಯ ಶಂಕರ, ಭಗವಾನ್ ಬುದ್ಧ, ಶ್ರೇಷ್ಠ ತಪಸ್ವಿ ಮಹಾವೀರ ಎಲ್ಲಾ ಶರಣರೂ ಅರಿತವರು. ಅವರ ಭಾಷೆಯೂ ಹಾಗೆಯೇ. ನುಡಿಯಲ್ಲಿ ಔದಾರ್ಯ, ನಮ್ಮದೇ ಸತ್ಯ, ನಿಮ್ಮದೆಲ್ಲ ಅಸತ್ಯ ಎಂಬ ಭಾವ ಸಂತರದಲ್ಲ. ಲೌಕಿಕದಲ್ಲೂ ಈ ಅನೇಕಾಂತವಾದ ಸರಿಯಾದುದು; ಪಾರಮಾರ್ಥದಲ್ಲೂ ಅಷ್ಟೇ. ಎಲ್ಲರೂ ಸತ್ಯಪ್ರಿಯರಾದರೂ ನಾವು ಹೇಳುವುದೇ ಸತ್ಯವೆಂದಾಗ ಪ್ರತಿಭಟಿಸುತ್ತಾರೆ, ಅಷ್ಟೇ. ಅಂದರೆ ಅವರು ಸತ್ಯವನ್ನು ಅಲ್ಲಗಳೆಯುವುದಿಲ್ಲ. ಸತ್ಯದ ಬಗೆಗಿರುವ ನಮ್ಮ ಅಂಶಿಕ ಮತವನ್ನು ಅಲ್ಲಗಳೆಯುತ್ತಾರೆ.

ಒಂದು ಸಲ ಒಬ್ಬ ಯಾತ್ರಿಕ ಜಗತ್ತನ್ನೆಲ್ಲ ತಿರುಗಾಡಿ ತಿರುಗಾಡಿ ಬದುಕಿನ ಸುಖ-ದುಃಖಗಳನ್ನು ಕಂಡು, ಇತಿ-ಮಿತಿಗಳನ್ನು ಗುರುತಿಸಿ ಮಹಾನುಭಾವನಾದ. ಒಂದು ದಿನ ಸತ್ಯದ ಸಮೀಪಕ್ಕೆ ಹೋದ. ಸತ್ಯ ದೇವತೆ ಪ್ರಶಾಂತಭಾವದಲ್ಲಿ ನಿಂತಿತ್ತು. ಸತ್ಯವನ್ನು ಕಂಡು ಹೇಳಿದ : "ಸತ್ಯವೇ, ನೀನು ಎಂತಹ ಶುದ್ಧ! ನಿನ್ನ ಕಣ್ಣಿನಲ್ಲಿ ಎಂತಹ ಕಳೆ! ಆದರೆ ಇಷ್ಟು ಪರಿಶುದ್ಧವಾಗಿರುವ ನಿನ್ನನ್ನು ಜಗತ್ತು ಭಿನ್ನಭಿನ್ನವಾಗಿ ವರ್ಣಿಸುತ್ತದಲ್ಲ ಯಾಕೆ?" ಆವಾಗ ಸತ್ಯ ಹೇಳಿತು : "ಆ ಜನ ನನ್ನನ್ನು ನೋಡುತ್ತಿಲ್ಲ. ತಮ್ಮ ಕಣ್ಣಿನಲ್ಲಿ ಮೂಡಿದ ನನ್ನ ಪ್ರತಿಬಿಂಬ ನೋಡುತ್ತಾರೆ. ನೇರವಾಗಿ ನನ್ನನ್ನು ನೋಡುತ್ತಿಲ್ಲ. ಆ ಪ್ರತಿಬಿಂಬಗಳೂ ನಾನಲ್ಲ. ಆದರೆ ಆ ಪ್ರತಿಬಿಂಬವೇ 'ನಾನು' ಎಂದು ಭ್ರಮೆ ಮಾಡಿಕೊಂಡರು. ತಾವು ನೋಡುತ್ತಿರುವುದು ಪ್ರತಿಬಿಂಬ ಎಂದು ಗೊತ್ತಾದರೆ ನನ್ನ ನೈಜ ಸ್ವರೂಪ ಕಾಣಬರುತ್ತದೆ! ನಾನು ಯಾರಿಗೂ ಬೇಕಾಗಿಲ್ಲ. ಯಾರಿಗೂ ಬೇಡಾಗಿಲ್ಲ! ನಾನು ಯಾರಿಗೂ ಬೇಕಿಲ್ಲ, ಏಕೆಂದರೆ ಅವರವರಿಗೆ ಒಗ್ಗುವ ಸತ್ಯ ಅವರಿಗೆ ಬೇಕಾಗಿದೆಯೇ ಹೊರತು 'ನಾನು' ಬೇಕಾಗಿಲ್ಲ. ನಾನು ಯಾರಿಗೂ ಬೇಡಾಗಿಲ್ಲ ಕೂಡ. ಏಕೆಂದರೆ ಎಲ್ಲರೂ ಸತ್ಯವನ್ನು ಆಧರಿಸುತ್ತಾರೆ. ತಾವು ಅರಿತುದು ಸತ್ಯವೆಂದು ಸಿದ್ಧಮಾಡಲು ಹೆಣಗುತ್ತಾರೆ. ಸತ್ಯವನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ನನ್ನನ್ನು ಒಪ್ಪಿಕೊಂಡಿಲ್ಲ! ನಾನೇ ಸತ್ಯ ಅನ್ನುವುದು ಅವರಿಗೆ ಗೊತ್ತಿಲ್ಲ!"

ನಾವು ನಿರಾಮಯರಾಗಿ ನಮ್ಮ ಭಾವನೆಗಳನ್ನು, ದೃಷ್ಟಿಗಳನ್ನು ತ್ಯಜಿಸಿ ಸಹಜ ನೋಡುವ ಬಗೆ ಗೊತ್ತಾದರೆ ನಮಗೆ ಸತ್ಯದರ್ಶನ, ಭಗವತ್ ದರ್ಶನ!

ನಮ್ಮ ನಿಜ ಸ್ವರೂಪ ಅರಿಯಲು ನಮ್ಮನ್ನು ನಾವೇ ಪರೀಕ್ಷಿಸಬೇಕು. ಯಾರು ನಮ್ಮ ಬಗೆಗೆ ಏನೇನು ಅಭಿಪ್ರಾಯಪಡುತ್ತಾರೆ ಅದನ್ನು ಭಿನ್ನಭಿನ್ನ ಪ್ರಸಂಗಗಳಲ್ಲಿ ಸಂಗ್ರಹಿಸಿದರೆ ಒಂದು ಮಹತ್ವದ ಸಂಗತಿ ನಮ್ಮ ಗಮನಕ್ಕೆ ಬರುತ್ತದೆ. ಅವರೆಲ್ಲ ನಮ್ಮ ಬಗ್ಗೆ ಭಿನ್ನ ಭಿನ್ನ ಅಷ್ಟೇ ಅಲ್ಲ ಪರಸ್ಪರ ವಿರೋಧಿ ಅಭಿಪ್ರಾಯ ಹೇಳಿರುತ್ತಾರೆ!

ಸರ್ಕಾರ ನಮ್ಮನ್ನು ಮತದಾರ ಎಂದು ಭಾವಿಸುತ್ತದೆ. ದೇಶ ನಮ್ಮನ್ನು ನಾಗರಿಕ ಎಂದು ಗುರುತಿಸುತ್ತದೆ. ಜನಗಣಕ ನಮ್ಮನ್ನು ಒಂದು ಸಂಖ್ಯೆಯಾಗಿ ಪರಿಗಣಿಸುತ್ತಾನೆ. ಸಮಾಜ ನಮ್ಮನ್ನು ಅ, ಈ ಜಾತಿಯವನೆಂದು ತಿಳಿಯುತ್ತದೆ. ಕೊನೆಗೊಮ್ಮೆ ಎಲ್ಲ

ಅಭಿಪ್ರಾಯ ಎದುರಿಗಿಟ್ಟು 'ನಾವು ಯಾರು?' ಎಂದು ಪ್ರಶ್ನಿಸಿ ಪರೀಕ್ಷಿಸಿದರೆ ದಿಗ್ಭ್ರಮೆಯಾಗುತ್ತದೆ!

ನಾವು ಯಾರು? ಇದನ್ನು ಯಾರೂ ಸರಿಯಾಗಿ, ಪೂರ್ಣವಾಗಿ ತಿಳಿಯರು. ಪ್ರಾಸಂಗಿಕವಾಗಿ, ಸಾಪೇಕ್ಷಿಕವಾಗಿ ನಾವು ಯಾರು ಎಂಬುದನ್ನು ಜಗತ್ತು ಹೇಳುತ್ತದೆ. ಆದರೆ ನಿಜವಾಗಿ ನಾವು ಯಾರು? ಯಾರಿಗೂ ತಿಳಿಯದು. ಎಲ್ಲ ಅಭಿಪ್ರಾಯ ಕಳೆದು ನೋಡಿದಾಗ ಏನು ಸತ್ಯವಾಗಿ ಉಳಿಯುತ್ತದೆಯೋ ಅದೇ 'ನಾನು' ಎನ್ನುವುದರ ನಿಜ! ಅದು ದೇವರು, ಅದು ನಮ್ಮ ಸ್ವರೂಪ. ಮಾನವ ತಳೆದ ಎಲ್ಲ ದೈವೀ ಕಲ್ಪನೆಗಳನ್ನು ಕಳೆದುಹಾಕಿದಾಗ ಏನು ಉಳಿಯುತ್ತದೆಯೋ ಅದು ದೇವರು. ಘನ ಸತ್ಯ. ಅದಕ್ಕೆ ಯೋಗ್ಯ ಶಬ್ದ 'ಬಯಲು!', 'ಶೂನ್ಯ!'

'ಅಸದ್ವಾ ಇದಮಗ್ರ ಆಸೀತ್'; ಅಸತ್ ಎನ್ನುವುದೇ ಮೊದಲಿತ್ತು. ಅಂದರೆ ನಾನು ತಿಳಿದುದು, ತಿಳಿಯುತ್ತಿರುವುದು ಆಗ ಇರಲಿಲ್ಲ. 'ನ ಸತ್'! ಅದು 'ಅಸತ್' ಶೂನ್ಯ.

ನಾನೆಂಬುದು ಪ್ರಮಾಣ, ನೀನೆಂಬುದು ಪ್ರಮಾಣ.
ಸ್ವಯವೆಂಬುದು ಪ್ರಮಾಣ, ಪರವೆಂಬುದು ಪ್ರಮಾಣ.
ಪ್ರಮಾಣೆಂಬುದು ಪ್ರಮಾಣ,
ಗುಹೇಶ್ವರನೆಂಬುದು ಅಪ್ರಮಾಣ!

ನಾವು ಹೇಳಬಾರದು ಹಾಗಿದೆ ಎಂದು! ನಾವು ದೇವನ ಕುರಿತು ಹೇಳಿದುದು ತಪ್ಪೇನಲ್ಲ! ಪೂರ್ಣ ಒಪ್ಪೆಂದೂ ತಿಳಿಯಲಾಗದು. ತಿಳಿವ ತಿಳಿವಳಿಕೆ ಘನಗೊಂಡಾಗ ಸತ್ಯದೇವ ಭಾನ. ಆದರೆ ಅದು ಶಬ್ದ ಮೀರಿದ 'ಅಸತ್'!

ಅಕ್ಕಮಹಾದೇವಿ ದೇವನನ್ನು ತನ್ನ ಆಧ್ಯಾತ್ಮಿಕ ಪತಿಯೆಂದು ಕಂಡಳು; ಹಾಗೆ ಮನೋಹರವಾಗಿ ಬಣ್ಣಿಸಿದಳು. ಉಳಿದೆಲ್ಲ ಲೌಕಿಕ ಗಂಡರನ್ನು ಒಲೆಯೊಳಗೆ ತೂರಿದಳು! ಅಲ್ಲಮಪ್ರಭು ಅದೇ ದೇವನನ್ನು ವಿಶ್ವವಿರಾಡ್ರೂಪವಾಗಿ ಕಂಡ.

ಗಗನವೇ ಗುಂಡಿಗೆ, ಆಕಾಶವೇ ಅಗ್ಘವಣಿ
ಸೂರ್ಯಚಂದ್ರರಿಬ್ಬರು ಪುಷ್ಪ,
ಬ್ರಹ್ಮ ಧೂಪ ವಿಷ್ಣು ದೀಪ ರುದ್ರನೋಗರ
ಇದು ಗುಹೇಶ್ವರನ ಪೂಜೆ

ಎಂದ. ಅಕ್ಕ ಹಾಗೂ ಪ್ರಭುವಿನ ದೇವಕಲ್ಪನೆ ಭಿನ್ನವಾದರೂ ಅವರೀರ್ವರೂ ಪರಸ್ಪರ ದೂಷಿಸಲಿಲ್ಲ. ತಮ್ಮ ದೇವಕಲ್ಪನೆಯೇ ಸತ್ಯವೆಂದು ಛಲ ತಾಳಲಿಲ್ಲ. ಅವರು ಅರಿತವರು.

ನಮ್ಮದು ಹಾಗಿಲ್ಲ. ನನಗೆ ತಿಳಿದಂತೆ ನಿಮಗೆ ತಿಳಿದಿಲ್ಲವಾಗಿ ನನ್ನ ದೃಷ್ಟಿಯಲ್ಲಿ ನೀವು ಅಜ್ಞಾನಿಗಳು. ನಿಮಗೆ ತಿಳಿದಂತೆ ನನಗೆ ತಿಳಿದಿಲ್ಲವಾಗಿ ನಿಮ್ಮ ದೃಷ್ಟಿಯಲ್ಲಿ ನಾನು

ಅಜ್ಞಾನಿ. ಹೀಗಾಗಿ ಕಲಹ, ಸಂಘರ್ಷ. ಸಂತರು ಅನ್ಯೋನ್ಯ! ನಾವು ಅವರವರ ಗುಂಪು ಕಟ್ಟಿ ಸೆಣಸುತ್ತೇವೆ. 'ಅಕ್ಕನೇ ಸರಿ, ಅಲ್ಲಮನಲ್ಲ. ಅಲ್ಲಮನೇ ಸರಿ, ಅಕ್ಕನಲ್ಲ.' ಇದು ನಮ್ಮ ಭಾವ. ಅವರ ದೃಷ್ಟಿಯಲ್ಲಿ ಅವರು ಸ್ನೇಹಿತರು. ನಮ್ಮ ದೃಷ್ಟಿಯಲ್ಲಿ ವಿರೋಧಿಗಳು. ಅವರು ಪರಸ್ಪರರಿಗೆ ವಂದಿಸುತ್ತಾರೆ. ನಾವು ಮಾತ್ರ ಒಬ್ಬರು ಶ್ರೇಷ್ಠ ಇನ್ನೊಬ್ಬರು ತಿಳಿಯದವರು ಎಂದು ವಾದಿಸುತ್ತೇವೆ. ತಿಳಿವು ಮೂಡುವವರೆಗೆ ಸತ್ಯದ ಹೊಳಹು ಆಗುವವರೆಗೆ ಇಷ್ಟು ಇದ್ದುದೇ. 'ಭಗವಚ್ಚಿಂತನ' ನಮಗೆ ವಿಶ್ವದೃಷ್ಟಿಯನ್ನೀಯುತ್ತದೆ.

ಈ ರೀತಿ ಚಿಂತನೆ ಮಾಡುವುದು, ನನ್ನ ದೃಷ್ಟಿ ಬಿಟ್ಟು, ನಿಮ್ಮ ದೃಷ್ಟಿ ಬಿಟ್ಟು ಚಿಂತಿಸುವುದು! ಶ್ರೇಷ್ಠ ಆಚಾರ್ಯರು, ತತ್ವಜ್ಞಾನಿಗಳು, ತತ್ವದರ್ಶಿಗಳು ಅವರವರ ದೃಷ್ಟಿಗಳನ್ನು ಬಿಟ್ಟು ಭಗವಂತನತ್ತ ಲಕ್ಷ್ಯಕೊಡುವುದು. ಹೀಗೆ ಭಗವಚ್ಚಿಂತನೆ ಪ್ರಾರಂಭವಾಗುತ್ತದೆ. ನೀವು ಯಾರನ್ನೇ ಒಪ್ಪಿಕೊಳ್ಳಿ. ಶಂಕರ, ಬಸವ, ಮಧ್ವ, ಸಾಕ್ರೆಟೀಸ್ ಯಾರಾದರೂ ಸರಿಯೆ. ಆದರೆ ಅಂತಿಮ ನಿಜದ ನೆನಹಿರಲಿ.

ಅಲ್ಲಮ ಮನಸ್ಸಿಗೆ ಬೋಧಿಸುತ್ತಾನೆ. ಗೊಂದಲದಲ್ಲಿರುವುದು ಮನಸ್ಸು. ತರ್ಕವಿತರ್ಕದ ಸೆಳವಿಗೆ ಸಿಕ್ಕಿದೆ. ಎಂತಲೇ ಅದಕ್ಕೆ ಆದೇಶ, ಉಪದೇಶ. 'ನೀನು ಅಲ್ಲಲ್ಲಿ ಏಕೆ ಹರಿವುದು? ವಿವಿಧ ಕಲ್ಪನಾಜಾಲದಲ್ಲಿ ಅದೇಕೆ ಸಿಕ್ಕುತ್ತೀಯೆ? ನಿನ್ನ ನಿಜವರಿ. ಅದು ಬರಿ ಜ್ಯೋತಿ. ಪರಿಪೂರ್ಣದ ನೆಲೆ. ಅಖಂಡ ಬೆಳಗು. ಅಲ್ಲಿ ನಿಲ್ಲು, ಚಿಂತಿಸು; ನಿಶ್ಚಲತೆ ಸಮನಿಸುತ್ತದೆ!'

ಬರಿ ಓದಿ, ಕೇಳಿ ಮನಸ್ಸಿಗೆ ನಿಶ್ಚಿಂತತೆ ಬರದು. ಅದು ಸದಾ ಅಸಮಾಧಾನ, ತಳಮಳ. ತನ್ನ ಮೂಲ ತತ್ವವಿಸ್ತಾರವನ್ನು ಗುರುತಿಸಿದಾಗ ಮನಸ್ಸು ಶಾಂತ! ಸುಜ್ಞಾನೋದಯ! ದಿವ್ಯ ಬೆಳಗು. ಭಗವಚ್ಚಿಂತನೆಯ ಗುರಿಯೇ ಇದು.

ಸಂತರು ಯಾವ ದೃಷ್ಟಿಯಿಂದ ನೋಡಿದ್ದಾರೆ ಅದನ್ನು ನಾವು ತಿಳಿದುಕೊಳ್ಳಬೇಕು. ಜಗತ್ತಿನ ಭಿನ್ನಭಿನ್ನವಾದ ತತ್ವದರ್ಶನಗಳ ಜ್ಞಾನ ಪಡೆಯಬೇಕು. ಕೊನೆಗೆ ಎಲ್ಲಿ ಚಿರಸಮಾಧಾನ ಸಿಗುತ್ತದೆಯೋ ಅಲ್ಲಿ ನೆಲೆ ನಿಲ್ಲಬೇಕು! ದ್ವಂದ್ವಭಾವ ಅಳಿದಿರಬೇಕು. ನಿಶ್ಚಿಂತತೆ ಅನುಭವಕ್ಕೆ ಬರುವುದು! ಯಾವ ಮತವನ್ನೂ ತಿರಸ್ಕರಿಸದಿರು. ಯಾವ ಮತದಲ್ಲೂ ಅಭಿನಿವಿಷ್ಟನಾಗದಿರು. ಎಲ್ಲವೂ ಮತಗಳೇ. ಮತ ಮೌನವಾದಲ್ಲಿ ಸತ್ಯ ದೇವರು. ಅಲ್ಲಿ ಶಾಂತಿ!

□

# ನಾ ಕಂಡ ಬಸವಣ್ಣ

ಸಿ. ಅಂಕಪ್ಪ

ನೀರಡಿಕೆಯಾಗಿರುವುದೆ? ಕುಡಿಯಲು ನೀರು ಬೇಕೆ? ಹಸಿವಾಗಿರುವುದೆ? ತಿನ್ನಲು ಅನ್ನಬೇಕೆ? ನಿದ್ರೆ ಬರುತ್ತಿರುವುದೆ? ವಿಶ್ರಮಿಸಲು ಜಾಗ ಬೇಕೆ? ಮೊದಲು ನಿನ್ನ ಜಾತಿ ಯಾವುದು ಹೇಳು? ನಮ್ಮವನಾದರೆ ಇತ್ತ ಬಾ. ನಿನಗೆ ಬೇಕಾದುದೆಲ್ಲ ಸ್ವೀಕರಿಸು. ಅಲ್ಲದಿರೆ ನೀನೇನು ಕೀಳು ಕುಲವೆ? ದೂರ ನಿಲ್ಲು. ನೀ ಕೇಳುವುದಾವುದೂ ಸಿಗದು ಎಂದು ಅವರದನ್ನು ಪಡೆಯಬೇಕಾದರೆ ಅವರ ವರ್ಣದವರು ಇದ್ದ ಕೇರಿಗೆ ಹೋಗಬೇಕಿದ್ದ ಕಾಲ. ನೀನು ಇಲ್ಲಿವರೆಗೆ ಬಂದು ನಮ್ಮ ಕೇರಿಯನ್ನು ಅಪವಿತ್ರಗೊಳಿಸಿದ್ದೀಯ? ಇದಕ್ಕಾಗಿ ನಿನಗೆ ರೌರವಾದಿ ನರಕ ಕಾದಿದೆ. ನಿನ್ನ ನೆರಳು ನಮ್ಮ ಮೇಲೆ ಬಿದ್ದರೆ ಸ್ನಾನಮಾಡಿ ಯಜ್ಞೋಪವಿತ ಬದಲಾಯಿಸಬೇಕು. ಇದು ಜಾತಿಸೂತಕ ಹಿಡಿದವರ ಅಂತರಿಕ ಸ್ಥಿತಿ.

ಜಾತಿ, ಜಾತಿ ಎತ್ತ ನೋಡಿದಡತ್ತ ಜಾತಿ, ಉಣುವಲ್ಲಿ, ಉಡುವಲ್ಲಿ, ಕೊಡುವಲ್ಲಿ, ಕೊಂಬಲ್ಲಿ, ಎಲ್ಲಿ ನೋಡಿದರೂ ಜಾತಿ. ಈ ಜಾತಿ ಭಾವನೆ ಇಷ್ಟು ಬೃಹದಾಕಾರವಾಗಿ ಬೇರು ಬಿಟ್ಟಿದ್ದಾಗ ಮೇಲೆ ಹೇಳಿದುದೆಲ್ಲ ಉತ್ತಮ ಕುಲದವರು ನಡೆದುಕೊಳ್ಳುತ್ತಿದ್ದ ರೀತಿ. ಅದೇ ಅಂದಿನ ನೀತಿ. ಹೋಯಿತು ಅದು ತಪ್ಪಿ ನಡೆದವರ ಜಾತಿ. ಹೀಗಿದ್ದ ದಿನದಲ್ಲಿ ಬಸವಾದಿಪ್ರಮಥರ ಉದಯ. ಈ ಪ್ರಮಥರು ಸಾರಿದ್ದು ಜಗತ್ತಿಗೆ "ಕುಲವೊಂದೇ ಅದು ಮಾನವ ಕುಲ"ವೆಂದು ಹೇಳಿದರು. "ಶಿವನೊಲಿದವನ ಕುಲವೇ ಸತ್ಕುಲ" ಎಂದು ಹೇಳಿದರು. ಉತ್ತಮರೆಂದು ಮೆರೆದಾಡುತ್ತಿದ್ದವರತ್ತ ತಿರುಗಿ, "ನಿಮ್ಮ ಪೂರ್ವಜರೆಲ್ಲ ಯಾವ ಯಾವ ಕುಲದವರೆಂದು" ಸಾರಿದರು. ಕೂಡಲ ಸಂಗಮದೇವ ನೊಲಿದ ಮಾನವರೆಲ್ಲ ಸೇರಿ ಒಂದು ಕಡೆ ಕೂಡಿ ಹೃದಯಗಳ ಸಂಗಮವಾದರೆ ಅದೇ ದೇವರೆಂದು. ಹೀಗೆ ಸಾರಿದ ಬಸವಣ್ಣ ತನ್ನ ವಚನಕ್ಕೆ "ಕೂಡಲಸಂಗಮದೇವ" ಎಂಬ ಅಂಕಿತವನ್ನು ಅರಿಸಿಕೊಂಡರು. ಬೇಡಿದರು. ಈ ಜಗತ್ತನ್ನೇ ನಡೆಸುತ್ತಿಹ ಚೇತನವನ್ನು,

ಇವನಾರವ, ಇವನಾರವ, ಇವನಾರವ ಎಂದೆನಿಸದಿರಯ್ಯ
ಇವನಮ್ಮವ, ಇವನಮ್ಮವ, ಇವನಮ್ಮವ ಎಂದೆನಿಸಯ್ಯ

ಎಂದು ಮತ್ತೆ ಮತ್ತೆ ಸಾರಿದರು.

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲ ಒಂದೇ ಶೌಚಾಚಮನಕ್ಕೆ;
ಕುಲವೊಂದೆ ತನ್ನ ತಾನರಿದವಂಗೆ

ಎಂದು ಇನ್ನು ಮುಂದೆ ಹೋದರು.

ಪ್ರತಿಯೊಬ್ಬರನ್ನು ಕರೆದು ಹೇಳಿದರು. ಈ ಜಾತೀಯತೆ ಭಾವನೆ ಅಳಿಯಬೇಕಾದರೆ ಲಿಂಗವೆಂಬ ಕುರುಹನ್ನು ಧರಿಸಿ ನೀನೇ ನಿನ್ನ ಕೈಯಿಂದ ಪೂಜಿಸಿ ನರಜನ್ಮವನ್ನು ಹರಜನ್ಮವಾಗಿಸಿಕೋ. ದೇಹ ದೇವಾಲಯ ಆಗಿಸಿಕೋ, ಅಲ್ಲಿ ಒಳ್ಳೆ ಯೋಚನೆಗಳನ್ನು ಮಾಡಿ ನಿನ್ನ ಶಿರವನ್ನು ಹೊನ್ನ ಕಳಸವಾಗಿಸು. ಇದಕ್ಕೆ ಮಾರ್ಗದರ್ಶನ ಬೇಕೆ? ಅದೋ ಗುರು ಇದ್ದಾನೆ ಅವನಿಗೆ ತನು ಸವೆಸಿ, ಮಾರ್ಗದರ್ಶನ ಪಡೆದು ಮುಕ್ತಿಸೋಪಾನದ ಮೆಟ್ಟಿಲನ್ನು ಹತ್ತಿ ಈ ಜನ್ಮ ಕಡೆಮಾಡಿಕೊ ಎಂದರು. ಈ ಮಾರ್ಗದರ್ಶಕನಿಗೆ ಅಷ್ಟಾವರಣದಲ್ಲಿ ಮೊದಲ ಸ್ಥಾನವನಿತ್ತರು.

ಆ ಮಾರ್ಗದರ್ಶಕನಾದರೊ ಮಮಕಾರ ತೊರೆದವನಾಗಿರಬೇಕು. ಅಂದು ಮಮಕಾರವನ್ನು ತೊರೆದ 770 ಅಮರಗಣಗಳು ವಾಸಿಸುತ್ತಿದ್ದ ಠಾವು (ಅವರಲ್ಲಿ ಬಹಳಷ್ಟು ಜನ ಸಂಸಾರಿಗಳು) ಮಠಗಳಾದವು. ಮಾನವ ಮಾನವನನ್ನು ವಿಶ್ವಾಸದಿಂದ ನೋಡಬೇಕು. ಕರುಣೆಯಿಂದ ನೋಡಬೇಕು. ಮಾನವ ಮಾನವನನ್ನ ಕಿತ್ತುತಿನ್ನುವ ರಣಹದ್ದಾಗಬಾರದು. ತನ್ನ ಕಿತ್ತು ತಿಂದರೂ ಓಡಿಸಲಾಗದೆ ಹೇಡಿಯಂತಿರುವ ಜೀವಂತ ಹೆಣಗಳೂ ಆಗಬಾರದು.

ತತ್ತ್ವಕ್ಕಾಗಿ ಹೋರಾಡಬೇಕು. ಸತ್ಪಯುತರಾಗಬೇಕು. ಧಾರ್ಮಿಕ ದಾಸ್ಯವಿಮೋಚನೆಯೇ ಮಾನವನ ಸರ್ವ ದಾಸ್ಯವಿಮೋಚನೆ ಎಂಬುದಾಗಿ ಸಾರಿ ಎಲ್ಲರನ್ನು ಹುರಿದುಂಬಿಸಿದರು.

ಶರಣರು ಮರೆಯಾದ ಮೇಲೆ ಅವರು ಸಾರಿದ ತತ್ತ್ವಕ್ಕೆ ತುಕ್ಕುಹಿಡಿಯದಂತೆ ನೋಡಿಕೊಳ್ಳಲು ಅಲ್ಲಲ್ಲಿ ಧರ್ಮಪೀಠಗಳು ಸ್ಥಾಪನೆಯಾದವು. ಹೀಗೆ ಸ್ಥಾಪನೆ ಆದ ಧರ್ಮಪೀಠಗಳೇ ಜಗದ್ಗುರು ಪೀಠಗಳು. ಇಂಥ ಪೀಠಗಳಲ್ಲಿ ಬಸವಾದಿ ಪ್ರಮಥರಿಗೆ ಹಿರಿಯ ಸಮಕಾಲೀನರಾದ ಮಾನವತಾವಾದಿ ಪವಾಡಪುರುಷರಾದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರು ಸುತ್ತೂರಿನಲ್ಲಿ ಮಠ ಕಟ್ಟಿದರು. ಚೋಳರಾಜ್ಯದ ಆಂತರಿಕ ಆಶೆಯನ್ನು ಕಿತ್ತೊಗೆದು ಸೋದರತೆಯ ಭಕ್ತಿ ಭಾವದ ಬೀಜವನ್ನು ಬಿತ್ತಿದರು. ಅಂದಿನಿಂದ ಇಂದಿನವರೆಗೆ ಈ ವೀರಸಿಂಹಾಸನ ಮಹಾಸಂಸ್ಥಾನ ಮಠವನ್ನು ಸುಮಾರು 24 ಜನ ಶ್ರೀಗಳವರು ಭಕ್ತವೃಂದವನ್ನು ಉದ್ಧರಿಸುತ್ತ ಬಂದಿದ್ದಾರೆ.

23ನೆಯವರಾದ ಗುರುತಂದೆ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರರು. ನಮ್ಮೆಲ್ಲರ ಬಾಳಿನ ಭಾಗ್ಯದೀಪ್ತಿಯಾಗಿದ್ದರು. ಅವರ ಪಡಿನೆಳಲಿನಲ್ಲಿ ಮಾತೃವಾತ್ಸಲ್ಯದ ಮಮತೆಯಲ್ಲಿ ನಾವೆಲ್ಲ ಮಿಂದು ಪುನೀತರಾಗಿದ್ದೆವು.

ಸುಮಾರು 1941ರಲ್ಲಿ ಶ್ರೀಗಳವರು ವಿದ್ಯಾರ್ಥಿನಿಲಯ ಸ್ಥಾಪಿಸಿದಂದಿನಿಂದ ನಾನು ವಿದ್ಯಾರ್ಥಿನಿಲಯದ ವಿದ್ಯಾರ್ಥಿಯಾಗಿದ್ದೆನು. ಅಂದಿನ ನನ್ನ ಸ್ಥಿತಿ ಹೇಗಿತ್ತೆಂದರೆ, ನೆನೆದರೆ ಭಯವಾಗುತ್ತದೆ.

ಶ್ರೀಮಠಕ್ಕೆ ತಲತಲಾಂತರದಿಂದ ಶಿಷ್ಯರಾಗಿ ಬಂದಿರುವ ಬಡ ರೈತ ಮನೆತನದಲ್ಲಿ ಹುಟ್ಟಿದ ನನ್ನನ್ನು ನನ್ನ ಬಂಧುಗಳೊಬ್ಬರು ಓದಿಸಿದರು. ಆದರೆ ನಾನು ಓದುತ್ತಿದ್ದಾಗಲೇ

ಅವರು ಶಿವನತ್ತ ತೆರಳಿದರು. ಇದರಿಂದಾಗಿ ನನ್ನ ಹೆತ್ತವರ ಬಳಿಗೆ ಹೋಗಿ ಸಹಾಯಕ್ಕೆ ಕೈ ಚಾಚಿದೆ. ಆದರೆ ಹೆತ್ತವರೆನ್ನ ದೂಡಿದರು. ಅದನ್ನು ವರ್ಣಿಸಿದರೆ ಇಂಥ' ತಾಯ್ತಂದೆಗಳಿರುವರೆ? ಎಂದು ಯಾರೂ ನಂಬುವಂತಿಲ್ಲ. ಪರಿಣಾಮ ನಾನು ಬೀದಿಪಾಲಾದೆ.

ತಂದೆ ತಾಯಿ ಕೈ ಬಿಟ್ಟರೂ ನನ್ನ ಗುರುತಂದೆ ಕೈಬಿಡಲಿಲ್ಲ. ಹತ್ತಿರಕ್ಕೆ ಕರೆದರು. ತಾಯಿ ವಾತ್ಸಲ್ಯ ತೋರಿದರು. ಅವರ ಕೈತುತ್ತನ್ನು ತಿಂದು ನಾನು ಬೆಳೆದೆ.

1945ರಲ್ಲಿ ಕೋರ್ಟಿನ ಬಳಿ ತೆರೆದಿದ್ದ ಕಾಲೇಜು ವಿದ್ಯಾರ್ಥಿ ನಿಲಯದಲ್ಲಿ ನಂತರ ಆಶ್ರಯ ಪಡೆದೆ. ಆ ದಿನಮಾನವನ್ನು ನಾನು ಎಷ್ಟು ಜನ್ಮ ಎತ್ತಿದರೂ ಮರೆಯುವಂತಿಲ್ಲ. ಅಂದು ಪಡಿಯಕ್ಕಿ (ರೇಷನ್) ಆದರೂ ಅದರ ಸೋಂಕು ನಮಗಿರಲಿಲ್ಲ. ಹಗಲಿರುಳೆನ್ನದೆ ಭಿಕ್ಷಾಟನೆ ಮಾಡಿ ಶ್ರೀಗಳವರು ನಮ್ಮೆಲ್ಲರ ತುತ್ತಿನ ಚೀಲ ತುಂಬಿಸುತ್ತಿದ್ದರು. ತಾವು ನೀರು ಕುಡಿದು ನಮ್ಮ ಹಸಿದ ಒಡಲನ್ನು ತುಂಬಿಸಿದರು. "ಅರೆ ಹೊಟ್ಟೆ ಉಂಡು ಮಕ್ಕಳು ಹೇಗೆ ಓದುತ್ತಾರೆ. ಪುಷ್ಕಳವಾಗಿ ಊಟ ಬಡಿಸಿ ಮಕ್ಕಳು ತೃಪ್ತಿಯಾಗಿ ತಿನ್ನಲಿ" ಎಂದು ಶ್ರೀಗಳವರು ಆದೇಶ ನೀಡಿದ್ದರು.

ಹಬ್ಬಹರಿದಿನದಲ್ಲಿ ಸ್ವತಃ ನನ್ನ ಗುರುಗಳೇ ಪಂಕ್ತಿಮಧ್ಯೆ ನಿಂತು "ನೀನು ಇನ್ನೊಂದು ಹೋಳಿಗೆ ತಿಂದರೆ ಇನ್ನೊಂದು ದೊನ್ನೆ ತುಪ್ಪ, ಇನ್ನೊಂದು ಲಾಡು ತಿಂದರೆ ಇನ್ನೊಂದು ದೊನ್ನೆ ತುಪ್ಪ" ಎನ್ನುತ್ತಿದ್ದರು. ಹೀಗೆ ಹಠಕಟ್ಟಿ ತಿಂದು ತುಪ್ಪ ಕುಡಿಯುತ್ತಿದ್ದವರೆಂದರೆ ನಾನು ಮತ್ತು ಮಹಂತದೇವರೆಂಬ ಇನ್ನೊಬ್ಬ ವಿದ್ಯಾರ್ಥಿ." ಯಾವ ತಾಯಿಯೂ ಕೂಡ ತಾನು ಹೆತ್ತ ಮಕ್ಕಳಿಗೆ ಈ ರೀತಿ ಉಣಬಡಿಸಿದವಳಲ್ಲ. ಅಂಥ ಮಾತೃಹೃದಯದ ತಂದೆ ಶಿವರಾತ್ರಿ ರಾಜೇಂದ್ರರು.

ನನ್ನ ವಿದ್ಯಾಭ್ಯಾಸ ಮುಗಿದ ನಂತರ ನನಗೆ ರೈಲ್ವೆಯಲ್ಲಿ ಕೆಲಸ ಸಿಕ್ಕಿತು. ನಾನು ಬೆಳೆದಂತೆ ಶ್ರೀಗಳವರ ಸಂಸರ್ಗವೂ ಹೆಚ್ಚಿತು. ನಾಟಕದ ಆಸಕ್ತಿ ಇದ್ದ ನನಗೆ ಸಂಪೂರ್ಣ ಪ್ರೋತ್ಸಾಹ ನೀಡುತ್ತಿದ್ದರು. ನನ್ನ ಪಾಲಿಗೆ ಅವರೆನ್ನ ಕುಲದೈವ, ಮನೆದೈವವಾಗಿದ್ದರು, ಬಸವಣ್ಣನೇ ಆಗಿದ್ದರು.

1968ರಲ್ಲಿ ನನ್ನ ಹಿರಿಯ ಮಗಳ ವಿವಾಹವಾಯಿತು. ಆ ಸಂದರ್ಭದಲ್ಲಿ ಶ್ರೀಗಳವರಿಗೆ ಲಗ್ನಪತ್ರಿಕೆ ಕೊಡಲು ಹೋದೆ. ನಮಿಸಿ ನಿಂತೆ. ತಾವು ದಯಮಾಡಿಸಬೇಕೆಂದು ಆಹ್ವಾನಿಸಿದೆ. ಸರಿ ನನ್ನಿಂದೇ ನಾದರೂ ಸಹಾಯ ಬೇಕೆ? ಎಂದರು. ತಾವು ದಯಮಾಡಿಸಿ ಬುದ್ಧಿ ಸಾಕು" ಎಂದೆ. ಆದರೆ ಅವರಿಗೆ ಈ ಮಗನ ಸ್ಥಿತಿ ತಿಳಿದಿತ್ತು.

"ಪೆದ್ದ ನಿನ್ನ ಸ್ಥಿತಿ ನನಗೆ ಗೊತ್ತು, ಮನೆ ತುಂಬ ಊರವರ ಮಕ್ಕಳನ್ನು ಓದಿಸ್ತಿದೀಯ? ಮದುವೆ ಹೇಗೆ ಮಾಡ್ತೀಯಾ?" ಎಂದರು.

"ಬುದ್ಧಿ ನನ್ನ ಬಳಿ ತಾವು ಕೊಟ್ಟ ಶಿವರಾತ್ರಿ ರಾಜೇಂದ್ರ ಎಂಬ ಜೋಳಿಗೆ ಇದೆ. ಅದು ಅಕ್ಷಯದ ಜೋಳಿಗೆ. ಅದು ಸದಾ ತುಂಬಿರುವಾಗ ನನಗೇಕೆ ಚಿಂತೆ ಬುದ್ದಿ" ಎಂದು ನಮಿಸಿ ನಿಂತೆ.

ಆಗ ಶ್ರೀಗಳವರನ್ನು ಕಂಡಾಗ "ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ ಎಂಬ ರೀತಿ ಬೇಡು ಬೇಡಲೆಹಂದೆ, ನೀಡಿದರೆ ತಲೆದಂಡ" ಎಂಬ ಅಣ್ಣನವರಂತೆ ಕಂಡರು. ನಾನು ಬೇಡಿದುದು ಅವರು ದಯಮಾಡಿಸಬೇಕೆಂದು, ಅದನ್ನವರು ಕೊಟ್ಟರು. ಅಂದರೆ ಮದುವೆಗೆ ಆಗಮಿಸಿ ವಧುವರರನ್ನು ಹರಸಿ ಕೃತಾರ್ಥರನ್ನಾಗಿಸಿದರು.

1974ರಲ್ಲಿ ನನ್ನ ಮಗಳ ಆರೋಗ್ಯ ಹದಗೆಟ್ಟಿತು. ಬಾಲ್ಯದಿಂದಲೂ ಶ್ರೀರಕ್ಷೆ ಅವಳಿಗೆ ದೊರಕಿತ್ತು. ಈ ಬಾರಿ ಅವಳ ಸ್ಥಿತಿ ಹೇಳುವಂತಿರಲಿಲ್ಲ. ಶ್ರೀಗಳವರ ಬಳಿ ಹೋದೆ, ಅವಳನ್ನೂ ಕರೆದೊಯ್ದೆ. ಶ್ರೀಗಳವರು "ಅಯ್ಯೋ ಯಾಕೀಗೆ ಆಯ್ತು, ಬಿಡು ಅಂಕಪ್ಪ ಅವಳನ್ನು ನನಗೆ ಒಪ್ಪಿಸು ಅವಳಿನ್ನು ನನ್ನ ಮಗಳು. ನೀನು ಉಳಿದ ಮಕ್ಕಳ ಕಡೆ ಗಮನ ಕೊಡು" ಎಂದು ನನ್ನ ಮಗಳಿಗೆ ಧೈರ್ಯ ತುಂಬಿದರು. ಅವಳನ್ನು ಓದಿಸಿ ಅವಳಿಗೆ ಉದ್ಯೋಗ ಕೊಟ್ಟರು. ನಾನು ಅಷ್ಟರ ಮಟ್ಟಿಗೆ ನೋಡಿಕೊಳ್ಳಲಾಗುತ್ತಿತ್ತೊ ಇಲ್ಲವೊ ಅಂಥ ತಾಯಿ ಮಡಿಲಿನ ತಂಪನ್ನಿತ್ತು ಸಲಹಿದರು.

ನನ್ನ ಕಷ್ಟ ಸುಖಗಳಿಗೆ ಸ್ಪಂದಿಸಿದರು. ನನ್ನ ಆಶಯಕ್ಕೆ ನೀರೆರೆದರು. ನನ್ನಿಂದ ರಚನೆಗೊಂಡ ನಾಟಕಗಳನ್ನು ಓದಿ ನೋಡಿ ಹರ್ಷಿಸಿದರು. "ಶಿವರಾತ್ರೀಶ್ವರ ಕಲಾ ಮಂಟಪ"ದ ಮೂಲಕ ನನ್ನ ಹೆಸರು ಉಳಿಯುವಂತೆ ಹಾರೈಸಿದ ನನ್ನ ಪಾಲಿನ ಬಸವಣ್ಣನವರೇ ಅವರು.

ನಿವೃತ್ತನಾದ ನಂತರ ನಾನು ಪಾರ್ಕಿನ್‌ಸನ್ ಕಾಯಿಲೆಯಿಂದ ಬಳಲುತ್ತಿದ್ದೆ. ಮಠಕ್ಕೆ ಹೋದಾಗಲೆಲ್ಲ ನನ್ನಲ್ಲಿ ಧೈರ್ಯವನ್ನು ತುಂಬುತ್ತಿದ್ದರು. ಜುಲೈ ಆಗಸ್ಟ್ ತಿಂಗಳಿನಲ್ಲಂತು ಬಿಡುವಿಲ್ಲದ ಕೆಲಸದ ಮಧ್ಯದಲ್ಲಿ ನನ್ನ ಕರೆಯಿಸಿ ಹೇಗಿದ್ದೀಯ? ಎಂದೆಲ್ಲ ಆರೋಗ್ಯದ ಬಗ್ಗೆ ವಿಚಾರಿಸಿ ನೆಮ್ಮದಿ ನೀಡುತ್ತಿದ್ದರು.

ಅದೊಂದು ದುರ್ದಿನ ಎನ್ನದೆ ವಿಧಿಯಿಲ್ಲ. ಅಂದು 6-12-1986 ಶನಿವಾರ ಸ್ನಾನ ಮುಗಿಸಿಕೊಂಡು ಹೊರ ಬರುತ್ತಿದ್ದಂತೆಯೇ ನನ್ನ ಆಕೆ ಅಳುತ್ತಾ ನಿಂತಿದ್ದಳು. ಬಿಕ್ಕುತ್ತಾ "ಬುದ್ಧಿಯವರು" ಎಂದಾಗ ಬೆಪ್ಪಾಗಿ ಹೋದೆ. ಶರಟು ಹಾಕಿಕೊಳ್ಳುತ್ತಾ ಮಠದತ್ತ ನಡೆದೆ. ಅದೋ ಪೊಲೀಸರ ತಂಡ ಜನರನ್ನು ನೋಡಿ ನಡೆಯಬಾರದ್ದು ನಡೆದೆಹೋಗಿದೆ ಅಂದುಕೊಂಡೆ. ಯಾವುದನ್ನು ನಾನು ಕನಸು ಮನಸ್ಸಿನಲ್ಲಿಯೂ ನೆನೆಸಿರಲಿಲ್ಲವೋ ಅದು ಆಗಿ ಹೋಯಿತು. ಯಾರು ನನ್ನಂತಹ ಲಕ್ಷ ಲಕ್ಷ ಜನಕ್ಕೆ ಸ್ವತಂತ್ರವಾಗಿ ಬಾಳುವುದನ್ನು ಕಲಿಸಿದ್ದರೋ ಅವರಿಲ್ಲ. ಇದನ್ನು ನಂಬುವುದಾದರೂ ಹೇಗೆ? ಶಿವಾ... ಶಿವಾ ಇದು ಸುಳ್ಳಾಗಲೀ ಎಂದು ನೂರು ಸಲ ಕೇಳಿಕೊಂಡೆ. ಕ್ಯೂನಲ್ಲಿ ನಿಂತು ಶ್ರೀಗಳ ದರ್ಶನ ಪಡೆಯುವ ನನ್ನ ಸರದಿ ಬಂತು. ಪಾದಕ್ಕೆರಗಿ ಕೈ ಮುಗಿದು ನಿಂತೆ. ಕಳೆದ 44 ವರ್ಷಗಳಿಂದಲೂ ಹೋಗಿ ನಮಸ್ಕರಿಸಿ ಎದ್ದೊಡನೆ "ಹುಷಾರಾಗಿದ್ದೀಯಾ" ಎಂಬ ಪ್ರಶ್ನೆಯೇ ಬರುತ್ತಿದ್ದು ಮಾಮೂಲಿನಂತೆಯೇ ಕೈ ಮುಗಿದು ನಿಂತು ಗುರುವಿನತ್ತ ನೋಡಿದೆ. ಅಂದು ಆ ಪ್ರಶ್ನೆ ಬರುವುದೆಂಬ ಭ್ರಾಂತು. ಪೊಲೀಸಿನವರು ಮುಂದಕ್ಕೆ ನಡೆ ಎಂದಾಗ ಎಚ್ಚರವಾದೆ. ಅದೇ ಸೌಮ್ಯ ಮುಖದ

ಮೂರ್ತಿ ಮಲಗಿದೆ. ಮಾತಿಲ್ಲ. ಯಾರೂ ನನ್ನ ಭಾಗದ ದೇವರು, ಯಾರು ನನ್ನ ತಪ್ಪುಗಳನ್ನು ಕ್ಷಮಿಸಿದರೋ ಅವರಿಲ್ಲ ಎಂಬುದಾದರು ಎಂತು. "ನೀ ಸತ್ತಾಗ ನಿನ್ನ ತಲೆಯ ಮೇಲೆ ನಾನೇ ಪಾದ ಇಡುತ್ತೀನೆಂದಿದ್ದೀರಲ್ಲ. ಅದನ್ನು ಮರೆತು ಹೊರಟುಹೋಗಿದ್ದೀರಲ್ಲ ಬುದ್ಧೀ" ಎಂದು ಕೂಗಬೇಕೆನಿಸಿತು, ತಕ್ಷಣ ಸಾವರಿಸಿಕೊಂಡೆ. ಕೂಗಿದರೆ ತಾನೇ ಉತ್ತರ ಕೊಡುವವರ್ಯಾರು? ನಮ್ಮಂತಹ ದೀನರಿಗೆ ಓಗೊಡುತ್ತಿದ್ದ ದೊರೆ ಇನ್ನಿಲ್ಲ ಎನ್ನುತ್ತ ಮುಂದಕ್ಕಡಿ ಇಟ್ಟೆ. ಹೊರಬಂದು ಮಠದ ಆವರಣದಲ್ಲಿಯೇ ಇರುವ ಹೊಂಗೆ ಮರದಡಿ ನಿಂತು ಯೋಚಿಸಿದೆ.

ನಲವತ್ತನಾಲ್ಕು ವರ್ಷಗಳ ಹಿಂದೆ ನಾನು ಯಾರ ಮನೆಯಲ್ಲಿ ಕೆಲಸ ಮಾಡಿಕೊಂಡು ಓದುತ್ತಿದ್ದೆನೋ ಅವರು ಹೊರಗಟ್ಟಿದ್ದರು.

ನನ್ನವರು ಯಾರಿಲ್ಲ ತಿನ್ನುವುದಕ್ಕೇನಿಲ್ಲ
ನನ್ನ ಹಾಸಿಗೆ ಭೂಮಿ ನನ್ನೊದಿಕೆ ಬಾನು
ಇನ್ನೇನು ಇಲ್ಲ ಕಲಿರಾಯ
ಹೀಗಿದ್ದ ದಿನದಂದು ಕೂಗಿದನು ಗುರುದೇವ
ಬೇಗ ಬಾ ನೀನಿತ್ತ ನಿನ್ನೋದ ಮುಗಿಸು
ಹೀಗೆಂದನವನು ಕಲಿರಾಯ.

ಅಂದು ನನ್ನವರೆನ್ನಿಸಿಕೊಂಡವರು ಯಾರಿರಲಿಲ್ಲ. (ಆಮೇಲೆ ನಾನು ದುಡಿಯಲು ಪ್ರಾರಂಭಿಸಿದಾಗ ಅದೆಷ್ಟೋ ಜನ ನನ್ನವರು ಅದನ್ನು ಹೇಳದಿರುವುದೇ ಮೇಲು) ಆದರೆ ಶ್ರೀಗುರುತಂದೆ ಸುತ್ತೂರಿ ನೊಡೆಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಗಳವರು ನನ್ನ ಸರ್ವಸ್ವ ಎಂದರೇ ಉತ್ಪ್ರೇಕ್ಷೆಯಿಲ್ಲ.

ಹಿಂದು ಮುಂದಿಲ್ಲದೆನಗೆ ತಂದೆ ತಾಯಿಯು ಅವನೆ
ಬಂಧು ಬಳಗವು ಅವನೇ ನನ್ನನ್ನು ಪೊರೆದ
ಇಂದುಧರನವನೆ ಕಲಿರಾಯ

ಹಾಗೆಯೇ ಮುಂದಿನ ದಿನಗಳನ್ನು ನೆನೆಸಿಕೊಳ್ಳಲು ಪ್ರಾರಂಭಿಸಿದೆ. ಅದೇ ಹಾಸ್ಟೆಲ್ಲಿನಲ್ಲಿದ್ದಾಗ ಅಲ್ಲಿಗೂ ಆಗಾಗ್ಗೆ ಬಂದು ಎಲ್ಲರನ್ನು ವಿಚಾರಿಸಿಕೊಳ್ಳುತ್ತಿದ್ದ ರೀತಿ "ನೀನು ಕಷ್ಟಪಟ್ಟು ಚೆನ್ನಾಗಿ ನಂಬರು ತೆಗಿ, ಫೀಸು ಪುಸ್ತಕಗಳಿಗೆ ಚಿಂತಿಸಬೇಡ" ಎಂದು ಹೇಳಿ ನಮ್ಮೆದೆಯಲ್ಲಿ ತುಂಬುತ್ತಿದ್ದ ಧೈರ್ಯ, ಕ್ವಿಟ್ ಇಂಡಿಯಾ ಚಳುವಳಿಯ ಸಮಯದಲ್ಲಿ ಕಾಲೇಜಿಗೆ ಬಹಿಷ್ಕಾರ ಹಾಕಿ ಚಳವಳಿಯಲ್ಲಿ ಭಾಗವಹಿಸಿದಾಗ ಅವರಿತ್ತ ಉತ್ತೇಜನ, ಹಬ್ಬಹರಿದಿನಗಳಲ್ಲಿ ಒಬ್ಬಟ್ಟು, ಲಾಡು ಮಾಡಿಸಿ ಪಂಕ್ತಿಯ ಮಧ್ಯಕ್ಕೆ ನಿಂತು "ಅವನಿಗೆ ಇನ್ನೊಂದು ಹಾಕು ಇವನಿಗೆ ಮರೆತೆಯಲ್ಲಾ" ಎಂದು ಬಡಿಸಿ ಅವನನ್ನು ಎಚ್ಚರಿಸುತ್ತಿದ್ದ ರೀತಿ ಎಲ್ಲವೂ ಕಣ್ಮುಂದೆ ಹಾಯ್ದುಹೋಗಲಾರಂಭಿಸಿದವು.

ಅದೋ ಫೀಸು ಕಟ್ಟುವುದಕ್ಕೆ ಹಣವಿಲ್ಲವೆಂದು ಕೈವೊಡ್ಡಿ ನಿಂತಾಗ ಫೀಸಿತ್ತು ಯಾರೊಂದಿಗೂ ಹೇಳಬೇಡ ಎನ್ನುತ್ತಿದ್ದಂತೆಯೇ ನಿನ್ನ ಬಲಗೈ ಮಾಡಿದ ದಾನ ಎಡಗೈ

ತಿಳಿಯದೇ ಇರಲಿ ಎಂದ ದೇವರ ಮಗನ ಪ್ರತಿಬಿಂಬ ಹೊಗಳುತ್ತಾ ಬಂದವನನ್ನು ತೆಗಳುತ್ತಾ ಬಂದವನನ್ನು ಒಂದೇ ರೀತಿ ನಗುನಗುತ್ತಾ ಸ್ವಾಗತಿಸಿ ಹರಸುತ್ತಿದ್ದ ಆ ಗುರು ನಿಜಕ್ಕೂ ಇವರು ಜಗದ ಗುರುವೆ.

ಬಡ ವಿದ್ಯಾರ್ಥಿಗಳ ಕಷ್ಟವನ್ನು ಬಿಡಿಯಾಗಿ ಕೇಳಿ ಅದಕ್ಕೆ ಪರಿಹಾರ ಸೂಚಿಸಿ ಚೆನ್ನಾಗಿ ಓದೆಂದು ಎಚ್ಚರಿಸುತ್ತಿದ್ದ ಕರುಣಾಳು. ಜಾತಿ ಕುಲ ಯಾವುದನ್ನು ಎಣಿಸದೆ ಕಷ್ಟದಲ್ಲಿರುವ ಪ್ರತಿಯೊಬ್ಬರಿಗೂ ಸಹಾಯವಿತ್ತು ಅವರ ಕಾಲ ಮೇಲೆ ನಿಂತಿದ್ದನ್ನು ನೋಡಿ ಆನಂದಿಸಿದ ಮಾನವತಾವಾದಿ. ರಾತ್ರಿ ಮಲಗುವಾಗ ಹರಿದ ಬಟ್ಟೆಯನ್ನು ಹೊಲಿದು ಹಾಕಿಕೊಂಡು ಜನರೆದುರು ಬರುವಾಗ ಒಳ್ಳೆಯ ಬಟ್ಟೆಯನ್ನು ಧರಿಸಿ ಎಲ್ಲರಿಗೂ ಒಳ್ಳೆಯ ಊಟವಿತ್ತು ತಾವು ಸಾಮಾನ್ಯ ಊಟದಲ್ಲಿಯೇ ತೃಪ್ತಿಪಟ್ಟು ಒಂದೊಂದು ಕಾಸನ್ನು ಮಿಗಿಸಿ ಇಷ್ಟೊಂದು ಸಂಸ್ಥೆಗಳನ್ನು ಕಟ್ಟಿದ ತ್ಯಾಗಿ. ಇಷ್ಟು ಸಂಸ್ಥೆಗಳನ್ನು ಕಟ್ಟಿದ್ದರೂ ಯಾವುದೂ ತಮ್ಮವಲ್ಲ ಎಲ್ಲವೂ ಶಿವರಾತ್ರೀಶ್ವರನವು ಶಿವನವು ಎಂದ ಸಮಾಜವಾದಿ.

ಬಡವರನ್ನು ಧನಿಕರ ಸಮಕ್ಕೇರಿಸಬೇಕೆಂಬ ಹಗಲಿರುಳು ಯೋಚಿಸಿದ ಸಮತಾವಾದಿ. ಒಂದು ನಿಮಿಷವೂ ಬಿಡುವಿಲ್ಲದೆ ಪ್ರತಿ ಸಂಸ್ಥೆಯ ಭೇಟಿ ಮತ್ತು ಅವು ಹೇಗೆ ನಡೆಯುತ್ತಿದೆ ಎಂದು ವೀಕ್ಷಿಸುವುದರ ಜೊತೆಗೆ ಮುಂದೆಲ್ಲಿ ಸಂಸ್ಥೆಗಳ ತೆರೆಯುವುದು ಯಾವ ರೀತಿಯದು ಇದರಿಂದ ಜನರಿಗೆ ಉಪಕಾರವಾಗುವುದೇ ಈ ದಿಸೆಯಲ್ಲಿ ಸದಾ ದುಡಿದ ಕಾಯಕವಾದಿ.

"ಅಯ್ಯೋ! ಆ ನನ್ನ ತಂದೆ ಇಂದಿಲ್ಲ ಎಂದಿತು ಮನ. ಮುಂದೆ ಬರುವುದೆಂದು ಎಂದಾಗ ಶತಶತಮಾನಗಳೇ ಉರುಳಬೇಕೆಂಬ ಉತ್ತರ ಬಂತು. ಪ್ರಶ್ನೆ ಉತ್ತರಗಳೆರಡನ್ನು ನೆನೆದು ಮನ ನಡುಗಿತು. ಶತಮಾನಗಳಳಿದರೂ ಶತಮಾನಗಳು ಉಳಿದರೂ ನಂದದ ಜ್ಞಾನದೀಪವನ್ನು ಹೊತ್ತಿಸಿದ ಜ್ಞಾನದೀವಿಗೆ ಅಕ್ಷರ ಬೀಜವ ಬಿತ್ತಿ ಸಂಸ್ಕಾರದ ನೀರನ್ನೆರೆದ ನಮ್ಮೆಲ್ಲರಿಗೂ ಬಾಳನ್ನಿತ್ತವ, ಸಮಾಜದ ಸರ್ವರನ್ನು ಸಮತೆ ದೃಷ್ಟಿಯಲ್ಲಿ ನೋಡಿದ ಸಮಾಜದ ದ್ರಷ್ಟಾರ, ಜಾತೀಯತೆಗೆ ಬಾರುಕೋಲಿನ ಪೆಟ್ಟಿತ್ತು ಎಲ್ಲರನ್ನು ಅಪ್ಪಿದವ ಒಪ್ಪಿದವ. ಈ ಯುಗದ ಯುಗಪುರುಷನಾಗಿ ಮೆರೆದ ಈ ಯುಗದ ಬಸವಣ್ಣ ನನ್ನ ತಂದೆ ಶಿವರಾತ್ರಿ ರಾಜೇಂದ್ರರು".

ಎತ್ತೆತ್ತ ನೋಡಿದಡೆ ಅತ್ತತ್ತ ಶಿವರಾತ್ರಿ ರಾಜೇಂದ್ರರೆಂಬ ಬಳ್ಳಿ
ಎತ್ತಿ ನೋಡಿದರೆ ವಿದ್ಯಾಸಂಸ್ಥೆ ಪ್ರಸಾದನಿಲಯಗಳೆಂಬ ಗೊಂಚಲು;
ಒತ್ತಿ ಹಿಂಡಿದಡೆ ಜ್ಞಾನವೆಂಬ ರಸವಯ್ಯ;
ಇಂದೆಮ್ಮ ನಾ ಗುರುದೇವ ಬೆಳಸಿದನಯ್ಯ, ಉಳಿಸಿದನಯ್ಯ;
ಅವನ ಶ್ರೀಪಾದಕ್ಕೆ ನಮೋ ನಮೋ ಎಂದು ಬಾಗಿದ ತಲೆ
ಮುಗಿದ ಕೈಯ್ಯಾಗಿ ನಿಂತೆನಯ್ಯ

**ಕೃಪೆ : 'ಘನ–ಮನ' (ಜೆಎಸ್ಎಸ್ ಗ್ರಂಥಮಾಲೆ ಪ್ರಕಟಣೆ)**

# ಶಬರಶಂಕರ ವಿಲಾಸ ಟೀಕು : ತೃತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

**ಕಂ॥** ಶ್ರೀಮದಗಪತಿಸುತಾಮುಖ ।
ತಾಮರಸಾಮೋದಭೃಂಗನಮಿತ ಕೃಪಾಂಗ ॥
ಸಾಮಜಹರನಾನತಜನ ।
ತಾಮರತರುಮಾಳ್ಕೆಸೌಖ್ಯಮಂ ಶಿವಲಿಂಗಂ ॥

**ಟೀಕ ॥** ಶ್ರೀಮತ್ – ಸಂಪತ್ತುಳ್ಳ, ಅಗಪತಿಸುತಾ – ಪರ್ವತರಾಜಪುತ್ರಿಯ, ಮುಖತಾಮರಸ – ಮೊಗವೆಂಬ ತಾವರೆಯ, ಆಮೋದ ಪರಿಮಳಕ್ಕೆ – ಭೃಂಗ ಪರಿಮಳಕ್ಕೆ, ಆರಡಿಯಾಗಿಯು, ನಮಿತ – ತನಗೆ ನಮಸ್ಕಾರ ಮಾಡುವ ಭಕ್ತರ ವಿಷಯದಲ್ಲಿ, ಕೃಪಾಂಗಂ –ದಯಾಮೂರ್ತಿಯಾಗಿಯೂ, ಸಾಮಜಹರಂ – ಗಜಾಸುರನ ಕೊಂದವನಾಗಿಯೂ, ಆನತಜನತಾ – ತನಗೆ ನಮಸ್ಕಾರ ಮಾಡುವ ಭಕ್ತಜನರ ಗುಂಪಿಗೆ, ಅಮರತರು–ಕಲ್ಪವೃಕ್ಷನಾಗಿಯೂ, ಇರುವ ಶಿವಲಿಂಗಂ – ಶುಭವೆ ಚಿಹ್ನವಾಗಿ ಉಳ್ಳ ಪರತತ್ವವು, ಸೌಖ್ಯಮಂ – ಸುಖವನ್ನು, ಮಾಳ್ಕೆ – ಮಾಡಲಿ ॥ ಆಶೀರಾತ್ಮಕ ಮಂಗಳವು. ಆದಿಯೊಳು ಶ್ರೀಶಬ್ದ ಪ್ರಯೋಗದಿಂದ ಗಣಲಿಪಿ ದೋಷಮಿಲ್ಲದಿರ್ಕುಂ ॥ ೧ ॥

ವೃ ॥ ದೇವನ ಬೇಟೆಯುಜ್ಜುಗದ ಸಬ್ಬವಕಾರರ ಡಿಂಡಿಮಾರವಂ ।
ತೀವಿದುದಾಮಹಾಕಟಕದೋಳ್ಪುರದುಂದುಭಿ ನಿಕ್ವಣಾನ್ವಿತಂ ॥
ಭಾವದೊಳುತ್ಸವಂ ನೆಗಳ್ದುದಲ್ಲಿ ಗಣಾಳಿಗೆ ಸಂಭ್ರಮಂ ಪೊದ ।
ಳ್ದಾವರಿಸಿದ್ದುದಗ್ಗದಮರರ್ಗದನೂಹಿಸಲಾರ್ಗೆ ಗೋಚರಂ ॥ ೨ ॥

**ಟೀಕ ॥** ದೇವನ – ಶಿವನ ಬೇಟೆಯು, ಉಜ್ಜುಗದ – ಉದ್ಯೋಗದ, ಸಬ್ಬವಕಾರರ – ಸೇವಕರ, ಡಿಂಡಿಮಾರವಂ – ಡೋಲಿನ ಧ್ವನಿಯು, ಸುರದುಂದುಭಿ ನಿಕ್ವಣಾನ್ವಿತಂ – ದೇವಭೇರೀವಾದ್ಯ ಧ್ವನಿಯಿಂದ ಕೂಡಿದುದಾಗಿ, ಆ ಮಹಾಕಟಕದೋಳ್ – ಆ ದೊಡ್ಡ ಬೆಟ್ಟದ ಜರಿಯಲ್ಲಿ, ತೀವಿದುದು – ತುಂಬಿತು, ಅಲ್ಲಿ ಗಣಾಳಿಗೆ – ಪ್ರಮಥಗಳ ಪಂಕ್ತಿಗೆ, ಭಾವದೊಳು – ಬಗೆಯಲ್ಲಿ, ಉತ್ಸವಂ – ಸಂತೋಷವು, ನಗಳ್ದುದು – ಹೆಚ್ಚಿತು, ಅಗ್ಗದ – ಅಧಿಕಾರದ, ಅಮರರ್ಗೆ – ದೇವತೆಗಳಿಗೆ, ಸಂಭ್ರಮಂ – ಉಲ್ಲಾಸವು, ಪೊದಳ್ದು – ಹರಡಿಕೊಂಡು, ಆದರಿಸಿ, ಮುಚ್ಚಿಕೊಂಡು, ಇರ್ದುದು ಅದನು – ಅದನ್ನು,

ಊಹಿಸಲ್ – ತರ್ಕಿಸುವದಕ್ಕೆ, ಆರ್ಗೆ – ಯಾರಿಗೆ, ಗೋಚರಂ – ತೋರುವದು ॥

**ತಾ ॥** ಶಬರಶಂಕರನು ಬೇಟೆಗೆ ಹೋದಾಗ ಸೇಕರ ಪ್ರಯಾಣ ವಾದ್ಯಧ್ವನಿಯು – ದೇವತೆಗಳ ಸಂತೋಷ ಭೇರಿಧ್ವನಿಯಂ ಕೂಡಿ, ಅತಿಶಯವಾಗುತಲೂ, ಶಿವಗಣಂಗಳ ಸಂತೋಷವು ದೇವರ್ಕಳೀಗುಲ್ಲಾಸವು ಹೆಚ್ಚಿತು. ಅದರ ಕಾರಣವನ್ನು ಯಾರು ತಿಳಿಯಲಾರದಿದ್ದರು ॥ ೨ ॥

ಮತ್ತಮಾಗಳ್ ॥ ವೃ ॥ ಜಡೆಗಳ ಬಂಬಲೇ ತಲೆದಳಿರ್ಪಣಿ ಸುತ್ತಿದಬಳ್ಳಿ ತಾಳ್ದ ಬಾಂ ।
ಗಡಲದು ಪುಷ್ಪಮಾಲೆ ಗರಿವೂಗಿರಿತೇಳದವೆರ ಬಗ್ಗ ಬಸಮ್ಮದೊ ॥
ಳ್ದುಡಿ ಪೊಸೆಚಲ್ಲಣಂ ಕರಿಯಕುಪ್ಪಸ ಮಾನೆಯ ಕೃತ್ತಿಯಂಗ ದೋ ।
ಳ್ತೊಡೆದ ವಿಭೂತಿಯುದ್ಗಮಪರಾಗವಿಲೇಪನಮಗ್ನಿಲೋಚನಂ ॥ ೩ ॥

**ಟೀಕ ॥** ಜಡೆಗಳ ಬಂಬಲೆ – ಜಟಾಜೂಟವೆ, ತಲೆದಳಿರ್ – ತಲೆಗಿಟ್ಟ ತಳಿರ ಟೊಪ್ಪಿಗೆಯು, ಫಣೀ ನಾಗಭೂಷಣವೆ ಸುತ್ತಿದ ಬಳ್ಳಿ – ತಲೆಗೆ ಸುತ್ತಿದ ಬಳ್ಳಿಯು, ತಾಳ್ದ ಬಾಂಗಡಲದು – ಧರಿಸಿಯಿದ್ದ ಗಂಗೆಯೆ, ಪುಷ್ಪಮಾಲೆ – ಹೂವಿನದಂಡೆಯು, ತೇಳ್ವೆರ – ಬಾಲಚಂದ್ರನೆ, ಗರಪೂಗರಿ – ಕಂಚವಾಳದ ಹೂವಿನ ಎಸಳಾಗಿಯೂ, ಬಗ್ಗಸಮ್ಮದ – ವ್ಯಾಘ್ರಸಮ್ಮದ, ಓಳ್ದು – ಒಳ್ಳೆ ಉಡಿಗೆಯೇ, ಪೊಸ ಚಲ್ಲಣಂ – ಹೊಸತಾದ ಚಲ್ಲಣವು, ಆನೆಯ ಕೃತ್ತಿ – ಆನೆಯ ಚರ್ಮವು, ಕರಿಯ ಕುಪ್ಪಸಂ – ಕಪ್ಪು ತೊಡಿಗೆಯು, ಅಂಗದೋಳ್ – ಮೈಯಲ್ಲಿ, ತೊಡೆದ – ಲೇಪಿಸಿದ, ವಿಭೂತಿ – ಭಸಿತವೇ, ಉದ್ಗಮಪರಾಗಮ ವಿಲೇಪನಂ – ಅಂಗರಾಗವು, ಅಗ್ನಿಲೋಚನಂ – ಉರಿಗಣ್ಣಿಂ ಆಗಿರಲು ಇದು ಕುಳಕಂ ॥ ೩ ॥

ಕಂ॥ ಗೈರಿಕಲಲಾಮಂಹಿಪ ।
ಸ್ಫಾರ ಫಣಾರತ್ನರಾಜಿಗುಂಜಾಭರಣಾ ॥
ಸಾರಪಿನಾಕಂ ಪದೆವಿ ।
ಲ್ಕೂರಂಬೆಸವಾತ್ಮಶಕ್ತಿ ತನಗೊಪ್ಪುವಿನಂ ॥ ೪ ॥

**ಟೀಕ ॥** ಗೈರಿಕಲಲಾಮಂ – ಕಾವಿಯ ಹಣೆಬೊಟ್ಟು, ಹಗೆಯೂ, ಅಹಿಪ ಸ್ಫಾರ ಫಣಾರತ್ನರಾಜ – ಅಹಿಪ ಆದಿಶೇಷನ, ಸ್ಫಾರ – ವಿಸ್ತಾರವಾದ, ಫಣಾ – ಹೆಡೆಗಳ, ರತ್ನ ಮಣಿಗಣ – ರಾಜಿ ಸಾಲಿಪ, ಗುಂಜಾಭರಣಂ – ಗುಲುಗುಂಜಿಯ ತೊಡವು, ಸಾರಪಿನಾಕಂ – ಸಾರಬಲಿಷ್ಠವಾದ, ಪಿನಾಕಂ – ಪಿನಾಕವೆಂಬ ಶಿವಕೋದಂಡವೆ, ಪದವಿಲ್ – ಹಿಡಿದ ಬಿಲ್ಲು, ಆತ್ಮಶಕ್ತಿ, ಆತ್ಮಸ್ವರೂಪದ – ಶಕ್ತಿ ಸಾಮರ್ಥ್ಯರೂಪನಾದ ವಿಷ್ಣುವೇ, ಕೂರಂಬು – ಕ್ರೂರವಾದ ಬಾಣವಾಗಿಯೂ, ತನಗೆ ಒಪ್ಪುವಿನಂ – ಹೊಂದುವ ಹಾಗೆ ॥

**ತಾ ॥** ಮೂರು ನಾಲ್ಕನೆಯ ಪದ್ಯಗಳು ಏಕಾನ್ವಯವಾದದರಿಂದ ಕುಳಕವೆನಿಸುವದು.

ಶಿವಶಂಕರನ ಜಟಾಜೂಟವೇ ಶಬರಶಂಕರನಿಗೆ, ತಲೆದಳಿದುರಾಯಿತು. ಈಮೇರೆ ನಿಜರೂಪದೊಳಗಿದ್ದ ನಾಗಾಭರಣ, ಗಂಗೆ, ಚಂದ್ರ ಮೊದಲಾದವು ಶಬರವೇಷಕ್ಕೆ ತಕ್ಕ ಅಲಂಕಾರಗಳಾಗಿ ಪರಿಣಮಿಸಿ ತೋರುತಲಿರ್ದವೆಂದು ಭಾವವು. ರೂಪಕಾಲಂಕಾರವು ॥ ೪ ॥

**ವೃ ॥** ಅರೆವೊಡಲಾದ ಕಾಳಿಯುಳಿದಂಗಮನಾವರಿಸಿರ್ದ ಮಾಳ್ಕೆಯಿಂ ।
ಕರಮೆಸೆಮಿಂದ್ರನೀಲರುಚಿಕಾಂತ ಕಳೇವರಮೊಪ್ಪಿ ತಾಳ್ದನಾ ॥
ದರದಿ ಕಿರಾತರೂಪಮನುಮಾಧಿಪನಲ್ಲಿ ಘನಸ್ವತಂತ್ರ ನಾ ।
ಚರಿವಡೆದಾಗಮ ಪ್ರತತಿಕೀರ್ತಿಸೆ ಬಣ್ಣಿಸೆ ಸರ್ವನಿರ್ಜರರ್ ॥ ೫ ॥

**ಟೀಕ ॥** ಘನಸ್ವತಂತ್ರಂ – ನಿರಂತರಕರ್ತಾರನಾದ ಅಥವಾ ಘನವಾದ ಸ್ವಾತಂತ್ರ್ಯವುಳ್ಳ (ಸರ್ವೋತ್ತಮನಾದರಿಂದ ಪರಾಧೀನತೆಯಿಲ್ಲದ) ಉಮಾಧಿಪ – ಉಮಾ ಸರ್ವಚೈತನ್ಯ ಶಕ್ತಿಗೆ, ಅಧಿಪಂ – ಒಡೆಯನಾದ ಶಿವನು, ಆಗಮಪ್ರತತಿ – ವೇದಗಳ ಗುಂಪು ಮತ್ತು ಕಾಮಿಕಾದಿ ಶಿವಾಗಮಂಗಳು, ೨೬ ರಸಮೂಹವು, ಕೀರ್ತಿಸೆ – ಶಿವಮಹಿಮೆಯ ಬಣ್ಣಿಸಲು, ಸರ್ವನಿರ್ಜರರ್ – ದೇವತೆಗಳೆಲ್ಲರೂ, ಅಚ್ಚರಿವಡೆದು – ಅಚಂಬಿತವಾಗಿ ಶಬರ ರೂಪವಂ ತಾಳ್ದುದಕೆ ಆಶ್ಚರಗೊಂಡು ಬಣ್ಣಿಸೆ ಶಿವಗಣಂಗಳಂ ವರ್ಣಿಸುತ್ತಿರೆ, ಅರೆವೊಡಲಾದ ಕಾಳಿ ತನ್ನ ಅರ್ಧ ಶರೀರವಾದ ಕಾಳಿಕಾದೇವಿ, ಉಳಿದಂಗಮಂ – ಮಿಕ್ಕರ್ಧ ಶರೀರವನ್ನು, ಆವರಿಸಿರ್ಪ ಮಾಳ್ಕೆಯಿಂ – ವ್ಯಾಪಿಸಿಕೊಂಡಿರುವಳೋ ಎಂಬ ಬಗೆಯಿಂದ, ಕರಂ – ಅತಿಶಯವಾಗಿ, ಎಸೆವ – ಶೋಭಿಸುವ, ಇಂದ್ರನೀಲ ರುಚಿಕಾಂತ ಕಳೇವರಂ, ಇಂದ್ರನೀಲ – ಹರಿ ನೀಲ ಮಣಿಗಳ, ರುಚಿಕಾಂತಿಯಂತೆ – ಕಾಂತ ಮನೋಹರವಾದ, ಕಳೇವರಂ – ಶರೀರವು, ಒಪ್ಪೆ – ಚನ್ನಾಗುತ್ತಿರಲು, ಆದರದಿ – ಅಕ್ಕರೆಯಿಂದ, ಕಿರಾತರೂಪಮಂ – ಬೇಡರವರ ಆಕಾರವನ್ನು, ತಾಳ್ದು – ಧರಿಸಿದನು ॥

**ತಾ ॥** ಶಿವನು ಸರ್ವತಂತ್ರ ಶಕ್ತಿಯುಳ್ಳನಾದ್ದರಿಂದ ನಿಜೋತ್ತಮರೂ ಪಂಗಳ ತಾರತಮ್ಯವಂ ನೋಡದೆ ತಾನು ಶುದ್ಧ ಸ್ಫಟಿಕಸಂಕಾಶವಾದ ನಿರ್ಮಲರೂಪನಾದರೂ ನಿಜಮಾಯೆಯಿಂದ ಅರ್ಧನಾರೀಶ್ವರ ಲೀಲೆಯಂ ತಾಳಿರ್ದ ವೇಳೆಯಳು ತನ್ನ ಶಕ್ತಿಯಾದ ಗೌರಿಯ ಕಾಳೀರೂಪವು ತನ್ನ ವಾಮಾಂಗದೊಳು ಕಪ್ಪಾಗಿ ತೋರುತಿರ್ದುಮುನ್ನು ಕೃಷ್ಣಪಿಂಗಳ ರೂಪನೆನಿಸಿರ್ದನಲ್ಲವೆ; ಆ ಪರಮೇಶ್ವರನ ಅರೆಮೈಯೊಳಗೆ ವ್ಯಾಪಿಸಿರ್ದ ಕಾಳಿಕಾದೇವಿಯೇ ಈಗ ಸರ್ವಶರೀರವನ್ನು ವ್ಯಾಪಿಸಿದ್ದರಿಂದ ಮೈಯೆಲ್ಲ ಕಪ್ಪಾಗಿ ತೋರುತ್ತಲಿದಿಯೆ ಎಂಬಂತಿರುವ ಸರ್ವಾಂಗ ನೀಲವಾದ ಶಬರ ರೂಪವನ್ನು ಅಕ್ಕರೆಯಿಂದ ಕೈಕೊಂಡನು. ಅದು ಕಂಡ ದೇವರ್ಕಳು ಅಚ್ಚರಿಯಂ ಬಣ್ಣಿಸಿದರು. ನಿಗಮಾಗಮಂಗಳು ಕೊಂಡಾಡಿದವು. ವೇದಂಗಳಲ್ಲಿ ಕೃಷ್ಣ ಪಿಂಗಳ ಪುರುಷನೆಂತಲೂ, ಅಗಮಂಗಳಲ್ಲಿ ಅರ್ಧನಾರೀಶ್ವರನೆಂತಲೂ ಶಿವಲೀಲೆಯು ಪ್ರತಿಪಾದಿಸಲ್ಪಟ್ಟಿದೆ.

ಉತ್ಪ್ರೇಕ್ಷಾಲಂಕಾರವು ॥ ೫ ॥

ವೃ ॥ ತಳಿರುಡೆ ಸಂಜೆಗೆಂಪು ಪೊಸ ಮುತ್ತಿನಹಾರಮೆ ತಾರಕಾಳಿ ತಾ ।
ತ್ತಳೀರುಚಿಕಾಯಕಾಂತಿ ಕಡುಗಳ್ತಲೆ ಮೂಕುತಿಮುತ್ತು ಶುಕ್ರಮಂ ॥
ಡಳಮಮರ್ದೊಪ್ಪಿ ಭಿಲ್ಲಿಯವಿಳಾಸಮನಾಳ್ದೆಸೆದಂದು ಸರ್ವಮಂ ।
ಗಳೆ ನಿಜಕಾಳರಾತ್ರಿವೆಸರಂ ಮಿಗೆ ಸಾರ್ಥಕಮಂ ನೆಗಳ್ಚಿದಳ್ ॥ ೬ ॥

**ಟೀಕ ॥** ತಳಿರುಡೆ – ಚಿಗುರುಗಳಡಿಯೇ, ಸಂಜೆಗೆಂಪು – ಸಂಧ್ಯಾರಾಗವು, ಪೊಸ ಮುತ್ತಿನ ಹಾರಮೆ ತಾರಕಾಳಿ – ನಕ್ಷತ್ರ ಶ್ರೇಣೀಯು, ತಳ್ತ – ವ್ಯಾಪ್ತವಾದ, ಅಳಿರುಚಿಕಾಯ ಕಾಂತಿ – ತುಂಬಿನ ಹೊಳಪಿನಂತಿರ್ಪ ಮೈಹೊಳಪು, ಕಡುಗಳ್ತಲೆ – ಗಾಢಾಂಧಕಾರವು, ಮೂಗುತಿಯ ಮುತ್ತು – ಶುಕ್ರಮಂಡಲವು ಎಂಬಂತೆ, ಅಮರ್ದು – ಅಣಿಯಾಗಿ, ಪೊಪ್ಪೆ – ಶೋಭಿಸುತ್ತಿರಲು, ಭಿಲ್ಲಿಯ – ಬೇಡರ ವಿಲಾಸವು, ಮಾದಪೊದವನು, ಆಳು – ಪೋಷಿಸಿ, ಎಸೆವ – ಅಂದು ಶೋಭಿಸುವ ಆ ಕಾಲದಲ್ಲಿ, ಸರ್ವಮಂಗಳ – ಉಮಾದೇವಿಯು, ನಿಜಕಾಳರಾತ್ರಿ ಪೆಸರಂ – ತನ್ನ ಕಾಳರಾತ್ರಿ ಎಂಬ ಹೆಸರನ್ನು, ಮಿಗೆ –ಅತಿಶಯವಾಗಿ, ಸಾರ್ಥಕಮಂ – ಅರ್ಥಸಹಿತವಾದ್ಧನ್ನಾಗಿ, ನೆಗಳ್ಚಿದಳ್ – ಮಾಡಿದಳು, ಪ್ರಕಟಿಸಿದಳು ॥

**ತಾ ॥** ಶಂಕರನು ಶಬರಾಕಾರನಾಗುತಲೂ, ಆತನಂ ಅನುಸರಿಸಿ ಗೌರಿಯು ಶಬರೀ ರೂಪವಂ ತಾಳಿದಳು. ಅಗ ಆಕೆಯಂ ನೋಡಿದರೆ ಕಾಳರಾತ್ರಿ ಕಪ್ಪಾದ ರಾತ್ರಿಯ ಹಾಗಿತ್ತು. ಹೇಗೆಂದರೆ, ಕೆಂಪು ಚಿಗುರುಗಳನ್ನು ಉಟ್ಟಿರ್ದಳಾಗಿ ಅದೇ ಸಂಜಿಗೆ ಭಾರವಾಗಿ ತೋರಿತು. ಮುತ್ತಿನ ಹಾರವೆ ಚುಕ್ಕೆಗಳ ಹಾಗೆ ಕಾಣಿಸಿತು. ಕಪ್ಪಾದ ಮೈ ಹೊಳೆವ ಕತ್ತಲೆಯಾಗಿ ತೋರಿತು, ಮೂಗುತಿಯ ತೋರುಮುತ್ತು ಶುಕ್ರ ನಕ್ಷತ್ರವಾಗಿತ್ತು. ಆದ್ದರಿಂದ ಗೌರೀದೇವಿಗೆ ಪೂರ್ವದೊಳು ಮಹಾದೈತ್ಯರನ್ನು ರಾತ್ರಿಕಾಲದೊಳು ಸಂಹರಿಸಿದಾಗೆ ಕಾಲಮೃತ್ಯುಸ್ವರೂಪಳಾದ, ರಾತ್ರಿಯೆಂದು, ಕಾಳರಾತ್ರಿಯೆಂಬ ಹೆಸರು ಉಂಟಾಗಿದ್ದೆಂದು, ಈಗ ಕಪ್ಪಾದ ರಾತ್ರಿಯ ಹಾಗೆ ತೋರಿದ್ದರಿಂದ ಕಪ್ಪಾದ ರಾತ್ರಿಯೇ ಆಗಿರುವಳಾಗಿ ಕಾಳರಾತ್ರಿಯೆಂಬ ಹೆಸರಿಗೆ ಈಗ ಅರ್ಥವು ದಿಟವಾಯಿತೆಂಬಂತೆ ತೋರಿತು ರೂಪಕೋತ್ಪ್ರೇಕ್ಷಾದ್ಯಲಂಕಾರಗಳ ಸಂಸೃಷ್ಟಿಯು ॥ ೬ ॥

ಉ ॥ ಅರೆನೇರಿಲ್ಪಬಣ್ಣಬಡದ ತನುಪ್ರಥುಶ್ರೀಣಿನೀಳಾಳಕಂಪಂ ।
ಕರುಹಾಶ್ಯಂಬಿನ್ನನಾಳ್ದೊಪ್ಪುವನೆಲೆಮೊಲೆಬಿಂಬಾಧರಂದೀರ್ಘನೇತ್ರ ॥
ತರಳಾಪಾಂಗಂಬಳಲ್ಬಲ್ಮುಡಿಬಡನಡುರಂಭೋರುಕೊಂಕಾಂತಪುರು ।
ದಿರೆನಾನಾಶಕ್ತಿಯರ್ಬೇಡತಿಯರಸಕವಂತಾಳ್ದ ಕಣ್ಗಡ್ಡಮಾದರರ್ ॥ ೭ ॥

**ಟೀಕ ॥** ಅರಿನೇರಿಲ್ವಣ್ಣಂ – ಅರ್ಧಪಕ್ವವಾದ ನೇರಳೆಯ ಹಣ್ಣಿನ ಬಣ್ಣ ಬಡೆದ ವರ್ಣವನ್ನು ಪಡೆದಿರುವ, ತನು – ಶರೀರವು, ಪ್ರಥುಶ್ರೋಣಿ – ತೋರವಾದ ಅಂಡು,

– ನೀಳಾಳಕಂ – ಕಪ್ಪಾದ ಕುರುಳು, ಪಂಕರುಹಾಸ್ಯಂ – ತಾವರೆ ಮೊಗವು, ಬಿಣ್ದಪಂ ಆಳ್ದು ಒಪ್ಪುವ – ಬಿಗಿತರವನ್ನು ಹೊಂದಿ ಮೆರೆವ – ನೆಲೆಮೊಲೆ – ಕದಲ ಸ್ತನವು – ಬಿಂಬಾಧರಂ – ತೊಂಡೆಯಹಣ್ಣಿನಂತಿರ್ವ ತುಟಿಯ, ದೀರ್ಘನೇತ್ರಂ – ನೀಳವಾದ ಕಣ್ಣು, ತರಳಾಪಾಂಗಂ – ಚಂಚಲವಾದ ದೃಷ್ಟಿಯು, ಬಳಲ್ಮುಡಿಯು – ಬಳಲುತ್ತಿರುವ ಬಲವಾದ ಜಡೆಗಟ್ಟು, ಬಡನ – ಸಣ್ಣಗಿರುವ ಟೊಂಕವು, ರಂಭೋರು – ಬಾಳೆಯ ದಿಂಡಿನಂತಿರ್ವ ತೊಡೆಯು, ಕೊಂಕಾಂತಪುರ್ಬು – ಕುಟಿಲ್ಯವನ್ನು, ಪಡೆದಿರುವ – (ಸೊಟ್ಟಗೆ ಬಗ್ಗಿರುವ) ಹುಬ್ಬು, ಒಂದಿರೆ – ಹೊಂದಿಕೆಯಾಗಿರಲಾಗಿ, ನಾನಾ ಶಕ್ತಿಯರ್ – ಹಲವು ಬಗೆಯಾದ ದೇವತಾಶಕ್ತಿಯು, ಬೇಡಿತಿಯರ ಎಸಕಮಂ – ವೇಷವನ್ನು, ತಾಳ್ದು – ತಾಳಿ, ಕಣ್ಗೆ – ನೋಡುವವರ ದೃಷ್ಟಿಗೆ, ಅಡ್ಡಂ – ಗೋಚರವು ಆದರ್ ॥

**ತಾ ॥** ಸಕಲ ಶಕ್ತಿದೇವತೆಯರು ಶಬರಿಯಂ ಸೇವಿಸಲೊಸಗ ಸಿಂಗರದ ಬೇಡಿತಿಯರ ರೂಪವನ್ನು ಧರಿಸಿಬಂದರು ಉಪಮಾಲಂಕಾರವು.

ವೃ ॥ ಹರಿಮಧ್ಯಂಮೃಗಶಾಬನೇತ್ರಮಳಿಮಾಲಾವೇಣಿ ಚಂಚದ್ರಥಾಂ ।
ಗರುಚಿಸ್ಫಾರಪಯೋಧರಂದ್ವಿರದಯಾನಂ ಕೋಕಿಲಾ ಲಾಪಮಾ ॥
ಪ್ಪಿರಭಿಲ್ಲಾಂಗನೆಯರ್ಕಳಾ ಅಮಂಯರ್ನೈಜಾಂಗಮಂನೋಡಿಭೀ ।
ತಿರಸಂತನ್ಮೃಗಬೃಂದಕಾಗದಿರದಂತಾಳ್ದಂತೆಕಣ್ಗೊಪ್ಪಿದರ್ ॥ ೮ ॥

**ಟೀಕ ॥** ಹರಿಮಧ್ಯಂ – ಸಿಂಹದಂತಿರುವ ಸೊಂಟವೂ, ಮೃಗಶಾಬನೇತ್ರಂ – ಹುಲ್ಲೆಯ ಮರಿಗೆ ಹೇಗೋ ಹಾಗೆ, ಇರುವಣ್ಣು, ಅಳಿಮಾಲಾವೇಣಿ ತುಂಬಿಗಳ ಸಾಲಿನಂತಿರುವ ಜಡೆಯು, ಚಂದ್ರಥಾಂಗ – ಶೋಭಿಸುವ ಚಕ್ರವಾಕಗಳ, ರುಚಿ – ಕಾಂತಿಯುಳ್ಳ, ಸ್ಫಾರ – ತೋರವಾದ, ಪಯೋಧರಂ – ಮೊಲೆಯು, ದ್ವಿರದಯಾಗಂ ಆನೆಯ ಹಾಗಿರುವ ನಡೆಯ, ಕೋಕಿಲಾಲಾಪಂ – ಕೋಕಿಲೆಯ ಹಾಗಿರುವ ಮಾತು, ಒಪ್ಪಿಯಿರಲಾಗಿ, ಭಿಲ್ಲಾಂಗನೆಯರ್ಕಳ್ – ಬೇಡಿತಿಯರು ಆದ, ಅಮರಿಯರ್ – ದೇವಸ್ತ್ರೀಯರು, ನೈಜಾಂಗಮಂ – ತಮ್ಮ ದೇಹವನ್ನು ನೋಡಿ, ತನ್ಮೃಗಬೃಂದಕೆ – ಆ ಮೃಗಗಳ ಗುಂಪಿಗೆ, ಭೀತಿರಸಂ – ಅಂಜಿಕೆಯು, ಆಗದ – ಆಗದೆ, ಇರುವ – ಇರುವಂ – ಸ್ಥಿತಿಯನ್ನು, ತಾಳ್ದತೆ – ಧರಿಸಿಯಿರುವರೋ ಎಂಬ ಹಾಗೆ, ಕಣ್ಗೆ ಒಪ್ಪಿದರ್ ॥

**ತಾ ॥** ದೇವಸ್ತ್ರೀಯರು ಬೇಡಿತಿಯರಾಗಿ ಬಂದರು. ಅವರ ಶರೀರದಲ್ಲಿ ಸಿಂಹಕ್ಕಿದ್ದಂತೆ ಕಣ್ಣು ತುಂಬಿಗಳ ಸಾಲಿನಂತೆ ಜಡೆ, ಚಕ್ರವಾಕಗಳಂತೆ ಮೊಲೆಗಳು, ಆನೆಗೆ ಹೇಗೋ ಹಾಗೆ ಮೆಲುನಡೆ, ಕೋಕಿಲನ ಹಾಗೆ ನುಡಿ ಉಂಟಾಗಿತ್ತು (ಉಪಮಾಲಂಕಾರ). ಇವರನ್ನು ಕಾರಣಕಲ್ಪನೆಯಿಂದ ಮೃಗಬೃಂದಕೆ ಭೀತಿರಸವಾಗದೆಯಿರುವದಕ್ಕಾಗಿ ಹೀಗಿದ್ದರೆಂಬುದರಿಂದ ಫಲೋತ್ಪ್ರೇಕ್ಷಾಲಂಕಾರವೆನಿಸುವದು. ಅವುಗಳಿಗೆ ಭಯವೆಂಗುಬರ್ಪುದು. ಈಗಳೆಂತು ಆಗಿದಿರ್ಪುದು! ಎಂದರೆ ಬೇಟೆಯಾಡುವವರನ್ನು

ನೋಡಿದರೆ ಮೃಗಗಳಿಗೆ ಭಯ ಹುಟ್ಟುವುದು. ಅರಣ್ಯವನ್ನು ನೋಡಿದರೆ ನಿರ್ಭಯವಾಗುವದು ಸ್ವಭಾವವಾಗಿರುತ್ತೆ. ದೇವಸ್ತ್ರಿಯ್ಯರು ಬೇಡಿತಿಯರ ವೇಷವನ್ನು ಧರಿಸಿದ್ದರಿಂದ ತಮ್ಮನ್ನು ನೋಡಿದರೆ ಮೃಗಗಳಿಗೆ ಭಯವಾಗುವದೆಂದು ಶಂಕಿಸಿ ಅವುಗಳಿಗೆ ಭಯವಾಗದೆ ಇರುವ ಹಾಗೆ, ತಾವು ಅರಣ್ಯರೂಪವಾಗಿ ಕಾಣಿಸಿದರು ಎಂಬಂತೆ ಪದಗಳ ಸಮಾಸ ವೈಚಿತ್ರ್ಯದಿಂದ ಕವಿಯು ಘ್ರೌಢೋಕ್ತಿ ಸಿದ್ಧವಾದ ಉಪಮೋತ್ಪ್ರೇಕ್ಷಾಲಂಕಾರ ಗಳಿಂದ ಸ್ತ್ರೀಯರು ಅರಣ್ಯದ ಹಾಗಿರ್ಪರೆಂಬ ಧ್ವನ್ಯರ್ಥವು ತೋರುತಲಿದೆ. ಹೇಗೆಂದರೆ ಅರಣ್ಯವೆಂಬ ಹೆಂಗಸಿಗೆ ಸಿಂಹದ ಸೊಂಟ, ಜಿಂಕೆಯ ಕಣ್ಣು, ತುಂಬಿಯ ಜಡೆ, ಚಕ್ರವಾಕವೆ ಮೊಲೆ, ಕೋಗಿಲೆಯು ನುಡಿಯೆ ನುಡಿಯ ಹಾಗೆ ಇರುವುದರಿಂದ ವನವೆಂಬ ಭಾವವು ಸಮಾಸಗತವಾದ ರೂಪಕಾಲಂಕಾರದಿಂದ ತೋರುತ್ತಲಿದೆ.

ಉ ॥ ತೊಳಗುವ ದಂತದೋಲೆ ಗುರುಗಂಜಿಯ ಬಣ್ಣಸರಂ ತಮಾಲದೊ ।
ಳ್ತಳಿರುಡೆ ತಳ್ತ ಪೀಲಿಯ ತರಂಗದ ಬಲ್ನಿರಿಗಟ್ಟು ಸೂಡಿ ದು ॥
ತ್ಪಳದಳಮಾಲೆ ತಾಳ್ದ ಪುಳುವಜ್ಜೆಯ ಬೊಟ್ಟು ಪಸುರ್ಬುವೆತ್ತರ್ಪು ಪ ।
ಜ್ಜಳಿಪ ನಿಚೋಳಮೊಪ್ಪಿರೆ ಪುಳಿಂದಿಯರಾದರಮರ್ತ್ಯ ಕಾಂತೆಯರ್ ॥ ೯ ॥

**ಟೀಕ ॥** ತೊಳಗುವ – ಮೆರೆಯುವ, ದಂತದ – ಆನೆಯ ಕೊಂಬಿನ, ಓಲೆ – ತಾಟಂಕವು, ಗುರುಗಂಜಿಯ – ಗಂಜಾಮಣಿಯ ಬಣ್ಣದ ಸರವು, ತಮಾಲದ – ಹೊಂಗೆಯ, ಒಳ್ತಳಿರ – ಒಳ್ಳೆ ಚಿಗುರಿನ, ಉಡೆ – ಉಡಿಗೆಯು, ತಳ್ತ – ಹರವಿದ, ಪೀಲಿಯ – ನವಿಲಗರಿಗಳ, ತರಂಗದ ಪಾವಡೆಯ, ಬಲ್ – ಬಲವಾದ, ನಿರಿಗಟ್ಟು – ನಿರಿಗೆಯ ಕಟ್ಟು, ಸೂಡಿದ – ಮುಡಿದುಕೊಂಡ, ಉತ್ಪಲ – ನೈದಿಲೆಯ ದಳ, ಎಸಳ್ಗಳ – ಮಾಲೆ ಸರವು, ತಾಳ್ದ – ಧರಿಸಿದ, ಪುಳುವಜ್ಜೆಯ –ಮಿಣುಕುಹುಳದ ಅಥವಾ ಸಣ್ಣ ಜೀರಜಿಂಬೆಯ ರೆಕ್ಕೆಯು, ಬೊಟ್ಟು – ತಿಲಕವು, ಪಸುರ್ಪುವೆತ್ತು – ಹಸುರಾಗಿರುವ, ಪಜ್ಜಳಿಪ – ಪ್ರಕಾಶಿಸುತ್ತಿರುವ, ನಿಚೋಳಂ – ತಲೆಗೊಂಡೆಯು ಒಪ್ಪಿರಲು, ಅಮರ್ತ್ಯ ಕಾಂತೆಯರ್ – ದೇವಸ್ತ್ರೀಯರು, ಪುಳಿಂದಿಯರ್ – ಬೇಡಿತಿಯರು, ಆದರ್ ॥

**ತಾ ॥** ವನವಾಸಿಗಳಾದ ಪುಳಿಂದರಿಗೆ ಅಲ್ಲಿ ದೊರೆಯುವ ದ್ರವ್ಯಗಳೇ ಅಲಂಕಾರವಾಗಿ ರುವದರಿಂದ ಅವರ ಸ್ವಭಾವವನ್ನು ಬಣಿಸಿದಂತೆ ಪರ್ಯವಸಾನವಾಗುವದು ॥ ೯ ॥

ಮತ್ತಂ॥ ತಲೆ ಬಳಸುತ್ತೆ ಕಟ್ಟಿದ ತಳಿರ್ನವಚಂಪಕ ಕರ್ಣಪೂರಮ ।
ಬ್ಜಲಸಿತ ಕರ್ಣಿಕಾರಚಿತಕಾಂಚಿಮರಂದದಬೊಟ್ಟುಬೆನ್ನ ಮೆ ॥
ಲೊಲೆದೆಸೆವೆಂಣೆಗಂಟು ಸದೆ ವಿಲ್ಲೊನೆಯಂಬು ಲತಾಂತಮಾಲೆಮಂ ।
ಜುಲಗಜದಂತೆದೊಳ್ವಳೆವಿರಾಜಿಸೆಕಣ್ಗೆಸೆದರ್ಪುಳಿಂದಿಯರ್ ॥ ೧೦ ॥

**ಟೀಕ ॥** ತಲೆಯನ್ನು ಬಳಸುತ್ತ – ಸುತ್ತ ಕಟ್ಟಿದ, ತಳಿರ್ – ಚಿಗುರು, ನವ – ಹೊಸತಾದ, ಚಂಪಕ – ಸಂಪಿಗೆಹೂವಿನ, ಕರ್ಣಪೂರಂ – ಕಿವಿದೊಡವು, ಅಬ್ಜ–

ತಾವರೆಗಳಿಂದ, ಲಸಿತ – ಶೋಭಿತವಾಗಿಯೂ, ಕರ್ಣಿಕಾರ – ಕರ್ಣಿಕಾರ ಪುಷ್ಪಗಳಿಂದ, ಚಿತ – ಜೋಡಿಸಲ್ಪಟ್ಟದ್ದಾಗಿಯೂ ಇರುವ, ಕಾಂಚಿ – ಡಾಬು ಅಥವಾ ಅಬ್ಜ – ತಾವರೆಯ, ಲಸಿತ – ಶೋಭಿಸುವ, ಕರ್ಣಿಕಾ – ನಡುವಣ ದಿಮ್ಮಿಗಳಿಂದ, ಆರಚಿತ – ಮಾಡಲ್ಪಟ್ಟ, ಕಾಂಚಿ – ಉಡಿನೂಲು, ಮರಂದದ – ಮಕರಂದದ, ಬೊಟ್ಟು – ಚುಕ್ಕೆಯು, ಬೆನ್ನ – ಬೆನ್ನ ಮೇಲೆ, ಒಲೆದು – ಕದಲುತ್ತ, ಎಸೆವ, ಎಣ್ಣೆಗಣ್ಣು, ಹಿಕ್ಕೆರಮೆರುಗೆಣ್ಣೀಯಂ – ಸವರಲ್ಪಟ್ಟ ಕೂದಲಿನ ಗಂಟು, ಪಡೆವಿಲ್ – ಪಡೆದ ಬಿಲ್ಲು, ಮೊನೆಯಂಬು – ಮೊನೆಯುಳ್ಳ ಸರಳು, ಲತಾಂತ – ಬಳ್ಳಿಗಳ ಕೊನೆಯೆಂದರೆ, ಪೂಗಳ ಮೇಲೆ ಹಾರವು, ಮಝುಳ – ಮನೋಹರಮಾದ, ಗಜದಂತದ, ಒಳ್ಪಳೆ – ಒಳಿತಾದ ಕಡಗವು, ನಿರಾಜಿಸೆ – ಮೆರೆಯೆ, ಪುಳಿಂದಿಯರ್ – ಬೇಡತಿಯರು, ಕಣ್ಗೆಸೆದರ್ ॥

**ತಾ ॥** ಮುನ್ನಿನಂತೆಯೇ ಭಾವಾಲಂಕಾರಗಳಂ ತಿಳಿಯುವದು ॥ ೧೦ ॥

ಉಇ॥ ಮೃಗದುದದಂಗರಾಗಮಸಿತೋತ್ಪಲಮಾಲೆಯ ಜೊಲ್ಲೆಯಂ ಮನಂ ॥
ಬುಗುವ ತಮಾಲಪಲ್ಲವದ ಮೇಲುಡೆ ಕಟ್ಟಿದ ಪೀಲಿದಂಡೆ ಚೆ ।
ಲ್ವಗಲದ ಸಾಂದ್ರ ಕಜ್ಜಲಲಲಾಮಮಗಾಹಿತ ರತ್ನಭೂಷಣಂ ।
ಸೊಗಯಿಸೆ ದೇವಿಯರ್ಬಳಸಿ ನಿಂದೆಸದಿರ್ದರಗೇಂದ್ರಪುತ್ರಿಯಂ ॥ ೧೧ ॥

**ಟೀಕ ॥** ಮೃಗಮದದ – ಕಸ್ತೂರಿಯ, ಅಂಗರಾಗಂ – ಗಂಧಲೇಪವು, ಅಸಿತೋತ್ಪಲ ಮಾಲೆಯು – ಕನ್ನೈದಿಲೆಯ ದಂಡೆಯು, ಜೊಲ್ಲೆಯಂ – ಝಾಲರಿ, ಮನಂಬುಗುವ – ಬೇಕೆನಿಸುವ, ತಮಾಲಪಲ್ಲವದ – ಹೊಂಗೆಯ ಚಿಗುರಿನ, ಮೇಲುಡೆ – ಉಡಿಯ ಮೇಲಿಟ್ಟು, ಕಟ್ಟಿದ – ಕಟ್ಟಿಕೊಂಡ, ಪೀಲಿದಂಡೆ – ನವಿಲುಗರಿಗಳ ಸರ, ಚಲ್ವಗಲದ – ಸೊಗಸನ್ನು ಬಿಡಿದ, ಸಾಂದ್ರ – ಘನವಾದ, ಕಜ್ಜಲಲಲಾಮಂ – ಸಾದಿನ ಬೊಟ್ಟು, ಅಗಾಹಿತರತ್ನಭೂಷಣಂ – ಇಂದ್ರನೀಲಗಳ ಆಭರಣ, ಇವು ಸೊಗಯಿಸೆ – ಸೊಗಸನ್ನುಂಟು ಮಾಡುತ್ತಿರಲು, ದೇವಿಯರ್ – ದೇವಿಯರು, ಅಗೇಂದ್ರಪುತ್ರಿಯಂ– ಪರ್ವತರಾಯನ ಮಗಳನ್ನು, ಬಳಸಿ ನಿಂದು – ಸುತ್ತ ನಿಂತರು, ಎಸೆದಿರ್ದರ್ – ಪ್ರಕಾಶಿಸಿ ಇದ್ದರು ॥

**ತಾ ॥** ಕಾಡಿನಲ್ಲಿ ಹುಟ್ಟುವ ಶ್ರೇಷ್ಠ ವಸ್ತುಗಳಿಂದ ಕಿರಾತಿಯರ ವೇಷಕ್ಕೆ ತಕ್ಕ ಅಲಂಕಾರವಂ ಮಾಡಿಕೊಂಡು ದೇವಸ್ತ್ರೀಯರು ಪಾರ್ವತಿಯ ಸುತ್ತಲೂ ಶೋಭಿಸಿದರು ॥ ೧೧ ॥

(ಮುಂದುವರಿಯುವುದು)

# ಸೌಜನ್ಯದ ಸಾಕಾರಮೂರ್ತಿ ಡಾ. ಎಚ್. ತಿಪ್ಪೇರುದ್ರಸ್ವಾಮಿ

ಡಾ. ಬಿ. ನಂಜುಂಡಸ್ವಾಮಿ

ಡಾ. ತಿಪ್ಪೇರುದ್ರಸ್ವಾಮಿಯವರನ್ನು ಮೇಲಿಂದ ಮೇಲೆ ಮಾತನಾಡಿಸಿ, ಚರ್ಚೆ ಮಾಡುವ ಅವಕಾಶವನ್ನು ನಾನು ಕೇಳಿಕೊಂಡು ಬಂದಿರಲಿಲ್ಲ, ಬಾಲ್ಯದಲ್ಲಿ ನಿಜಗುಣ ಶಿವಯೋಗಿಗಳ ಜೀವನದ ಮೇಲೆ ರಚನೆಯಾದ "ಜ್ಯೋತಿ ಬೆಳಗುತಿದೆ" ಸ್ವರವಚನದ ಕರ್ತೃ ಬಗ್ಗೆ ತಿಳಯುವ ಕುತೂಹಲದಿಂದ ಗುಬ್ಬಿಯಲ್ಲಿ ಅಧ್ಯಾಪಕರಾಗಿದ್ದ ತಿಪ್ಪೂರು ಮರಿಬಸವಯ್ಯನವರ ಸಂಗ್ರಹದಲ್ಲಿ ಇದ್ದ, ನಿಜಗುಣ ಶಿವಯೋಗಿಗಳನ್ನು ಕುರಿತು ಡಾ. ತಿಪ್ಪೇರುದ್ರಸ್ವಾಮಿ ಅವರು ರಚಿಸಿದ "ಜ್ಯೋತಿ ಬೆಳಗುತಿದೆ" ಕಾದಂಬರಿ ಓದಿನ ಮೂಲಕ ಮೊದಲು ನನಗೆ ಬರೆಹಗಾರರಾಗಿ ಡಾ. ತಿಪ್ಪೇರುದ್ರಸ್ವಾಮಿಯವರ ಪರಿಚಯವಾಯಿತು. ಹದಿನಾರು ವರ್ಷದ ಬಾಲಕನಾದ ನನ್ನ ಮೇಲೆ ಆ ಕೃತಿ ಅಪಾರವಾದ ಪರಿಣಾಮವನ್ನು ಬೀರಿತು. ಸ್ವಲ್ಪ ದಿನದಲ್ಲೇ "ಕದಳಿಯ ಕರ್ಪೂರ" ಅಕ್ಕಮಹಾದೇವಿ ದಿವ್ಯಜೀವನ ಕುರಿತ ಕಾದಂಬರಿಯನ್ನು ಓದುವ ಅವಕಾಶ ಲಭ್ಯವಾಯಿತು. ಮುಂದೆ ಆಯುರ್ವೇದ ಶಾಸ್ತ್ರದ ಅಧ್ಯಯನಕ್ಕಾಗಿ ಬಳ್ಳಾರಿಗೆ ಹೋದಾಗ ಶರಣೆ ತೊಗರಿ ಸರ್ವಮಂಗಳಮ್ಮನವರ ಮನೆಯಲ್ಲಿದ್ದ ಅಪಾರವಾದ ಶರಣ ಸಾಹಿತ್ಯಕೃತಿಗಳು ಅಧ್ಯಯನಕ್ಕೆ ಲಭ್ಯವಾಗಿ ತಿಪ್ಪೇರುದ್ರಸ್ವಾಮಿಯವರ ಮಿಕ್ಕ ಕಾದಂಬರಿಗಳು ಮತ್ತು ಕೆಲವು ಪುಸ್ತಕಗಳನ್ನು ಓದಿದೆ.

ತುಮಕೂರು ನಗರದಲ್ಲಿ ವೈದ್ಯ ವೃತ್ತಿಯನ್ನು ಪ್ರಾರಂಭಿಸಿದ ಮೇಲೆ, ಸಿದ್ಧಗಂಗಾ ಮಠದಲ್ಲಿ ನಡೆದ ಒಂದೆರಡು ಅನುಭಾವ ಗೋಷ್ಠಿಯಲ್ಲಿ ತಿಪ್ಪೇರುದ್ರಸ್ವಾಮಿಯವರ ಉಪನ್ಯಾಸವನ್ನು ಕೇಳಿ, ನೋಡಿದ್ದರೂ ಅವರ ವೈಯಕ್ತಿಕ ಪರಿಚಯವಾಗಿರಲಿಲ್ಲ. ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಸ್ವಾಮಿಗಳು "ಕರ್ತಾರನ ಕಮ್ಮಟ" ಕಾದಂಬರಿಯನ್ನು ಬಹಳ ಕಡಿಮೆ ಬೆಲೆಗೆ ಜನಸಾಮಾನ್ಯರಿಗೆ ತಲುಪಿಸಬೇಕು ಅನ್ನುವ ಅಭಿಲಾಷೆಯಿಂದ ಕೇವಲ ಇಪ್ಪತ್ತೈದು ರೂ.ಗಳಿಗೆ ಆ ಕೃತಿಯನ್ನು ಮಠದಲ್ಲಿ ಮಾರಾಟ ಮಾಡಿಸಿದರು. ಈ ಸೇವೆ ಸಿದ್ಧಗಂಗಾ ಮಠದಲ್ಲಿ ಯಶಸ್ವಿಯಾಗುವಂತೆ ಯೋಜನೆ ರೂಪಿಸಿದವರು ಪೂಜ್ಯ ಕುಮಾರ ನಿಜಗುಣ ಸ್ವಾಮಿಗಳು. ಈಗಲೂ ಸಿದ್ದಗಂಗಾ ಮಠದಲ್ಲಿ 'ಕರ್ತಾರನ ಕಮ್ಮಟ' ಐವತ್ತು ರೂ.ಗಳಿಗೆ ಲಭ್ಯವಿದೆ. ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಸ್ವಾಮಿಗಳು ಕಾದಂಬರಿಯ ಕೆಲವು ಭಾಗಗಳನ್ನು ಹತ್ತಾರು ಸಾರಿ ಓದಿದ್ದರು. ಹೀಗೆ ಒಂದು ಕಾದಂಬರಿ

ಎಂತಹ ರೋಚಕವಾದ ಇತಿಹಾಸವನ್ನು ನಿರ್ಮಿಸಬಲ್ಲದು ಅನ್ನುವುದಕ್ಕೆ 'ಕರ್ತಾರನ ಕಮ್ಮಟ' ಉತ್ತಮ ಉದಾಹರಣೆಯಾಗಿದೆ.

ಮೊದಲನೆಯ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ನಡೆದದ್ದು ಮೈಸೂರಿನಲ್ಲಿ. ಪ್ರೊ. ಸ.ಸ. ಮಾಳವಾಡ ಅವರು ಸಮ್ಮೇಳನಾಧ್ಯಕ್ಷರಾಗಿ ಅಧ್ಯಕ್ಷ ಪೀಠವನ್ನು ಅಲಂಕರಿಸಬೇಕಾಗಿತ್ತು. 1986 ಮೇ 30, 31ರಂದು ಸಮ್ಮೇಳನದ ದಿನಾಂಕ ನಿಗದಿಯಾಗಿ ಆಹ್ವಾನ ಪತ್ರಿಕೆ ಮುದ್ರಣವಾಗಿತ್ತು. ಆದರೆ ಶಿವನ ಇಚ್ಛೆಯೇ ಬೇರೆ, ಸಮ್ಮೇಳನಕ್ಕೆ ಮುನ್ನವೇ ಶಿವೈಕ್ಯರಾದರು. ಪ್ರೊ. ಸಂ.ಶಿ. ಭೂಸನೂರಮಠರವರು ಅಖಿಲ ಭಾರತ ಶರಣ ಸಾಹಿತ್ಯ ಪ್ರಥಮ ಸಮ್ಮೇಳನಾಧ್ಯಕ್ಷರಾಗಿ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ಸಮ್ಮೇಳನ ನಡೆಯಲು ಕೇವಲ ಐದು ದಿವಸಗಳು ಇದ್ದಾಗ ಡಾ. ಭೂಸನೂರಮಠರನ್ನು ಒಪ್ಪಿಸಿ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಾಧ್ಯಕ್ಷರಾದ ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು ಮತ್ತು ಇತರ ಪದಾಧಿಕಾರಿಗಳಿಗೆ ಸಲ್ಲುತ್ತದೆ. ಸಮ್ಮೇಳನದ ನೆನಪಿನ ಸಂಚಿಕೆ "ಅನುಭಾವ"ದಲ್ಲಿ ಲಿಂ. ಪ್ರೊ. ಸ.ಸ. ಮಾಳವಾಡರು ಮಾಡಬೇಕಾಗಿದ್ದ ಅಧ್ಯಕ್ಷ ಭಾಷಣ ಹಾಗೂ ಪ್ರೊ. ಸಂ.ಶಿ. ಭುಸನೂರಮಠರ ಅಧ್ಯಕ್ಷ ಭಾಷಣ ಎರಡೂ ಮುದ್ರಣವಾಗಿವೆ.

ಎರಡನೆಯ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ಬೆಂಗಳೂರಿನ ಪರಮಪೂಜ್ಯ ನಿ.ಪ್ರ. ನಿಜಗುಣ ಸ್ವಾಮಿಗಳ ನೇತೃತ್ವದಲ್ಲಿ ಯಶಸ್ವಿಯಾಗಿ ಸೆಪ್ಟೆಂಬರ್ 10, 11 ಮತ್ತು 12 1988ರಲ್ಲಿ ನೆರವೇರಿತು. ವೃತ್ತಿಯ ಒತ್ತಡದಿಂದ ಮೂರು ದಿನವೂ ನಾನು ಸಮ್ಮೇಳನದಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ. 11ನೇ ತಾರೀಖು ಭಾನುವಾರ ಬೆಳಗಿನಿಂದ ಸಂಜೆಯ ತನಕ ಸಮ್ಮೇಳನದಲ್ಲಿ ಭಾಗವಹಿಸಿ ವಿದ್ವಾಂಸರ ದರ್ಶನ ಮಾಡಿದೆ. ಸಮ್ಮೇಳನದ ಪ್ರತಿಯೊಂದು ವಿಷಯದಲ್ಲೂ ಡಾ. ತಿಪ್ಪೇರುದ್ರಸ್ವಾಮಿಯವರು ಪಾದರಸದಂತೆ ಸಮಯಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುವುದನ್ನು ಹತ್ತಿರದಿಂದ ನೋಡುವ ಅವಕಾಶ ಲಭ್ಯವಾಯಿತು. ಈ ಸಮ್ಮೇಳನದ ನೆನಪಿನ ಸಂಚಿಕೆ "ಶರಣ ಸಂಪದ"ವನ್ನು ಡಾ. ಎಸ್. ವಿದ್ಯಾಶಂಕರ ಅವರು ಸಂಪಾದಿಸಿದ್ದರು. ಆ ಸಂಚಿಕೆಯಲ್ಲಿ ಡಾ. ತಿಪ್ಪೇರುದ್ರಸ್ವಾಮಿಯವರು "ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಒಂದು ವರದಿ" ಎಂಬ ಲೇಖನ ಬರೆದಿದ್ದಾರೆ. ನಾನು ಶರಣ ಸಾಹಿತ್ಯದ ಮೇಲೆ ಕೆಲವು ಪ್ರಶ್ನೆಗಳನ್ನು ಕೇಳಿದ್ದಕ್ಕೆ ನೆನಪಿನ ಸಂಚಿಕೆಯ ನನ್ನ ಲೇಖನ ಓದಿ ಎಂದು ಹೇಳಿ ಬೆನ್ನು ತಟ್ಟಿದ್ದರು.

ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದ ಮೂರನೆಯ ಸಮ್ಮೇಳನ ಹೊಸಪೇಟೆಯಲ್ಲಿ ಜುಲೈ 13, 14 ಮತ್ತು 15, 1990ರಂದು ಏರ್ಪಾಟು ಆಗಿತ್ತು. ನನ್ನ ಜೀವನದಲ್ಲಿ ದೊಡ್ಡ ಬಿರುಗಾಳಿ ಬೀಸಿ ಸಂಪೂರ್ಣವಾಗಿ ನೊಂದು ಬೆಂದು ನಿಂತಿದ್ದ ನನ್ನನ್ನು, ನನ್ನ ಆತ್ಮೀಯ ಸ್ನೇಹಿತರು ಹೊಸಪೇಟೆ ಸಾಹಿತ್ಯ ಸಮ್ಮೇಳನಕ್ಕೆ ಒತ್ತಾಯದಿಂದ

ಕಳುಹಿಸಿದರು. 14ರ ರಾತ್ರಿ ಹೊರಟು 15ರ ಮುಂಜಾನೆ ಹೊಸಪೇಟೆಯನ್ನು ತಲುಪಿದೆ. ಭವ್ಯ ಸಭಾಂಗಣ, ಬಹಳ ದೊಡ್ಡ ವ್ಯವಸ್ಥೆಯನ್ನು ಲಿಂಗೈಕ್ಯ ಪರಮಪೂಜ್ಯ ಶ್ರೀ ಶ್ರೀ ಜಗದ್ಗುರು ಸಂಗನಬಸವ ಮಹಾಸ್ವಾಮಿಗಳು ವ್ಯವಸ್ಥೆ ಮಾಡಿದ್ದರು. ಸಮ್ಮೇಳನದಲ್ಲಿ ಕೆಲವು ವಿಷಯಗಳ ಬಗ್ಗೆ ಬಿಸಿ ಬಿಸಿಯಾದ ಚರ್ಚೆ ನಡೆಯಿತು. ಈ ಚರ್ಚೆ ಯಾವಾಗಲೂ ನಡೆಯುವಂತಹುದೇ. ಅದು ಎಲ್ಲೆ ಮೀರಿದಾಗ ವೇದಿಕೆಯ ಮೇಲೆ ಬಂದ ಡಾ. ತಿಪ್ಪೇರುದ್ರಸ್ವಾಮಿಯವರು ನಮ್ಮ ಧರ್ಮ ನಿತ್ಯನೂತನವಾದದ್ದು, ವಿಜ್ಞಾನದಲ್ಲಿ ಹೊಸದಾಗಿ ಗೊತ್ತಾದ ವಿಷಯಕ್ಕೆ ಬಹಳ ಮಹತ್ತ್ವ, ವೀರಶೈವ–ಲಿಂಗಾಯತ–ಶರಣ ಧರ್ಮ ಪ್ರಾಚೀನವಾದರೂ ನಿತ್ಯ ನೂತನವಾದದ್ದು ಎಂದು ಸುಮಾರು ಹತ್ತು ನಿಮಿಷ ಮಾತನಾಡಿ ದೊಡ್ಡ ಸಭೆಯು ಸ್ತಬ್ಧವಾಗುವಂತೆ ಮಾತನಾಡಿದರು. ಪ್ರಸಾದದ ಸಮಯದಲ್ಲಿ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರನ್ನು ಹಿರಿಯ ವಿದ್ವಾಂಸರು ವಚನ ಸಾಹಿತ್ಯವನ್ನು ಬಹಳ ಪ್ರೌಢವಾಗಿ ಸಂಪಾದಿಸಿಕೊಟ್ಟ ಡಾ. ಎಲ್. ಬಸವರಾಜುರವರು ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅವರನ್ನು ಮೊದಲ ಬಾರಿ ಭೇಟಿ ಮಾಡಿ ಮಾತನಾಡಿಸಿದ್ದು ಈ ಸಮ್ಮೇಳನದಲ್ಲೇ ಈ ಸಮ್ಮೇಳನದ ಪ್ರಬಂಧಗಳ ಸಂಕಲನವನ್ನು "ಶರಣ ತತ್ವ ಚಿಂತನ", ಸಂ.3, ಸಂಪಾದಿಸಿದವರು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರೆ.

ಶ್ರೀಶೈಲ ಸೂರ್ಯ ಸಿಂಹಾಸನಾಧೀಶ್ವರ ನಿಡುಮಾಮಿಡಿ ಜಗದ್ಗುರು ಪೀಠದ ನೂತನ ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ 27.12.1990 ಗುರುವಾರ ಸಂಜೆ ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಗೂಳೂರು ಮಠದಲ್ಲಿ ನಡೆಯದ ಡ. ತಿಪ್ಪೇರುದ್ರ ಸ್ವಾಮಿಯವರು ಕಾರ್ಯಕ್ರಮಕ್ಕೆ ಮೈಸೂರಿನಿಂದ ಕಾರಿನಲ್ಲಿ ಗೂಳೂರು ಮಠಕ್ಕೆ ಬಂದರು. ಪರಮಪೂಜ್ಯ ಶ್ರೀ ಜ.ಚ.ನಿ. ಸನ್ನಿಧಿಯವರು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ವ್ಯವಸ್ಥೆ ನೋಡಿಕೊಳ್ಳುವಂತೆ ನನಗೆ ಹೇಳಿದರು. ಗ್ರಾಮಕ್ಕೂ ಮಠಕ್ಕೂ ಎರಡು ಕಿ.ಮೀ. ದೂರ. ಮತ್ತೆ, ವಿಶ್ರಾಂತಿಗೃಹಕ್ಕೆ ಅವರನ್ನು ಕರೆದುಕೊಂಡು ಬಂದೆ. ಬಹಳಷ್ಟು ಆಯಾಸವಾಗಿತ್ತು ಸ್ವಾಮಿ ಅವರಿಗೆ, ಆಗಲೇ ಸಂಜೆ ಐದರ ಸಮಯ. ಕಾರ್ ಡ್ರೈವರ್ ಸ್ವಲ್ಪ ದುಡುಕಿ ಮಾತನಾಡಿದ. ನಾನೇ ಅವನಿಗೆ ಸಮಾಧಾನ ಹೇಳಿ ಅವರಿಗೆ ಬೇರೆಯವರ ಮನೆಯಿಂದ ಬಿಸಿನೀರು, ಕಾಫಿ ತಂದುಕೊಟ್ಟು ಅರ್ಧ ಗಂಟೆ ವಿಶ್ರಾಂತಿ ತೆಗೆದುಕೊಳ್ಳಲು ವ್ಯವಸ್ಥೆ ಮಾಡಿದೆ. ಕಾರ್ಯಕ್ರಮಕ್ಕೆ ಸಿದ್ಧರಾಗಿ ನನ್ನ ಬೆನ್ನಮೇಲೆ ಕೈಹಾಕಿ "ಜಗದ್ಗುರು ಜ.ಚ.ನಿ. ಸನ್ನಿಧಿಯವರು ಒಳ್ಳೆಯ ಶಿಷ್ಯನನ್ನು ಸಂಪಾದನೆ ಮಾಡಿದ್ದಾರೆ ಎಂದು ಹೇಳಿ ಸಂತಸಪಟ್ಟರು. ಕೆಲವು ಔಷಧಿಗಳನ್ನು ತೆಗೆದುಕೊಂಡು ಕಾರ್ಯಕ್ರಮಕ್ಕೆ ಹೊರಟರು. ಗ್ರಾಮಾಂತರ ಪ್ರದೇಶವದ ಜನರು ಸಹಸ್ರ ಸಂಖ್ಯೆಯಲ್ಲಿ ನೆರೆದಿದ್ದರು. ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು, ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮಿಗಳು ಮುಂತಾದ ಗಣ್ಯ ಮಹನೀಯರು ಕಾರ್ಯಕ್ರಮದಲ್ಲಿ

ಭಾಗವಹಿಸಿದ್ದರು. ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ಮಾತನ್ನು ಕೇಳಿದ ಜಗದ್ಗುರು ಜ.ಚ.ನಿ. ಸನ್ನಿಧಿಯವರು ಬಹಳ ಸಂತೋಷಪಟ್ಟು "ಸರಸ್ವತಿ ತಮಗೆ ಸಿದ್ಧಿಸಿದ್ದಾಳೆ, ತಮ್ಮಿಂದ ಇನ್ನೂ ಹೆಚ್ಚಿನ ಕೆಲಸವಾಗಲಿ" ಎಂದು ಆತ್ಮೀಯವಾಗಿ ಸತ್ಕರಿಸಿದರು.

ಮಲ್ಲಾಡಿಹಳ್ಳಿ ಶ್ರಿ ರಾಘವೇಂದ್ರ ಸ್ವಾಮಿಗಳು ತೆಗೆದುಕೊಂಡು ಬಂದಿದ್ದ ಕಾರ್ ಕೆಟ್ಟುಹೋಗಿತ್ತು. ಅವರು ಬೆಳಗ್ಗೆ ಮಲ್ಲಾಡಿಹಳ್ಳಿಯಲ್ಲಿ ಇರಲೇಬೇಕು, ಏಕೆಂದರೆ ನೂರಾರು ಜನ ಔಷಧಿಯನ್ನು ಪಡೆಯಲು ಕಾಯುತ್ತಾ ಇರುತ್ತಾರೆ. ನಾನು ಈಗಲೇ ಹೊರಡಬೇಕು" ಎಂದು ರಾತ್ರಿ 10.00 ಗಂಟೆಯಲ್ಲಿ ಅವಸರಿಸಿದರು. ಗ್ರಾಮಾಂತರ ಪ್ರದೇಶ ಏನು ಮಾಡುವುದು ಎಂದು ಕಾರ್ಯಕರ್ತರು ತಮ್ಮತಮ್ಮಲ್ಲೇ ಚರ್ಚಿಸುತ್ತಿದ್ದಾಗ ವಿಷಯ ತಿಳಿದ ಡಾ. ತಿಪ್ಪೇರುದ್ರಸ್ವಾಮಿಯವರು "ನಾನು ಮೈಸೂರಿನಿಂದ ಬಂದಿರುವ ಕಾರ್ ಇದೆ. ಅದರಲ್ಲೇ ರಾಘವೇಂದ್ರ ಸ್ವಾಮಿಗಳನ್ನು ಕಳುಹಿಸಿಕೊಡೋಣ. ನಾನು ಹೇಗಾದರೂ ಬೆಂಗಳೂರಿಗೆ ಹೋಗುತ್ತೇನೆ" ಬಂದಾಗ ಕಾರ್ಯಕರ್ತರು ನಿಟ್ಟುಸಿರುಬಿಟ್ಟರು. ತಿಪ್ಪೇರುದ್ರ ಸ್ವಾಮಿಯವರನ್ನು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಬೆಂಗಳೂರಿಗೆ ತಮ್ಮ ಕಾರ್‌ನಲ್ಲಿ ಕರೆದುಕೊಂಡು ಹೆಚ್.ಬಿ. ಸಮಾಜ ರಸ್ತೆಯಲ್ಲಿರುವ ನಿಡುಮಾಮಿಡಿ ನಿವಾಸಕ್ಕೆ ಬಿಟ್ಟುಹೋಗಿದ್ದರು. ರಾತ್ರಿ ನಾವೆಲ್ಲಾ ಗೂಳೂರಿನಿಂದ ಬಂದಾಗ ರಾತ್ರಿ ಎರಡು ಗಂಟೆ. ಬೆಳಗ್ಗೆ ನಮಗಿಂತ ಮುಂಚೆ ಎದ್ದು ಅಧ್ಯಯನ ಮಾಡುತ್ತಾ ಕುಳಿತಿದ್ದ ತಿಪ್ಪೇರುದ್ರಸ್ವಾಮಿಯವರನ್ನು ನಾನೇ ಹೋಗಿ ಮಾತನಾಡಿಸಿದೆ. "ತಮಗೆ ರಾತ್ರಿ ಏನಾದರೂ ತೊಂದರೆ ಆಯಿತೆ? ನಾನು ಬರುವುದು ಸ್ವಲ್ಪ ತಡವಾಯ್ತು" ಎಂದಾಗ, ನಮ್ಮೆಲ್ಲರಿಗಿಂತ ಮೊದಲು ಅಣ್ಣನ ಮೇಲೆ ಅಕ್ಕನ ಮೇಲೆ ಬರೆದ ಧೀಮಂತರು ಪೂಜ್ಯ ಜ.ಚ.ನಿ. ಅವರು. ಅಂಥವರು ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ನಮ್ಮ ಅಲ್ಪ ಸೇವೆಯನ್ನು ಸಲ್ಲಿಸುವುದಕ್ಕೆ ಅವಕಾಶ ಲಭ್ಯವಾಗಿರುವುದು ನಮ್ಮ ಭಾಗ್ಯ" ಅಂದರು. ಮುಂಜಾನೆ ಔಷಧಿ ತೆಗೆದುಕೊಳ್ಳುವುದಕ್ಕೆ ಬಿಸಿನೀರು ತಂದುಕೊಟ್ಟೆ. ಆ ಸಮಯದಲ್ಲಿ ಡಾ. ತಿಪ್ಪೇರುದ್ರಸ್ವಾಮಿಯವರು ಬೆಳಗಾವಿಯ ಒಬ್ಬ ವೈದ್ಯರ ಹತ್ತಿರ ಔಷಧಿ ತೆಗೆದುಕೊಳ್ಳುತ್ತಾ ಇದ್ದರು ಎಂದು ನನ್ನ ನೆನಪು. "ಈಗ ಹೇಗಿದೆ ನಿಮ್ಮ ಆರೋಗ್ಯ?" ಎಂದು ನಾನು ಕೇಳಿದೆ. "ಈ ಔಷಧಿ ತೆಗೆದುಕೊಂಡ ಮೇಲೆ ಪರವಾಗಿಲ್ಲ" ಎಂದು ಅವರು ಹೇಳಿದರು. ಎಂಟು ಗಂಟೆಗೆ ನಿಡುಮಾಮಿಡಿ ನಿವಾಸದಿಂದ ಬಸ್‌ಸ್ಟಾಂಡ್‌ಗೆ ಹೊರಟೆವು. ನಾನು ತಿಪ್ಪೇರುದ್ರಸ್ವಾಮಿ ಅವರ ಚೀಲಗಳನ್ನು ಹಿಡಿದುಕೊಳ್ಳಲು ಹೋದಾಗ ಬೇಡ, ಬೇಡ ಅಂದರು. ನಾನು ಒತ್ತಾಯ ಮಾಡಿ ತೆಗೆದುಕೊಂಡೆ. ಬಸ್‌ಸ್ಟಾಂಡ್‌ನಲ್ಲಿ ನನ್ನ ಜೊತೆಗೆ ಇದ್ದ ಮಠದ ಇಬ್ಬರು ಹುಡುಗರಿಗೆ ಉಪಹಾರವನ್ನು ಹೋಟೆಲಿನಲ್ಲಿ ತಿಂಡಿ ಕೊಡಿಸಿದರು. ಯಾರು ಎಷ್ಟು ಹೇಳಿದರೂ ಕೇಳದೆ ಅವರೇ ಬಿಲ್ ಪಾವತಿ ಮಾಡಿದರು. ನಾನು ಈ ಹಿಂದೆ ಅವರು ಸಂಪಾದಿಸಿದ 'ಅಮುಗಿ ದೇವಯ್ಯನ ಸಾಂಗತ್ಯ' ದ ಬಗ್ಗೆ ಮಾತನಾಡಿದೆ.

ಶಿವಪಂಚಾಕ್ಷರಿ ಮಂತ್ರವನ್ನು ಕೋಟಿಗಟ್ಟಲೆ ಬರೆದ ಶ್ರೀ ಸುತ್ತೂರು ವೀರಸಿಂಹಾಸನಾಧೀಶ್ವರ ಮಂತ್ರಮಹರ್ಷಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರ ವಜ್ರ ಮಹೋತ್ಸವ ಸಮಾರಂಭದ ಸಂಪುಟ 'ಪ್ರಸಾದ'ದ ಬಗ್ಗೆಯೂ ಸಾಕಷ್ಟು ಚರ್ಚೆ ಆಯಿತು. ಅವರು ಮೈಸೂರು ಬಸ್ ಹತ್ತಿದ ನಂತರ ನಾನು ತುಮಕೂರಿಗೆ ಹೊರಟುಬಂದೆ.

ನಾಲ್ಕನೇ ಶರಣ ಸಾಹಿತ್ಯ ಸಮ್ಮೇಳನವನ್ನು ತಿಪಟೂರಿನಲ್ಲಿ ನಡೆಸುವ ಬಗ್ಗೆ ಒಂದು ಪೂರ್ವಭಾವಿ ಸಭೆಯನ್ನು ತಿಪಟೂರು ಜಯದೇವ ಹಾಸ್ಪಲ್‌ನಲ್ಲಿ ಕರೆಯಲಾಗಿತ್ತು. ಸುತ್ತೂರು ಜಗದ್ಗುರುಗಳ ಆದೇಶದಂತೆ ತುಮಕೂರಿನ ಗಣ್ಯ ವರ್ತಕರಾದ ಲಿಂ. ಎನ್.ಅರ್. ಜಗದೀಶ್‌ರವರ ಜೊತೆ ವಿದ್ವಾನ್ ಲಿಂ. ಶಿವನಂಜಯ್ಯನವರು ಕನ್ನಡ ಪ್ರಾಧ್ಯಾಪಕರಾದ ಲಿಂ. ಪ್ರೊ. ಎಂ. ಪ್ರಸನ್ನಕುಮಾರ್ ಮತ್ತು ನಾನು ಸಭೆಯಲ್ಲಿ ಪಾಲುಗೊಂಡೆವು. ಮೈಸೂರಿನಿಂದ ಲಿಂ. ಹೆಚ್. ಗಂಗಾಧರನ್ ಮುಂತಾದವರೆಲ್ಲ ಬಂದಿದ್ದರು. ಸಮ್ಮೇಳನ ನಡೆಸುವುದರ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಎಲ್ಲರೂ ಒಕ್ಕೊರಲಿನಿಂದ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡುವುದರ ಬಗ್ಗೆ ಚರ್ಚೆ ಮಾಡಿದೆವು. ಮುಂದಿನ ಇನ್ನೊಂದು ಸಭೆಗೆ 'ನಿಸರ್ಗಪ್ರಿಯ' ಎಂಬ ಕಾವ್ಯನಾಮದ ಶ್ರೀ ಕಂಬಾಳು ಬಿ. ಸಿದ್ಧಗಂಗಯ್ಯನವರು, ಮೈಸೂರು ಬೆಂಗಳೂರಿನ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಕರ್ತರು ಮತ್ತು ಸ್ಥಳೀಯ ಕಾರ್ಯಕರ್ತರು ತಿಪಟೂರಿನ ಕಂಚೀಘಟ್ಟದ ವಿರಕ್ತಮಠದಲ್ಲಿ ಪೂಜ್ಯರ ಅಧ್ಯಕ್ಷತೆಯಲ್ಲಿ ಇನ್ನೊಂದು ಸಭೆ ನಡೆಯಿತು. ಮುಂದೆ ಮೈಸೂರಿನ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಾಲಯವು. ಮೈಸೂರಿನಲ್ಲಿ ಏರ್ಪಡಿಸಿದ್ದ ಸಭೆಗೆ ಬರಲು ನನಗೆ ಆಹ್ವಾನ ಬಂತು. ಆ ಸಭೆಗೂ ಹೋಗಿದ್ದೆ. ತಿಪಟೂರು ಸಮ್ಮೇಳನದಲ್ಲಿ ತುಮಕೂರು ಜಿಲ್ಲೆಯ ವೀರಶೈವ ಕವಿಗಳ ಬಗ್ಗೆ ಒಂದು ಪ್ರಬಂಧ ಮಂಡನೆ ಮಾಡಲು ತಿಪ್ಪೇರುದ್ರಸ್ವಾಮಿಯವರ ಪತ್ರ ಬಂತು. ನಾನು ಕಟ್ಟಕಡೆಯದಾಗಿ ತಿಪ್ಪೇರುದ್ರಸ್ವಾಮಿಯವರನ್ನು ನೋಡಿದ್ದು ಸಮ್ಮೇಳನದ ಆ ಸಭೆಯಲ್ಲಿ. ಬಹಳ ಪ್ರೀತಿಯಿಂದ ಮಾತನಾಡಿದರು. ನೆನಪಿನ ಸಂಪುಟದ ಲೇಖನಗಳ ಬಗ್ಗೆ ಸಹ ಚರ್ಚೆ ಮಾಡಿದರು. ದುರ್ದೈವ, ನಮ್ಮ ಜಿಲ್ಲೆಯ ಹಿರಿಯ ರಾಜಕಾರಣಿಗಳು ಹಾಗೂ ಶರಣಧರ್ಮ ಪ್ರೇಮಿಗಳಾದ ಅಂದಿನ ಜಿಲ್ಲಾ ಮಂತ್ರಿಗಳಾಗಿದ್ದ ಟಿ.ಎಂ. ಮಂಜುನಾಥ್‌ರವರು ಹೃದಯ ರೋಗದ ತೊಂದರೆಗಾಗಿ ಆಪರೇಷನ್ ಮಾಡಿಸಿಕೊಂಡ ನಂತರವೂ ಚೇತರಿಸಿಕೊಳ್ಳದೆ ಶಿವಸಾಯುಜ್ಯವನ್ನು ಹೊಂದಿದರು. ನಾಲ್ಕನೇ ಶರಣ ಸಾಹಿತ್ಯ ಸಮ್ಮೇಳನ ತಿಪಟೂರಿನಲ್ಲಿ ನಡೆಯುವುದು ಸಾಧ್ಯವಾಗಲಿಲ್ಲ. ಮುಂದಿನ ಸಮ್ಮೇಳನ ವ್ಯವಸ್ಥೆಯಾಗುವುದರೊಳಗೆ ಡಾ. ತಿಪ್ಪೇರುದ್ರಸ್ವಾಮಿಯವರು ಮಹಾಲಿಂಗದಲ್ಲಿ ಲೀನರಾದರು.

ಡಾ. ತಿಪ್ಪೇರುದ್ರಸ್ವಾಮಿಯವರ ಆರೋಗ್ಯ ವ್ಯತ್ಯಾಸವಾದಾಗ ಬೆಂಗಳೂರಿನಿಂದ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ನವರು, ಡಾ. ಸಾ.ಶಿ. ಮರುಳಯ್ಯನವರು ಮತ್ತು ಡಾ.

ಎಸ್. ವಿದ್ಯಾಶಂಕರರವರ ಅವರನ್ನು ಮಾತನಾಡಿಸಲು ಮೈಸೂರಿಗೆ ಹೋದಾಗ ಅವರೆಲ್ಲರನ್ನೂ ಆದರದಿಂದ ಸತ್ಕರಿಸಿ, "ನೀವೆಲ್ಲರೂ ಬೆಂಗಳೂರಿನಿಂದ ನನ್ನನ್ನು ನೋಡಲಿಕ್ಕಾಗಿ ಬಂದದ್ದು ಮನಸ್ಸಿಗೆ ಹರ್ಷವನ್ನು ಉಂಟುಮಾಡಿತು' ಎಂದರು. ಆಸ್ಪತ್ರೆಯಲ್ಲಿದ್ದಾಗ ಶ್ರೀ ಎಸ್. ಶಿವಣ್ಣನವರು, ಶ್ರೀ ಜಿ.ಎ. ಶಿವಲಿಂಗಯ್ಯನವರು ಮಾತನಾಡಿಸಲು ಹೋದಾಗ ಸುಮಾರು ಎರಡು ಗಂಟೆ ಕಾಲ ಹಲವಾರು ವಿಷಯಗಳನ್ನು ಚರ್ಚಿಸಿದರಂತೆ. ತಾವು ಬರೆಯಬೇಕಾದ ಲೇಖನಗಳ ಬಗ್ಗೆ ಪೂರಕ ವಿಷಯಗಳನ್ನು ಕೇಳಿದರು ಎಂದು ಅವರಿಬ್ಬರೂ ನನಗೆ ತಿಳಿಸಿದರು. ಅವರಲ್ಲರೂ ಆಸ್ಪತ್ರೆಯಿಂದ ಹೊರಡುವಾಗ ತಿಪ್ಪೇರುದ್ರಸ್ವಾಮಿಯವರು "ನೋಡಿ, ನೀವುಗಳು ಜೊತೆಯಲ್ಲಿ ಇರುವವರೆಗೂ ನೋವನ್ನು ಮರೆತಿದ್ದೆ. ಇನ್ನು ಮೇಲೆ ಆ ನೋವನ್ನು ಅನುಭವಿಸಬೇಕಾಗುತ್ತದೆ, ಸಹಿಸಬೇಕಾಗುತ್ತದೆ" ಎಂದರಂತೆ. ಹೀಗೆ ಬಳಲಿ ಬೆಂಡಾದ ಆ ಹಿರಿಯ ಚೇತನ 28.10.1995ನೇ ಶುಕ್ರವಾರದಂದು ಮಹಾಲಿಂಗದಲ್ಲಿ ಲೀನವಾಯಿತು. ತುಮಕೂರಿನ ಸಿದ್ಧಗಂಗಾ ವಿದ್ಯಾಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಟಿ.ಕೆ. ನಂಜುಂಡಪ್ಪನವರು ಮೈಸೂರಿನಲ್ಲಿ ಡಿ.ವಿ.ಕೆ. ಮೂರ್ತಿಯವರನ್ನು ಭೇಟಿಯಾದಾಗ "ನಾನು ಮೈಸೂರಿನಲ್ಲಿ ಹತ್ತಾರು ಜನ ವಿದ್ವಾಂಸರನ್ನು ನೋಡಿದ್ದೇನೆ. ಆದರೆ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರಂತಹ ನೇರ ನುಡಿಯ, ಅಧ್ಯಯನ–ಅಧ್ಯಾಪನ–ಸಂಶೋಧನ ಮಾಡಿರುವಂತಹ ಇನ್ನೊಬ್ಬರು ವಿದ್ವಾಂಸರು ನನಗೆ ಕಂಡಿಲ್ಲ" ಎಂದರು. ಆ ಮಾತಿನಲ್ಲಿ ಅತಿಶಯೋಕ್ತಿ ಏನಿಲ್ಲ.

□

ತನುವ ಗುರುವಿಂಗೆ ಸವೆವುದು ಶೀಲ
ಮನವ ಲಿಂಗಕ್ಕೆ ಸವೆವುದು ಶೀಲ
ಧನವ ಜಂಗಮಕ್ಕೆ ಸವೆವುದು ಶೀಲ
ತನುವ ಗುರುವಿಂಬುಗೊಂಬುದು ಶೀಲ
ಮನವ ಲಿಂಗವಿಂಬುಗೊಂಬುದು ಶೀಲ
ಧನವ ಜಂಗಮವಿಂಬುಗೊಂಬುದು ಶೀಲ
ಈ ತನು ಮನ ಧನದಲ್ಲಿ ನಿರ್ವಂಚಕನು ಶೀಲವಂತನಲ್ಲದೆ
ಕಚ್ಚಿದ ಬದ್ಧ ಭವಿಯ ಶೀಲವಂತನೆಂತೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ
ಮಾತಿನ ನೀತಿಯ ಶೀಲವಂತರ ಕಂಡು ಹೇಸಿತ್ತು ಮನ

**ತೋಂಟದ ಸಿದ್ಧಲಿಂಗ ಶಿವಯೋಗಿಗಳು**

# ಕಂತೆಭಿಕ್ಷದ ಹರಿಕಾರ – ಮಹಾತ್ಮ ಶ್ರೀ ಗುರುಮಲ್ಲೇಶ್ವರರು

**ಡಾ. ಡಿ.ಎಸ್. ಗುರು**

ಎಲ್ಲೋ ಹುಟ್ಟಿ, ಹೇಗೋ ಬೆಳೆದು, ಯಾರದೋ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಪೂರೈಸಿ, ವಿಶ್ವಪರ್ಯಟನೆ ಮಾಡಿ, ಊರಿಂದ ಊರಿಗೆ ಓಡಾಡಿ, ಮತ್ತೆ ಯಾವುದೋ ಗುರುವಿನಿಂದ ದೀಕ್ಷೆ ಪಡೆದು, ಮತ್ತಾವುದೋ ಗೊತ್ತುಗುರಿಯಿಲ್ಲದ ಪ್ರದೇಶದಲ್ಲಿ ನೆಲೆನಿಂತು ಅಲ್ಲಿಯ ಜನರ ಜೀವನದಲ್ಲಿ ಬೆಳಕಾಗಿ ದೈವಾಂಶ ಸಂಭೂತರಾಗಿ ಶಾಶ್ವತವಾಗಿ ಪೂಜಿಸಲ್ಪಡುವ ಮಹಾಮಹಿಮರು ಹೀಗೊಮ್ಮೆ ಶತಮಾನಕೊಮ್ಮೆಯಾದರೂ ಭಾರತದ ಸನಾತನ ಧರ್ಮದಲ್ಲಿ ಬರುವುದನ್ನು ಗಮನಿಸಬಹುದು.

ಅಂದಿನ ಶಿವಮೊಗ್ಗ ಜಿಲ್ಲೆಯ ಚವುಳಂಗ ಗ್ರಾಮದಲ್ಲಿ ಹುಟ್ಟಿ, ಬಾಲ್ಯ ಕಳೆದ ಬಳಿಕ ಪರ್ಯಟನೆ ಮೂಲಕ ಮೈಸೂರಿಗೆ ಬಂದು ವಿದ್ಯಾಭ್ಯಾಸ ಪೂರೈಸಿ, ಮೈಸೂರು ಮಹಾರಾಜರ ಆರಾಧ್ಯದೈವವಾಗಿ ಕರುಳ ಪವಾಡದಿಂದ ಮಹಾತ್ಮರೆನಿಸಿ ಕೊಂಡು, ಮುಮ್ಮಡಿ ಕೃಷ್ಣರಾಜ ಒಡೆಯರ ಆದರಕ್ಕೆ ಪಾತ್ರರಾಗಿ, ಅರಮನೆಯ ರಾಜಗುರುವಾದವರು ಶ್ರೀ ಗುರುಮಲ್ಲೇಶ್ವರರು ಯವುದೋ ಕಾರಣದಿಂದ ಮೈಸೂರು ಜಿಲ್ಲೆಯ ದೇವನೂರು ಗ್ರಾಮಕ್ಕೆ ಬಂದು ನೆಲೆನಿಂತು, ಕಂತೆಭಿಕ್ಷ ಕಾಯಕದ ಹರಿಕಾರರಾದ ಅವರು ಶ್ರೀ ಮಹಾತ್ಮ ಗುರುಮಲ್ಲೇಶ್ವರರು ಇಂದೂ ಲಕ್ಷಾಂತರ ಜನರ ಮನದಲ್ಲಿ ನೆಲೆಸಿರುವುದು ಒಂದು ಸೋಜಿಗವಾದರೂ ಸತ್ಯ.

ನನಗಾರಿಹರೆಂದು ಸ್ಮರಿಸಲು ನಿನ್ನ
ನಾನಿರುವೆನೆಂದು ಕರುಣೆಯಿಂ ಸಲಹಿ ॥
ನೆಮ್ಮದಿ ಬದುಕನ್ನು ದಯಪಾಲಿಸಿದ
ನಿನಗೆ ಶರಣೆಂಬೆ – ಗುರುಮಲ್ಲ ॥

– ಡಿ.ಎಸ್. ಗುರು.

ನಿಜಕ್ಕೂ ಇಂತಹ ಪವಾಡಪುರುಷರು ಈ ನೆಲದಲ್ಲಿ ವಾಸವಿದ್ದರೆ ಎಂಬ ಸಂಶಯ ಹಲವು ಬಾರಿ ನನಗೆ ಮೂಡಿದ್ದುದು ನಿಜ. ಆದರೆ ನಮ್ಮ ಹಿರಿಯ ತಲೆಮಾರಿನವರು ತಮ್ಮ ಜೀವನದಲ್ಲಿ ಶ್ರೀ ಗುರುಮಲ್ಲೇಶ್ವರರ ಒಡನಾಟದಲ್ಲಿ ಅನುಭವಿಸಿ ಸಾಕ್ಷಿಯಾದ ಎಲ್ಲಾ ಘಟನೆಗಳನ್ನು, ಇದ್ದದ್ದನ್ನು ಇದ್ದ ಹಾಗೇ ಹೇಳುತ್ತಿದುದ್ದನ್ನು, ನಮಗೆ ಕಣ್ಣಮುಂದೆ ಕಟ್ಟಿಕೊಟ್ಟಂತಹ ಘಟನೆಗನ್ನು ನೋಡಿದರೆ ಅವರ ಪವಾಡಸದೃಶ ವ್ಯಕ್ತಿತ್ವವನ್ನು ನಂಬದಿರಲು

ಸಾಧ್ಯವೇ ಇಲ್ಲ. ಅಲ್ಲದೆ, ಅದಕ್ಕೆ ಅನುಗುಣವಾಗಿ ಈಗಲೂ ಕೂಡ ದೇವನೂರಿನ ಶ್ರೀ ಗುರುಮಲ್ಲೇಶ್ವರರ ಗದ್ದುಗೆಯು ಶಕ್ತಿಕೇಂದ್ರವಾಗಿ ನೆಲೆಗೊಂಡಿರುವುದು ಸಾಕ್ಷಿಯಾಗಿದೆ.

'ಅಲಕ್ ನಿರಂಜನ'ರೆಂದೇ ಪ್ರಖ್ಯಾತರಾದ ಶ್ರೀ ಗುರುಮಲ್ಲೇಶ್ವರರು ಬಡವ ಶ್ರೀಮಂತರೆನ್ನದೆ, ಮೇಲು ಕೀಳೆನ್ನದೆ, ದೀನ ದಲಿತರೆನ್ನದೆ ಎಲ್ಲರೊಡಗೂಡಿ ಭಕ್ತರೇ ಆಶ್ರಮಕ್ಕೆ ಬರಲಿ ಎನ್ನುವ ಬದಲು, ನಂಬಿ ಕರೆದರೆ ಓ ಎನ್ನನೇ ಶಿವನು ಎನ್ನುವಂತೆ ಪ್ರತಿಯೊಬ್ಬ ಭಕ್ತರ ಮನೆಯ ಬಳಿ ತಾವೇ ದಯಮಾಡಿಸಿ ಭಕ್ತರ ಆಗುಹೋಗುಗಳಿಗೆ ಸ್ಪಂದಿಸುತ್ತಿದ್ದ ರೀತಿಯಿಂದ ಅವರು ಜನಮಾನಸದಲ್ಲಿ ನೆಲೆಗೊಳ್ಳುವಂತಾಯಿತು. 'ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡಲಿ ಬಡವನಯ್ಯಾ', ಹೊಟ್ಟೆಗೇ ಊಟವಿಲ್ಲ ಎಂದವರಿಗೆಲ್ಲ ಶಿವಾಲಯದ ಅವಶ್ಯಕತೆ ಇಲ್ಲ ಎಂದು ಹೇಳಿ, ದೇವನೂರಿನಲ್ಲೇ ಭಕ್ತರಿಂದ ಒಂದು ಸಣ್ಣ ಕುಟೀರವನ್ನು ನಿರ್ಮಿಸಿ, ಅಲ್ಲಿ ಇಷ್ಟಲಿಂಗ ಪೂಜೆ ಮಾಡಿ, ಗ್ರಾಮದಲ್ಲಿನ ಮನೆಮನೆಗಳಿಂದ ಕಂತೆಭಿಕ್ಷೆ ಪಡೆದು, ದೇವರಿಗೆ ನೈವೇದ್ಯವನ್ನು ಅರ್ಪಿಸಿದ ಬಳಿಕ ಹಸಿದವರಿಗೆಲ್ಲಾ ದಾಸೋಹ ಉಣಬಡಿಸುತ್ತಿದ್ದರು. ಅಲ್ಲದೆ, ಗ್ರಾಮದಲ್ಲಿ ಕಂತೆಭಿಕ್ಷದ ಕಾಯಕ ಶಾಶ್ವತವಾಗಿ ನಡೆಯಬೇಕೆಂದು ಬಯಸಿ ಅಲ್ಲಿ ಒಬ್ಬ ಶರಣರನ್ನು ನೇಮಿಸಿ ಆಶೀರ್ವದಿಸಿ ಆ ಗ್ರಾಮದಲ್ಲೊಂದು ದಾಸೋಹ ಭಿಕ್ಷದ ಮಠದ ಸ್ಥಾಪನೆಗೆ ಕಾರಣೀಭೂತರಾದರು.

ಬಂದೆ ನೀನು ಧರೆಗಿಳಿದು ತಂದೆ
ಕಾಪಾಡಲು ನಮ್ಮನ್ನು ಪಣತೊಟ್ಟು ನಿಂತೆ ॥
ಹಸಿದ ಹೊಟ್ಟೆಯ ತುಂಬುತಲಿರುವೆ
ಅನ್ನದಾಸೋಹಿ ನೀ – ಗುರುಮಲ್ಲ ॥
–ಡಿ.ಎಸ್. ಗುರು

ಕಂತೆಭಿಕ್ಷದ ಕಾಯಕವು ಕೇವಲ ಹಸಿದವರಿಗೆ ದಾಸೋಹ ನೀಡುವುದಷ್ಟೆ ಅಲ್ಲ, ಅದು ಒಂದು ರೀತಿಯ ಪವಿತ್ರವಾದ ಕಾಯಕ. ಧಾನ್ಯಸಂಗ್ರಹದ ಜೊತೆ ಜೀವನಾಧಾರ ವಾದ ಕಾಯಕ. ಸಮಾಜದ ಶ್ರೀಮಂತರು ಮತ್ತು ರೈತರು ಹಾಗೂ ಆರ್ಥಿಕವಾಗಿ ಹಿಂದುಳಿದವರ ನಡುವಣ ಕೊಂಡಿಯಾಗುವಂತಹುದು. ಕಾಯಕದಿಂದ ಗಳಿಸಿದ ಒಂದು ಭಾಗವನ್ನು ಸಮಾಜದ ಸೇವೆ ಮಾಡುವವರಿಗೆ ಹಂಚುತ್ತಾ ಮತ್ತೊಬ್ಬರ ಏಳಿಗೆಗೆ ಕಾರಣವಾಗುವ ಉದಾತ್ತ ಗುಣವನ್ನು ಇದು ಪ್ರತಿಬಿಂಬಿಸುತ್ತದೆ. ಮಿಗಿಲಾಗಿ, ಸಮಾಜದಲ್ಲಿ ಸಮಾನತೆ ಮತ್ತು ಪರಸ್ಪರ ಸಹಕಾರವನ್ನು ಬೆಳೆಸುವ ಒಂದು ಸಾಂಸ್ಕೃತಿಕ ಮೌಲ್ಯವೆಂದೂ ಭಾವಿಸಬಹುದು.

ಬಹುಶಃ 12ನೇ ಶತಮಾನದಲ್ಲಿ ಜಗಜ್ಯೋತಿ ಬಸವೇಶ್ವರರು ಕಲ್ಯಾಣ ಪಟ್ಟಣ ಒಂದರಲ್ಲಿ ಮಾತ್ರವೇ ಸ್ಥಾಪಿಸಿದ್ದ ದಾಸೋಹದ ಮಹಾಮನೆಯಂತಹ ಸಂಸ್ಥೆಗಳನ್ನು ನೂರಾರು ಸಂಖ್ಯೆಯಲ್ಲಿ ತಾವು ನೆಲೆನಿಂತ ಪ್ರತಿ ಗ್ರಾಮದಲ್ಲೂ ಸ್ಥಾಪಿಸಿ ಕಂತೆಭಿಕ್ಷದ

ದಾಸೋಹದ ಮಠಗಳನ್ನು ಪ್ರಪ್ರಥಮವಾಗಿ ಹುಟ್ಟುಹಾಕಿದ ಕೀರ್ತಿ ಶ್ರೀ ಗುರುಮಲ್ಲೇಶ್ವರರಿಗೆ ಸಲ್ಲುತ್ತದೆ. ಅಂತಹ ಗ್ರಾಮಗಳಲ್ಲಿ ಜನರಿಗೆ ಕಂತೆಭಿಕ್ಷದ ಕಾಯಕದ ಪ್ರಾಮುಖ್ಯತೆಯನ್ನು, ಅದರ ಮೌಲ್ಯವನ್ನು ತಿಳಿಸಿಕೊಟ್ಟು ಆಹಾರವೇ ಪ್ರಸಾದವಾಗುವ ಮಹತ್ವವನ್ನು ಸಾರಿ ಹೇಳಿದ ಹರಿಕಾರರು ಶ್ರೀ ಗುರುಮಲ್ಲೇಶ್ವರರು ಎಂದರೆ ತಪ್ಪಾಗಲಾರದು. ಈಗಲೂ ಸಹ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸುಮಾರು 300ಕ್ಕೂ ಹೆಚ್ಚು ಭಿಕ್ಷದ ಶಾಖಾ ಮಠಗಳಿದ್ದು, ಪ್ರತಿನಿತ್ಯ ಕಂತೆಭಿಕ್ಷದ ಕಾಯಕದ ಜೊತೆ ದಾಸೋಹವೂ ನಡೆಯುತ್ತಿದೆ. ಬಸವಯುಗ ಮರುಕಳಿಸಿದುದು ಅಥವಾ ಬಸವತತ್ವ ನಿಜಾಚರಣೆಗೆ ಬಂದದ್ದು ಬಹುಶಃ ದೇವನೂರಿನ ಶ್ರೀ ಗುರುಮಲ್ಲೇಶ್ವರರ ಕಾಲದಲ್ಲಿ ಎಂದರೆ ಅತಿಶಯೋಕ್ತಿಯಲ್ಲ. ಕಾಯಕದಿಂದಲೇ ಗಳಿಸಬೇಕು ಅದು ಮಾತ್ರವೇ ನಮ್ಮದಾಗುವುದು, ಮತ್ತೇನೂ ನಮ್ಮದಲ್ಲ. ಹಾಗೆ ಕಾಯಕ ಮಾಡದ ಮನುಷ್ಯ ಆಹಾರ ಸೇವಿಸಲು ಯೋಗ್ಯನಲ್ಲ ಎಂಬ ಬಸವಣ್ಣನವರ ವಾಣಿಯನ್ನು ಅಕ್ಷರಶಃ ಸಾಮಾನ್ಯ ಜನರಿಗಷ್ಟೇ ಅಲ್ಲದೆ ಮೈಸೂರು ರಾಜ ಒಡೆಯರಿಗೂ ತಿಳಿಹೇಳಿದವರು ಮಹಾತ್ಮ ಶ್ರೀ ಗುರುಮಲ್ಲೇಶ್ವರರು.

ಮೈಸೂರಿನಲ್ಲಿ ಅಂದೊಂದು ದಿನ ಶ್ರಾವಣ ಮಾಸದ ಪ್ರವಚನದಲ್ಲಿ ಪ್ರವಚನಕಾರ ರೊಬ್ಬರು ಅವರ ಪ್ರವಚನದಲ್ಲಿ "ಹಿಂದೆ ಕಾಯಕತಪಸ್ವಿಗಳು ಹಾಗೂ ಸಾಧನೆ ಮಾಡಿದ ಶರಣರಿದ್ದರು. ಈಗ ಯಾರಿದ್ದಾರೆ ಅಂತಹವರು? ಎಲ್ಲರೂ ಕಪಟಿಗಳು" ಎಂಬಂಥ ಮಾತುಗಳ ಮೂಲಕ ಶರಣರನ್ನು ಜರಿಯತೊಡಗುತ್ತಾರೆ. ಅಷ್ಟರಲ್ಲಿ ಅಲ್ಲೇ ಪ್ರವಚನ ಕೇಳುತ್ತಿದ್ದ ಶ್ರೀ ಗುರುಮಲ್ಲೇಶ್ವರರು "ಯಾಕಿಲ್ಲ?, ಅಂದು ಇದ್ದಂತಹ ಸೂರ್ಯ ಚಂದ್ರರು ಈಗಿಲ್ಲವೇ? ಮಳೆಬೆಳೆಗಳು ಆಗುತ್ತಿಲ್ಲವೇ?" ಎಂದು ಹೇಳಿ ಅಲ್ಲೇ ಇದ್ದ ಚಾಕುವಿನಿಂದ ತಮ್ಮ ಹೊಟ್ಟೆಯನ್ನು ಬಗೆದು ಕರುಳಮಾಲೆ ಹಾಕಿಕೊಂಡು ಭೀಕರ ರೂಪವನ್ನು ತಳೆಯುತ್ತಾರೆ. ಆಗ ಅಲ್ಲಿದ್ದವರೆಲ್ಲರೂ ಕ್ಷಮೆ ಕೇಳಿ ಅವರನ್ನು ಶಾಂತರಾಗಿಸುತ್ತಾರೆ. ಈ ಕರುಳಪವಾಡದ ಬಗ್ಗೆ ಕೇಳಿದ ಮುಮ್ಮಡಿ ಕೃಷ್ಣರಾಜ ಒಡೆಯರು ಶ್ರೀ ಗುರುಮಲ್ಲೇಶ್ವರ ರನ್ನು ಭೇಟಿಯಾಗಿ ಪ್ರಸನ್ನರಾಗಬೇಕೆಂದು ಪ್ರಾರ್ಥಿಸಿ, ಅವರ ಆಶೀರ್ವಾದ ಪಡೆದು, ಅವರನ್ನು ರಾಜಗುರುವಾಗಿ ಸ್ವೀಕರಿಸುತ್ತಾರೆ. ತದನಂತರ ಗುರುಮಲ್ಲೇಶ್ವರರು ಮೈಸೂರಿನಲ್ಲಿ ನೆಲೆಯೂರಿದ್ದಷ್ಟೇ ಕಾಲವೂ ಅರಮನೆಗೆ ಪ್ರತಿನಿತ್ಯ ಕಂತೆಭಿಕ್ಷದ ಕಾಯಕಕ್ಕೆ ಹೋಗುತ್ತಿದ್ದುದು ನಿಜಕ್ಕೂ ಅದ್ಭುತ ವಿಸ್ಮಯವೇ ಸರಿ.

ಶ್ರೀ ಗುರುಮಲ್ಲೇಶ್ವರರನ್ನು ಗುರುವಾಗಿ ಪಡೆದ ಮಹಾರಾಜರು ಒಮ್ಮೆ ಗುರುಗಳಿಗೆ ಚಿನ್ನದ ತಟ್ಟೆಯಲ್ಲಿ ಮುತ್ತು ರತ್ನ ವಜ್ರ ವೈಢೂರ್ಯಗಳನ್ನು ನೀಡಲು ಬಯಸಿದಾಗ, ಗುರುಮಲ್ಲೇಶ್ವರರು ಮಹಾರಾಜರಿಗೆ "ಇದು ನಿಮ್ಮ ಕಾಯಕದಿಂದ ಬಂದದ್ದಲ್ಲ, ಇದು ಪ್ರಜೆಗಳ ಸ್ವತ್ತು, ಆದ್ದರಿಂದ ಇದೆಲ್ಲಾ ಪ್ರಜೆಗಳಿಗೆ ಸೇರಬೇಕಾದದ್ದು. ಕಾಯಕದಿಂದ ಬಂದದ್ದು ಮಾತ್ರ ಲಿಂಗಕ್ಕೆ ಅರ್ಪಿತ. ಹಾಗಾಗಿ ನಿಮ್ಮ ಸ್ವಂತ ದುಡಿಮೆಯ ಫಲ ಏನಾದರು ಇದ್ದರೆ

ಕೊಡಿ" ಎನ್ನುತ್ತಾ ವಿನಮ್ರವಾಗಿ ಕಾಣಿಕೆಯನ್ನು ತಿರಸ್ಕರಿಸುತ್ತಾರೆ. ವಜ್ರ ವೈಢೂರ್ಯಗಳ ರತ್ನಾಭರಣಗಳ ಕಾಣಿಕೆಯನ್ನು ಕಾಯಕದಿಂದ ಬಂದದ್ದಲ್ಲ ಎಂದು ತಿರಸ್ಕರಿಸಿದಂತಹ ಒಬ್ಬ ಸಂತ, ಶರಣ ಕೆಲವೇ ಶತಮಾನಗಳ ಹಿಂದೆ ನಮ್ಮ ಸಮಾಜದಲ್ಲಿ ಇದ್ದರು ಎನ್ನುವುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕಿಲ್ಲ. ಇದರಿಂದ ಪ್ರಭಾವಿತರಾದ ಮಹಾರಾಜರು ಮುಂದಿನ ಕೆಲವೇ ದಿನಗಳಲ್ಲಿ ಮಾರುವೇಷದಲ್ಲಿ ಹೋಗಿ ಕಮ್ಮಾರನ ಬಳಿ ಕಾಯಕ ಮಾಡಿ ದುಡಿದ ಹಣವನ್ನು ಶ್ರೀ ಗುರುಮಲ್ಲೇಶ್ವರರಿಗೆ ಕಾಣಿಕೆಯಾಗಿ ನೀಡುತ್ತಾರೆ. ಹೀಗೆ ಕಾಯಕದ ಮಹತ್ವ ಹಾಗೂ ಕಂತೆಭಿಕ್ಷದ ಕಾಯಕದ ಮೌಲ್ಯವನ್ನು ಮಹಾರಾಜರನ್ನೂ ಒಳಗೊಂಡಂತೆ ಇಡೀ ಭಕ್ತ ಸಮಾಜಕ್ಕೆ ತಿಳಿಸಿಕೊಟ್ಟ ಮಹಾಮಹಿಮರು ಮಹಾತ್ಮ ಶ್ರೀ ಗುರುಮಲ್ಲೇಶ್ವರರು.

ಹೀಗೆ ಕರುಳಪವಾಡದಿಂದ ಪವಾಡಪುರುಷರೆಂದೇ ಪ್ರಸಿದ್ಧಿಯಾದ ಗುರುಮಲ್ಲೇಶ್ವರರು ಮಾಡಿದ ಅದ್ಭುತ ಪವಾಡಗಳು ಅಷ್ಟಿಷ್ಟಲ್ಲ. ಮುಂದೆ ಭವಿಷ್ಯದಲ್ಲಿ ಘಟಿಸುವ ಘಟನೆಗಳನ್ನು ಹೀಗೆಯೇ ಆಗುತ್ತವೆ ಎಂದು ಹೇಳುವುದು, ದೇವನೂರಿನಲ್ಲಿ ನೆಲೆನಿಲ್ಲಲು ಕಾರಣವಾದ ಬ್ರಹ್ಮಪಿಶಾಚಿಯನ್ನು ಹೋಗಲಾಡಿಸಿದ್ದು, ಭಕ್ತರ ಮನೆಯಲ್ಲಿ ನಡೆಸಿದ ಹೋಳಿಗೆ ಪವಾಡ, ಕುಷ್ಠರೋಗವನ್ನು ವಾಸಿಮಾಡಿದ ಪವಾಡ, ಸತ್ತೇಹೋಗಿದ್ದ ಎನ್ನುವ ಮಗುವನ್ನು ಬದುಕಿಸಿದ ಪವಾಡ, ಮೊದಲಾದವುಗಳು ಸಾಮಾನ್ಯ ಜನರಿಂದ ಆಗುವಂತಹುಗಳಲ್ಲ, ಮಹಾತ್ಮರಿಗೆ ಮಾತ್ರ ಸಾಧ್ಯವಾಗುವಂಥವು. ಮಹಾತ್ಮ ಶ್ರೀ ಗುರುಮಲ್ಲೇಶ್ವರರು ಇಂತಹ ಅನೇಕ ಅಸಾಧ್ಯವೆನಿಸುವ ಘಟನೆಗಳನ್ನು ಸಾಧ್ಯವಾಗಿಸುವ ಮೂಲಕ ಸ್ವಲೀಲಾ ನಿರಂಜನರೆಂದೇ ಪ್ರಖ್ಯಾತಿಯಾದರು.

ಒಮ್ಮೆ ಅಥಣಿಯ ಶ್ರೀ ಮುರಘರಾಜೇಂದ್ರ ಶಿವಯೋಗಿಗಳು ದೇವನೂರಿಗೆ ಬರುತ್ತಾರೆ. ಇನ್ನೇನು ದೇವನೂರನ್ನು ಸಮೀಪಿಸಬೇಕು ಎನ್ನುವಷ್ಟರಲ್ಲಿ ತಾವು ಮೆಟ್ಟಿದ್ದ ಪಾದುಕೆಗಳನ್ನು ಕಳಚಿದರಂತೆ. ಯಾಕೆಂದು ಜೊತೆಗಿದ್ದವರು ಕೇಳಿದಾಗ, "ಅಯ್ಯಾ, ಇದು ಪುಣ್ಯಭೂಮಿ, ಮಹಾತ್ಮ ಶ್ರೀ ಗುರುಮಲ್ಲೇಶ್ವರರ ಊರು ದೇವನೂರು, ಇದನ್ನು ಪಾದುಕೆಯಿಂದ ಮೆಟ್ಟುವುದುಂಟೆ" ಎಂದರಂತೆ. ಈ ಪ್ರಸಂಗ ಶ್ರೀ ಗುರುಮಲ್ಲೇಶ್ವರರ ಸಾಧನೆ, ಸಂಕಲ್ಪ ಹಾಗೂ ಔನ್ನತ್ಯಕ್ಕೆ ಕನ್ನಡಿಯಂತಿದೆ.

ಹೀಗೆ ತುಂಬ ಸರಳತೆಯಿಂದ ಜನರಿಗೆ ಸ್ಪಂದಿಸುವ ಮೂಲಕ, ಹಲವು ಹತ್ತು ಪವಾಡಗಳ ಮೂಲಕ, ಕಾಯಕ ದಾಸೋಹದ ತತ್ವಗಳನ್ನು ಪಸರಿಸುವ ಮೂಲಕ, ಕಂತೆಭಿಕ್ಷದ ಕಾಯಕವನ್ನು ಅನುಷ್ಠಾನಗೊಳಿಸುವ ಮೂಲಕ, ಯೋಗಿಗಳಾಗಿ, ಸ್ವಲೀಲಾ ಗುರುಮಲ್ಲೇಶ್ವರರೆಂದೆನಿಸಿ ತಮ್ಮ ದರ್ಶನಾಶೀರ್ವಾದಗಳಿಂದ ಜನರ ಕಷ್ಟಗಳನ್ನು ಪರಿಹರಿಸುತ್ತಿದ್ದ ಶ್ರೀ ಗುರುಮಲ್ಲೇಶ್ವರರು 1899ರ ಜೂನ್ 25 ಸೋಮವಾರದಂದು ದೇಹಬಾಧೆ ಕಾಡುತ್ತಿದ್ದರೂ, ಕಿಂಚಿತ್ತು ನರಳದೆ ಸಮಾಧಿಸ್ಥಿತಿಯಲ್ಲಿದ್ದು ಲಿಂಗದಲ್ಲಿ

ಲೀನವಾಗುತ್ತಾರೆ. ಎಲ್ಲೋ ಉಗಮವಾಗಿ, ಬೆಟ್ಟ, ಕಾಡು, ಕಣಿವೆ, ಗುಡ್ಡಗಾಡುಗಳಲ್ಲಿ ಭೋರ್ಗರೆಯುತ್ತಾ ಹರಿದು, ಧುಮ್ಮಿಕ್ಕಿ ಮನುಷ್ಯನ ಕಣ್ಣುಗಳಿಗೆ ಆನಂದವನ್ನುಂಟುಮಾಡಿ ಬಯಲು ಸೀಮೆಗಳಲ್ಲಿ ಶಾಂತವಾಗಿ ಹರಿದು, ತನ್ನ ಅಗಾಧ ಶಕ್ತಿಯಿಂದ ಎಲ್ಲವನ್ನೂ ಬೆಳಕಾಗಿಸಿ, ಅನೇಕ ತೀರ್ಥಕ್ಷೇತ್ರಗಳಿಗೆ ಆಸರೆಯಾಗಿ, ರೈತರ ಜೀವನಧಾರೆಯಾಗಿ, ಸಕಲ ಜೀವಕೋಟಿಗಳನ್ನು ತಣಿಸಿ ಸಮುದ್ರದಲ್ಲಿ ಸೇರುವ ನದಿಯಂತೆ ಮಹಾತ್ಮ ಶ್ರೀ ಗುರುಮಲ್ಲೇಶ್ವರರು ನಮ್ಮೆಲ್ಲರ ಬಾಳಿಗೆ ಬೆಳಕಾಗಿ ನಮ್ಮೆಲ್ಲಾ ಕಷ್ಟಗಳನ್ನು ಪರಿಹರಿಸಿ ಲಿಂಗದಲ್ಲಿ ಲೀನವಾದರು. ನಂತರ ಭಕ್ತರೆಲ್ಲಾ ಸೇರಿ ಶ್ರೀ ಗುರುಮಲ್ಲೇಶ್ವರರ ಗುರುಗಳಾದ ಶ್ರೀ ಮುಪ್ಪಿನಸ್ವಾಮಿಯವರ ಗದ್ದುಗೆಯ ಹತ್ತಿರವೇ ಶ್ರೀ ಗುರುಮಲ್ಲೇಶ್ವರರ ಗದ್ದುಗೆಯನ್ನೂ ನಿರ್ಮಿಸಿ ದಾಸೋಹ ಮಹಾಸಂಸ್ಥಾನ ಮಠಕ್ಕೆ ಅಡಿಪಾಯ ಹಾಕಿದರು.

ಒಳ್ಳೆಯದು ಮಾಡಲು ಭಗವಂತ
ಜನ್ಮವಿತ್ತನು ಒಂದು ಮಗುವಿಗೆ ॥
ಸಾಧ್ಯವಾದಲ್ಲಿ ತಾನೇ ಅವತರಿಸುವನು
ಅವತಾರಪುರುಷ ನೀ – ಗುರುಮಲ್ಲ ॥

—ಡಿ.ಎಸ್. ಗುರು

ಅಂದು ಭಕ್ತರ ದಾನಧರ್ಮಗಳಿಂದ ಸ್ಥಾಪಿತವಾದ ಶ್ರೀಮಠವು ಶ್ರೀ ಗುರುಮಲ್ಲೇಶ್ವರರ ಕರಸಂಜಾತರಾದ ಶ್ರೀ ಭಿಕ್ಷದ ರಾಚಪ್ಪಸ್ವಾಮಿಗಳು, ಶ್ರೀ ತೋಂಟದಾರ್ಯ ಸ್ವಾಮಿಗಳು, ಶ್ರೀ ಶಿವಬಸವ ಸ್ವಾಮಿಗಳು, ಶ್ರೀ ಬಸವಣ್ಣ ಸ್ವಾಮಿಗಳು ಹಾಗೂ ಈಗಿನ ಶ್ರೀ ಮಹಾಂತ ಸ್ವಾಮೀಜಿಗಳವರ ಮುಂದಾಲೋಚನೆ ಹಾಗೂ ದೂರದರ್ಶಿತ್ವದಿಂದ ಮಹಾಸಂಸ್ಥಾನ ದಾಸೋಹಮಠವಾಯಿತು. ಇಂದು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ವಿವಿಧ ಸೇವೆಗಳಲ್ಲಿ ಎಷ್ಟೇ ತೊಡಗಿಸಿಕೊಂಡಿದ್ದರೂ, ಶ್ರೀಮಠವು ಧಾರ್ಮಿಕವಾಗಿ ಅದರಲ್ಲೂ ಸಮಸಮಾಜವನ್ನು ರೂಪಿಸುವ ದಿಕ್ಕಿನಲ್ಲಿ, ಇವತ್ತಿನ ತಂತ್ರಜ್ಞಾನ ಯುಗದಲ್ಲೂ ಕೂಡ, ಭಕ್ತರ ಮಠವಾಗಿಯೇ ಉಳಿದಿದೆ.

ಈಗಿನ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಮಹಾಂತಸ್ವಾಮೀಜಿಯವರು ಬಹಳ ಮೌನಿಗಳು ಹಾಗೂ ಸದಾ ಶ್ರೀ ಗುರುಮಲ್ಲೇಶ್ವರರ ಮೇಲೆ ಭಕ್ತಿಭಾವವನ್ನು ಇಟ್ಟುಕೊಂಡಿರುವವರು. ಶ್ರೀಮಠದ ಸೇವೆಯಲ್ಲಿ ಕಾಯ ವಾಚ ಮನಸ ತೊಡಗಿಸಿ ಕೊಂಡಿರುವ ಅವರು ಶ್ರೀಮಠದ ಅಭ್ಯುದಯಕ್ಕೆ ಕಾರಣರಾದರೂ ಕೂಡ, "ತನ್ನದೇನೂ ಇಲ್ಲ, ತಾನು ಏನೂ ಮಾಡುತ್ತಿಲ್ಲ, ಶ್ರೀ ಗುರುಮಲ್ಲೇಶ್ವರರೇ ಎಲ್ಲದಕ್ಕೂ ಕಾರಣ, ಅವರ ಪ್ರೇರಣೆ ಅಷ್ಟೆ" ಎನ್ನುವಂಥ ಒಂದು ತರಹದ ಸಮರ್ಪಿತ, ಸಮಚಿತ್ತ ಭಾವದಿಂದ ಶ್ರೀಮಠವನ್ನು ಮುನ್ನಡೆಸುತ್ತಿದ್ದಾರೆ. ಎಲ್ಲದಕ್ಕೂ ಮಿಗಿಲಾಗಿ, ಪೂಜ್ಯ ಶ್ರೀಗಳು ಶ್ರೀಮಠದ ಸೇವೆಯಲ್ಲಿ ಪೀಠಾಧಿಪತಿಗಳಂತೆ ತೊಡಗಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಶ್ರೀಮಠದ ಭಕ್ತರಲ್ಲಿ ತಾವೂ ಒಬ್ಬರು, ಶ್ರೀಮಠವು ಭಕ್ತರ ಮಠ, ಭಕ್ತರೇ ಇಲ್ಲಿ ಪ್ರಧಾನ ಎಂದು ಶ್ರೀಮಠವನ್ನು

ಮುನ್ನಡೆಸುತ್ತಿರುವ ರೀತಿಯನ್ನು ಗಮನಿಸಿದರೆ, ಮಹಾತ್ಮ ಶ್ರೀ ಗುರುಮಲ್ಲೇಶ್ವರರ ಶಕ್ತಿ ಇನ್ನೂ ಶ್ರೀಮಠದಲ್ಲಿ ಕೇಂದ್ರೀಕೃತವಾಗಿದೆ ಎನ್ನುವಂತಿದೆ.

ಪ್ರಾಣದಾಯಕ ನೀನು, ನೀನಿಲ್ಲದಿರೆ
ಗರಿ ಮುರಿದು ಹಾರಲಾರದ ಗಿಳಿ ನಾನು ॥
ಜೀವನೋತ್ಸಾಹದಲಿ ತೇಲಲಾರೆನು
ಜೀವದಾಯಕನು ನೀನು – ಗುರುಮಲ್ಲ ॥

–ಡಿ.ಎಸ್. ಗುರು

ಇಂದಿಗೂ ಸಹ ಎಂತಹ ದೊಡ್ಡ ಆರಾಧನೆಯಾಗಲಿ, ರಥೋತ್ಸವವಾಗಲಿ, ಲಕ್ಷ ಲಕ್ಷಾಂತರ ಭಕ್ತರು ಸೇರುವ ಕಾರ್ಯಕ್ರಮವಾಗಲಿ ಯಾವುದೇ ಪೂರ್ವಭಾವಿ ಸಭೆ ನಡೆಸದೆ, ಪೂರ್ವತಯಾರಿ ಇಲ್ಲದೆ ಬಹಳ ಸುಗಮವಾಗಿ ಸುಲಲಿತವಾಗಿ ಜರುಗುವುದಕ್ಕೆ ಶ್ರೀ ಮಹಾಂತಸ್ವಾಮೀಜಿಯವರು ಶ್ರೀ ಗುರುಮಲ್ಲೇಶ್ವರರ ಮೇಲೆ ಇಟ್ಟಿರುವ ನಂಬಿಕೆ, ಶ್ರದ್ಧೆಗಳೇ ಕಾರಣ. ಇದು ಭಕ್ತರ ಮಠ, ಭಕ್ತರು ಭಕ್ತರಿಗೋಸ್ಕರ ಭಕ್ತರಿಂದಲೇ ಮುನ್ನಡೆಸುವಂತಹ ಶ್ರೀಮಠ ಎಂಬ ಭಾವವನ್ನು ತಳೆದಿರುವುದು ಎದ್ದುಕಾಣುತ್ತದೆ. ಈಗಲೂ ಸಹ ದಿನಂಪ್ರತಿ 24 ಗಂಟೆಯೂ ಹಸಿದು ಬಂದವರಿಗೆ ಇಲ್ಲಿ ಅನ್ನದಾಸೋಹ ನಡೆಯುತ್ತಲೇ ಇದೆ. 19ನೇ ಶತಮಾನದಲ್ಲಿ ಶ್ರೀ ಗುರುಮಲ್ಲೇಶ್ವರರು ದಾಸೋಹಕ್ಕೆಂದು ಹಚ್ಚಿದ ಬೆಂಕಿ ಇನ್ನೂ ಆರಿಲ್ಲ ಎನ್ನುವ ಮಾತು ಸಹ ಉಳಿದು ಜನಜನಿತವಾಗಿದೆ. ಅಲ್ಲದೆ ಯಾರೇ ಆಗಲಿ, ಎಷ್ಟೇ ಶ್ರೀಮಂತರಿರಲಿ, ಬಡವರಿರಲಿ, ಪೊಲೀಸ್ ಅಧಿಕಾರಿಯಾಗಿರಲಿ, ರಾಷ್ಟ್ರ ಅಥವಾ ರಾಜ್ಯಮಟ್ಟದ ಆಡಳಿತಾಧಿಕಾರಿಯಾಗಿರಲಿ, ರಾಜಕೀಯ ಧುರೀಣರಾಗಿರಲಿ, ವಿಶ್ವವಿದ್ಯಾನಿಲಯದ ಕುಲಪತಿಗಳಾಗಿರಲಿ, ಸಾಮಾನ್ಯ ಪ್ರಜೆಯಾಗಿರಲಿ, ಎಲ್ಲರಿಗೂ ಇಲ್ಲಿ ಸಮಾನ ಗೌರವಾದರ ದೊರೆಯುತ್ತದೆ. ಎಲ್ಲರೂ ಸಹಪಂಕ್ತಿಯಲ್ಲೇ ಪ್ರಸಾದ ಸ್ವೀಕರಿಸಬೇಕು; ಯಾಬುದೇ ತಾರತಮ್ಯವಿಲ್ಲ, ಭೇದಭಾವವಿಲ್ಲ.

ಯಾರೇ ಆಗಲಿ ಶ್ರೀಮಠದ ಪ್ರಾಂಗಣಕ್ಕೆ ಕಾಲಿಡಬೇಕಾದರೆ ತಮ್ಮ ಅಹಂ, ಬಿಗುಮಾನ, ಪದವಿ ಕಿರೀಟ ಅಥವಾ ಪದನಾಮ ಎಲ್ಲವನ್ನು ಹೊರಗೆ ಬಿಟ್ಟು ಸಾಮಾನ್ಯ ಭಕ್ತನಂತೆ ಒಳಹೋಗಬೇಕು. ಅಂತಹ ಭಕ್ತರು ಮಠದ ಯಾವ ಮೂಲೆಯಲ್ಲಾದರೂ ಹೇಗಾದರೂ ಸ್ವತಂತ್ರವಾಗಿ ಓಡಾಡಬಹುದು. ಮಠದ ಒಳಗಡೆ ಇದ್ದಷ್ಟು ಸಮಯ ನಾವು ಏನೇನೂ ಅಲ್ಲ ಅನ್ನುವ ಭಾವನೆ ಒಂದು ಕಡೆ ಆದರೆ, ಮತ್ತೊಂದು ಕಡೆ ನಾನೇ ಎಲ್ಲವೂ, ಬ್ರಹ್ಮಾಂಡವು ಸಹ ಎನ್ನುವ ಭಾವನೆ ಬರುತ್ತದೆ. ಎಲ್ಲವೂ ಇದೆ ಆದರೆ ಏನೂ ಇಲ್ಲ, ಅಥವಾ ನನ್ನದೆನ್ನುವುದು ಏನೂ ಇಲ್ಲ ಆದರೆ ಎಲ್ಲವೂ ನನ್ನದೇ ಎನ್ನುವ ಭಾವನೆ ತುಂಬಿ ಒಂದು ರೀತಿಯ ವಿಶೇಷವಾದ ಆಂದೋತ್ಸಾಹದಲ್ಲಿ ತೇಲಾಡುವಂತಾಗುತ್ತದೆ. ಬಹುಶಃ ಅಲ್ಲಮಪ್ರಭುವಿನ ಬಯಲು ಎಂಬುದರ ಅರ್ಥ ಇದೇ ಇರಬೇಕು. ಬಯಲು ಎಂದರೆ ವಿಶಾಲವಾದದ್ದು, ಆದರೆ ಏನೂ ಇಲ್ಲ ಮತ್ತು ಒಂದರ್ಥದಲ್ಲಿ ಎಲ್ಲವೂ ಇದೆ ಆದರೆ ಅದು ಬಯಲು

ನನ್ನದಲ್ಲ ಎಂಬ ಅತಿ ಎತ್ತರದ ಆಂತರಂಗಿಕ ಶ್ರೀಮಂತಿಕೆಯನ್ನು ಹೊಂದುವ ರೀತಿಯದ್ದಾಗಿದೆ. ಇಲ್ಲಿ ಎಲ್ಲರೂ ಸ್ವತಂತ್ರರೇ, ತಾವೇ ಅಡುಗೆ ಮಾಡಲು ಸಹಕರಿಸಬಹುದು, ಊಣಬಡಿಸಲು ಸಹಕರಿಸಬಹುದು, ದಾಸೋಹ ಸ್ವೀಕರಿಸಬಹುದು ಹಾಗೂ ತಮ್ಮದೇ ಮಠವೆನ್ನುವ ಭಾವನೆಯಿಂದ ಓಡಾಡಬಹುದು, ಸೇವೆಯಲ್ಲಿ ತೊಡಗಿಸಿಕೊಳ್ಳಬಹುದು.

ಮತ್ತೊಂದು ವೈಶಿಷ್ಟ್ಯವೆಂದರೆ ಈಗಿನ ವ್ಯಾವಹಾರಿಕ ಕಾಲಘಟ್ಟದಲ್ಲಿ, ಅಂದರೆ ಕೆಲಸಗಾರರಿಗೆ ಸಂಬಳವನ್ನು ನೀಡಿ ಸೇವೆ ಮಾಡಿಸಿಕೊಳ್ಳಬೇಕಾದ ಪರಿಸ್ಥಿತಿ ಇರುವಾಗ, ಶ್ರೀ ಗುರುಮಲ್ಲೇಶ್ವರ ಮಠದಲ್ಲಿ ಕಸ ತೆಗೆಯುವುದರಿಂದ ಹಿಡಿದು, ಅಡುಗೆ ಮಾಡುವವರು ಹಾಗೂ ಬಡಿಸುವವರು, ಗದ್ದುಗೆ ಪೂಜೆಗೆ ತಯಾರು ಮಾಡುವವರು ಹಾಗೂ ಪೂಜೆ ಮಾಡುವವರನ್ನೂ ಸೇರಿಸಿ ಯಾರಿಗೂ ಯಾವುದೇ ರೀತಿಯ ಸಂಭಾವನೆ ಇರುವುದಿಲ್ಲ. ಎಲ್ಲರೂ ತಮ್ಮ ಸ್ವಇಚ್ಛೆಯಿಂದ ಸೇವೆ ಸಲ್ಲಿಸುವವರೇ ಆಗಿದ್ದಾರೆ.

ಸಾಮಾನ್ಯವಾಗಿ ಯಾವುದೇ ಕಾರ್ಯಕ್ರಮಕ್ಕೆ ಬಹಳಷ್ಟು ಆಹ್ವಾನಪತ್ರಿಕೆಗಳನ್ನು ಹಂಚಿದರೆ ಕೆಲವರಷ್ಟೆ ಬರುವ ಸಾಧ್ಯತೆ ಇರಬಹುದು. ಅಂದರೆ ಒಂದು ಕಾರ್ಯಕ್ರಮಕ್ಕೆ ಒಂದು ಸಾವಿರ ಭಕ್ತರನ್ನು ಆಹ್ವಾನಿಸಬೇಕಾದರೆ ಎರಡು–ಮೂರು ಸಾವಿರ ಆಹ್ವಾನ ಪತ್ರಿಕೆಯನ್ನಾದರೂ ಹಂಚಬೇಕು. ಇಲ್ಲವೇ ಸಾವಿರ–ಸಾವಿರ ಕರಪತ್ರಗಳನ್ನು ಬಿತ್ತರಿಸಬೇಕು ಹಾಗೂ ಮಾಧ್ಯಮ ಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಆದರೆ ಶ್ರೀಮಠದ ಕಾರ್ಯಕಲಾಪಗಳಲ್ಲಿ, ಆರಾಧನೆ ಪೂಜಾ ಮಹೋತ್ಸವಗಳಲ್ಲಿ ಯಾವುದೇ ಪ್ರಕಟಣೆ ಅಥವಾ ಆಹ್ವಾನವಿಲ್ಲದೆ ಲಕ್ಷಲಕ್ಷ ಜನರು ಬಂದು ಸೇರುತ್ತಾರೆ. ಕೆಲವೊಮ್ಮೆ ಮಧ್ಯಾಹ್ನದ ಹೊತ್ತಿನಲ್ಲಿ ಅಲ್ಲಿ ಸೇರಿರುವ ಜನರನ್ನು ನೋಡಿದವರು ಈ ಸಾರಿ ಆರಾಧನಾ ಮಹೋತ್ಸವಕ್ಕೆ ಭಕ್ತರು ಕಡಿಮೆ ಎಂದು ಹೇಳಿಕೊಳ್ಳುತ್ತಿರುವಾಗಲೇ, ಸಂಜೆಯ ವೇಳೆಗೆ ಲಕ್ಷಕ್ಕೂ ಮೀರಿ ಭಕ್ತರು ಬಂದು ಸೇರುವುದು ಆಶ್ಚರ್ಯದ ಸಂಗತಿಯಾಗಿದೆ. ಕೆಲವೊಮ್ಮೆ ಆರಾಧನಾ ಮಹೋತ್ಸವದ ದಾಸೋಹಕ್ಕಾಗಿ ಬೇಕಾದ ಪದಾರ್ಥಗಳಿಲ್ಲ ಅಥವಾ ಯಾವುದೋ ಒಂದು ಪದಾರ್ಥ ಸಾಲುವುದಿಲ್ಲ ಎಂದಾಗಲಿ ಅಥವಾ ಇನ್ನೂ ಪ್ರಸಾದದ ತಯಾರಿ ನಡೆದಿಲ್ಲ, ಮಧ್ಯಾಹ್ನವಾಗುತ್ತಿದೆ ಏನು ಮಾಡುವುದು ಎನ್ನುವಷ್ಟರಲ್ಲಿ ಅಥವಾ ರಥೋತ್ಸವದ ಹೂವಿನ ಅಲಂಕಾರಕ್ಕೆ ಸಾಕಷ್ಟು ಹೂ ಇಲ್ಲವಲ್ಲ ಎನ್ನುವಷ್ಟರಲ್ಲಿ, ಯಾವುದೋ ವಾಹನದಲ್ಲಿ ಯಾರೋ ಭಕ್ತರು ಬಂದು ಬೇಕಾದ ಪದಾರ್ಥವನ್ನು ಸಮರ್ಪಿಸಿರುತ್ತಾರೆ. ಇನ್ಯಾರೋ ಬಂದು ಸ್ವತಃ ದಾಸೋಹ ಪ್ರಸಾದ ತಯಾರಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಶ್ರೀಮಠದಲ್ಲಿ ಸರ್ವೇಸಾಮಾನ್ಯವಾಗಿದೆ. ಕೊಟ್ಟ ಪದಾರ್ಥಕ್ಕೆ ರಶೀದಿಯಾಗಲಿ, ಲೆಕ್ಕವಾಗಲಿ ಇಲ್ಲಿ ಇರುವುದಿಲ್ಲ. ಎಲ್ಲದಕ್ಕೂ ಹೆಚ್ಚಾಗಿ, ಕೊಟ್ಟವರು ಯಾರು ಎಂಬುದೇ ತಿಳಿದಿರುವುದಿಲ್ಲ. ಕೊಟ್ಟವರು ನಾವೇ ಎಂದು ತಿಳಿಸಬೇಕು ಅಥವಾ ಹೇಳಿಕೊಳ್ಳಬೇಕು ಎನ್ನುವ ಮನೋಭಾವವೂ ಸಹ ಶ್ರೀಮಠದ ಯಾವುದೇ ಭಕ್ತರಲ್ಲೂ ಇಲ್ಲ. ಆದ್ದರಿಂದ ನಿಜಕ್ಕೂ 'ಮಠ' ಎಂಬ ಪದಕ್ಕೆ ನೂರಕ್ಕೆ ನೂರರಷ್ಟು ಅರ್ಥವಿರುವುದು, ಹಾಗೂ ಮಠ ಎಂದರೆ

ಮಠವಷ್ಟೇ ಎನ್ನುವುದು ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನ ದಾಸೋಹ ಮಠಕ್ಕೆ ಅನ್ವಯವಗುತ್ತದೆ ಎನ್ನಬಹುದು.

ಇನ್ನು ಶ್ರೀಮಠದ ಧಾರ್ಮಿಕ ಆಚರಣೆಗಳನ್ನು ಗಮನಿಸಿದರೆ ಇದನ್ನು ವೀರಶೈವ ಲಿಂಗಾಯಿತ ಬಸವಧರ್ಮದ ಅನುಯಾಯಿಗಳ ಮಠ ಎಂದೇ ಹೇಳಬಹುದು. ಡಾಂಭಿಕತನದ ಆಡಂಬರದ ಪೂಜೆ ಪುನಸ್ಕಾರಗಳಿಲ್ಲ, ಹೋಮಹವನಗಳಿಲ್ಲ, ಭಕ್ತಿಪೂರ್ವಕವಾದ ಶ್ರೀ ಗುರುಮಲ್ಲೇಶ್ವರರ ಗದ್ದುಗೆ ಪೂಜೆಯೇ ಪ್ರಧಾನ. ಪೂಜೆಯ ಸಮಯದಲ್ಲಿ ಶ್ರೀ ಗುರುಮಲ್ಲೇಶ್ವರರ ಗದ್ದುಗೆಯಲ್ಲಿ ಕುಳಿತರಂತೂ ಮುಗಿಯಿತು. ಹೊರ ಜಗತ್ತಿನ ಯಾವುದೇ ವಿಷಯದ ಪರಿಜ್ಞಾನವೂ ಮನಸ್ಸಿಗೆ ಬರುವುದಿಲ್ಲ. ಪೂಜೆಯ ಸಮಯದಲ್ಲಿ ಸಾಮೂಹಿಕವಾಗಿ ಹಾಡುವ ಆ ತ್ರಿವಿಧಿ ಪದ್ಯಗಳು ಕರ್ಣಾನಂದ ಗೊಳಿಸುತ್ತಿದ್ದರೆ, ಪೂಜೆ ಮಾಡುವ ಸ್ವಾಮೀಜಿಯವರು ಗದ್ದುಗೆಗೆ ಹೂವು ಜೋಡಿಸುವ ಕಲೆ ಮತ್ತು ಪೂಜೆಯ ನಂತರ ಜೋಡಿ ಗಂಟೆಗಳ ನಾದ ನಮ್ಮನ್ನು ನಾವೇ ಮರೆತು ದೇವಲೋಕದಲ್ಲಿ ಶ್ರೀ ಗುರುಮಲ್ಲೇಶ್ವರರ ಜೊತೆಗೂಡಿ ಇರುವ ಹಾಗೆ ಮನಸ್ಸನ್ನು ಉಲ್ಲಸಿತಗೊಳಿಸುತ್ತವೆ. ಪೂಜೆ ಮುಗಿಸಿ ಮಹಾಮಂಗಳಾರತಿ ಪಡೆದು ಗದ್ದುಗೆಗೆ ನಮಸ್ಕಾರ ಹಾಕಿ ಹೊರಹೋಗಬೇಕೆನ್ನುವ ಹೊತ್ತಿನಲ್ಲಿ, ಸ್ವಾಮೀಜಿಯವರು 'ಪ್ರಸಾದ ಸ್ವೀಕರಿಸಿ ಹೋಗಿ' ಎಂದು ಹೇಳುವ ಆ ವಿನಮ್ರತೆಯ ಭಾವ ಭಕ್ತರನ್ನು ಪುಳಕಿತರನ್ನಾಗಿಸುತ್ತದೆ.

ಮತ್ತೊಂದು ವಿಸ್ಮಯದ ಅಂಶವೆಂದರೆ, ದೇವನೂರು ಗ್ರಾಮದ ಮುಂದಣ ಅಂದರೆ ಊರ ಹೆಬ್ಬಾಗಿಲಿನಲ್ಲೇ ಶ್ರೀಮಠವಿರುವುದು. ಯಾರೇ ಆಗಲಿ, ಅದರಲ್ಲೂ ದೇವನೂರು ಗ್ರಾಮದವರಂತೂ, ಊರಿನಿಂದ ಕಾರ್ಯನಿಮಿತ್ತ ಪಟ್ಟಣಕ್ಕೋ, ವ್ಯವಸಾಯಕ್ಕೋ, ಕೂಲಿಗೋ, ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೋ, ಮದುವೆ ಸಮಾರಂಭಗಳಿಗೋ ಊರಿನಿಂದ ಹೊರಹೋಗುವಾಗ ಅಥವಾ ಕೆಲಸ ಮುಗಿಸಿ ಊರಿಗೆ ವಾಪಸ್ಸು ಬರುವಾಗ ಶ್ರೀಮಠವನ್ನು ಹಾದು ಹೋಗಬೇಕು. ಹಾಗೆ ಹಾದು ಹೋಗುವಾಗ ಪ್ರತಿಯೊಬ್ಬರು ತಮಗರಿವಿಲ್ಲದೆ ತಮ್ಮ ಚಪ್ಪಲಿಗಳನ್ನು ಕಳಚಿಟ್ಟು ಶ್ರೀಮಠದ ಹೆಬ್ಬಾಗಿಲಲ್ಲಿ ನಮಸ್ಕರಿಸಿ ಶ್ರೀ ಗುರುಮಲ್ಲೇಶ್ವರರ ಆಶೀರ್ವಾದ ಪಡೆದು ಹೋಗುವ ಒಂದು ಸಂಸ್ಕಾರ ಬೆಳೆದು ಬಂದಿದೆ. ಒಟ್ಟಾರೆ ಈಗಿನ ವ್ಯವಹಾರಪ್ರಧಾನವಾದ ಕಾಲಘಟ್ಟದಲ್ಲಿ ಭಕ್ತಿ ಎಂಬುದು ಧಾರ್ಮಿಕ ಆಚರಣೆಗಷ್ಟೇ ಸೀಮಿತಗೊಂಡು ಭಕ್ತಿ ದಾಸೋಹದ ಕಾಯಕದಲ್ಲಿ ತೊಡಗಿಸಿಕೊಂಡಂತಹ ಒಂದು ಶ್ರೀಮಠವಾಗಿದೆ. ಪ್ರತಿ ಪೂಜೆಯ ಸಮಯದಲ್ಲಿ, ಭಜನೆಯಲ್ಲಿ ಹಾಗೂ ಪ್ರಸಾದ ಸೇವಿಸುವಾಗ ಸಾಮೂಹಿಕವಾಗಿ ಹಾಡುವ "ಜಯ ನಮಃ ಪಾರ್ವತೀಪತಿ ಹರಹರ ಮಹದೇವ್ ಅಲಕ್ ನಿರಂಜನ ಗುರುಮಲ್ಲೇಶ್ವರ ಮಹಾಪ್ರಭೋ, ಶ್ರೀಮನ್ನಿರಂಜನ ಗುರು ಭಿಕ್ಷೇಶ ಮಹಾಸ್ವಾಮಿ ಜೈ ಪರಾಕ್, ಬಸವಾದಿ ಪ್ರಮಥರ ಶ್ರೀಪಾದಕ್ಕೆ ಬಹುಪರಾಕ್" ಎಂಬ ಘೋಷ ಭಕ್ತರ ಕಿವಿಯಲ್ಲಿ ಸದಾ ಝೇಂಕರಿಸುತ್ತಲೇ ಇರುತ್ತದೆ.

ಒಟ್ಟಾರೆಯಾಗಿ, ದೇವನೂರಿನ ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠ ಒಂದು ರೀತಿಯ ಭಕ್ತಿ ಪ್ರಧಾನವಾದ, ಭಕ್ತರೇ ನಡೆಸುವ ವಿಶಿಷ್ಟ ಮಠ. ಇಲ್ಲಿನ ಗುರುಪರಂಪರೆಯಲ್ಲಿ ವಂಶಾವಳಿಯವರನ್ನು, ಅಂದರೆ, ಅಥವಾ ಸಂಬಂಧಿಕರನ್ನು ಪೀಠಾಧಿಪತಿಯನ್ನಾಗಿಸುವ ಅಥವಾ ಒಬ್ಬ ಪೀಠಾಧಿಪತಿಯು ತಮ್ಮ ನಂತರದ ಪೀಠಾಧಿಪತಿಯನ್ನು ಆಯ್ಕೆ ಮಾಡಿ ನೇಮಿಸುವ ಪದ್ಧತಿ ಇರುವುದಿಲ್ಲ. ಪೀಠಾಧಿಪತಿಯ ಆಯ್ಕೆ ಭಕ್ತರ ಜವಾಬ್ದಾರಿಯೇ ಆಗಿದೆ. ಎಲ್ಲದಕ್ಕೂ ಮಿಗಿಲಾಗಿ ಶ್ರೀಮಠದಲ್ಲಿ ಕೇವಲ ಗುರುಪರಂಪರೆಯಲ್ಲಿ ಬಂದವರಷ್ಟೇ ಗದ್ದುಗೆಯಾಗಿಲ್ಲ. ಯಾರೇ ಶರಣರು ಅಥವಾ ಸ್ವಾಮೀಜಿಯಾದವರು ಶ್ರೀಮಠದ ಅಭಿವೃದ್ಧಿಯ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದರೆ ಅವರೂ ಸಹ ಗದ್ದುಗೆಯಾಗಿ ಇಂದಿಗೂ ಪೂಜಿಸಲ್ಪಡುತ್ತಿದ್ದಾರೆ. ಇದೂ ಸಹ ಭಕ್ತರ ತೀರ್ಮಾನವೇ ಆಗಿದ್ದು ಇದು ನಿಜಕ್ಕೂ ಭಕ್ತರ ಮಠ ಎಂಬುದಕ್ಕೆ ಸಾಕ್ಷಿಯಾಗಿದೆ. ಶರಣರನ್ನು, ಸಂತರನ್ನು ಗೌರವಿಸುವ ಪ್ರತಿಯೊಬ್ಬರೂ ಜೀವನದಲ್ಲಿ ಒಮ್ಮೆಯಾದರೂ ಭೇಟಿ ನೀಡಲೇಬೇಕಾದ ಶ್ರೀಮಠ ದೇವನೂರಿನ ಶ್ರೀಮಠ. ದೇವನೂರು ಶ್ರೀಮಠವು ನಂಜನಗೂಡು ಪಟ್ಟಣದಿಂದ ಸುಮಾರು 12 ಕಿ.ಮೀ. ದೂರದಲ್ಲಿದ್ದು, ಮೈಸೂರಿನಿಂದ ಸುಮಾರು 40 ನಿಮಿಷಗಳ ಪ್ರಯಾಣ ಅಷ್ಟೇ.

ಪಸರಿಸುವ ಬೆಂಕಿ, ಬೆಳೆಯುತ್ತಿರುವ ವನ
ಅಂತ್ಯ ಕಾಣಲೆಬೇಕು ಕಡಲಂಚಿನಲಿ ॥
ಗಾಳಿಗೆಲ್ಲಿದೆ ಅಂತ್ಯ, ಅದು ವಿಶ್ವವ್ಯಾಪಿ
ನಿನ್ಹೆಸರೆ ವಿಶ್ವ – ಗುರುಮಲ್ಲ ॥

– ಡಿ.ಎಸ್. ಗುರು

**ಅವಲೋಕಿತ ಗ್ರಂಥಗಳು**


1. ಡಿ.ಎಸ್. ಸದಾಶಿವಮೂರ್ತಿ, ದಾಸೋಹ ಪಥ, ಶ್ರೀ ಗುರುಮಲ್ಲೇಶ್ವರ ಸೇವಾ ಸಮಿತಿ ಪ್ರಕಟಣೆ.
2. ಡಿ.ಎಂ. ಮಹಾದೇವಮೂರ್ತಿ. ಶ್ರೀ ಗುರುಮಲ್ಲೇಶ್ವರ ಪ್ರಭಾವಲಯ. ಶ್ರೀ ಗುರುಮಲ್ಲೇಶ್ವರ ದಾಸೋಹಭವನ ನಿರ್ವಹಣಾ ಸಮಿತಿ ಪ್ರಕಟಣೆ.
3. ಬಿ.ನಂ. ಚಂದ್ರಯ್ಯ (ಸಂಪಾದಕರು), ನಿರಂಜನ, ಶ್ರೀ ಗುರುಮಲ್ಲೇಶ್ವರರ ಸಂಸ್ಮರಣ ಶತಮಾನೋತ್ಸವ ಸಮಿತಿ, ದೇವನೂರು.
4. ಮಲೆಯೂರು ಗುರುಸ್ವಾಮಿ (ಸಂಪಾದಕರು), ದಾಸೋಹ ಸಿರಿ, ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ ಮತ್ತು ಹಿರಿಯ ನಾಗರಿಕ ಸೇವಾ ಸಮಿತಿ, ದೇವನೂರು
5. ಸು. ಬಸವರಾಜ ದೊಡ್ಡಟ್ಟಿ. ಮಹಾದಾಸೋಹಿ, ದೊಡ್ಡಟ್ಟಿ ಪ್ರಕಾಶನ ಸಂಸ್ಥೆ, ರಾಮಾಪುರ.
6. ಮಹೇಂದ್ರಮೂರ್ತಿ ದೇವನೂರು. ಮಹಾದರ್ಶನ, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು.
7. ವಿಜಯಕುಮಾರ ಸ್ವಾಮಿಗಳು. ಸ್ವಲೀಲ ಮಹಾತ್ಮ, ಗುರುಬಸವಣ್ಣ ಯೋಗಕಮ್ಮಟ, ತುರಗನೂರು


□

# ಕದಿರ ರೆಮ್ಮವ್ವೆ

ಡಾ. ಉಷಾದೇವಿ ಹಿರೇಮಠ

ವಚನಗಳು ಈ ನೆಲದ ಅಭಿವ್ಯಕ್ತಿಯ ಹೆಮ್ಮೆಯ ನುಡಿಗಳು. ಶರಣ ಕವಿಹೃದಯದ ಸೊಲ್ಲುಗಳು. 'ವಚಿಸು', 'ಭಾಷೆ ಕೊಡು', 'ಪ್ರತಿಜ್ಞೆ ಮುಂತಾದ ಅರ್ಥಗಳನ್ನು ಹೊಂದಿದ್ದು ಕನ್ನಡದಲ್ಲಿ ಅನೇಕ ಅರ್ಥಮೌಲ್ಯಗಳನ್ನು ಹೊಂದಿದೆ. ಸರ್ವಕಾಲಕ್ಕೂ ಸಲ್ಲುವಂತಹ ಮೌಲ್ಯಗಳನ್ನು ಕೊಟ್ಟ ವಚನಸಾಹಿತ್ಯ ನಮ್ಮ ಬದುಕಿನ ದಾರಿದೀಪವೂ ಹೌದು. ವ್ಯಷ್ಟಿ ಪ್ರಜ್ಞೆಯಿಂದ ಸಮಷ್ಟಿ ಪ್ರಜ್ಞೆಯತ್ತ, ಸಮಾಜೋ–ಧಾರ್ಮಿಕ, ವೈಚಾರಿಕತೆ, ಆತ್ಮ–ಪರಮಾತ್ಮ, ಶರಣಸತಿ–ಲಿಂಗಪತಿ, ಕಾಯಕ–ದಾಸೋಹ ಹೀಗೆ ಹಲವಾರು ಚಿಂತನೆಗಳನ್ನು ಸಾಧಕನ ಬದುಕಿಗೆ ಕೊಟ್ಟಿರುವ ಬಹು ದೊಡ್ಡ ಪರಂಪರೆಯಾಗಿದೆ. ಈ ಶ್ರೀಮಂತ ಪರಂಪರೆಯ ಬಹು ಮುಖ್ಯ ಭಾಗವಾಗಿ ಕಾಣಿಸಿಕೊಂಡವರು ವಚನಕಾರ್ತಿಯರು. ಬಸವಾದಿ ಶರಣರು ಸಮಸಮಾಜದ ಪರಿಕಲ್ಪನೆಗಾಗಿ ಲಿಂಗಸಮಾನತೆ ಬಹಳ ಮುಖ್ಯ ಎಂದು ಭಾವಿಸಿ, ಮಹಿಳೆಯರಿಗೆ ಆಭಿವ್ಯಕ್ತಿಯ ಧ್ವನಿಗೆ ಪ್ರೇರಕರಾದರು. ಅಕ್ಕಮಹಾದೇವಿ ಆದಿಯಾಗಿ ಅನೇಕ ಶರಣೆಯರು ತಮ್ಮ ಪ್ರಖರ ವೈಚಾರಿಕತೆಯಿಂದಾಗಿ ಅನೇಕ ಚಿಂತನೆಗಳನ್ನು ಕೊಟ್ಟಿದ್ದಾರೆ. ಅವರ ಬದುಕಿನ ದೃಷ್ಟಿಕೋನ, ಪ್ರತಿಪಾದಿಸಿದ ಮೌಲ್ಯ ಇಂದಿನ ಅಗತ್ಯವಾಗಿದೆ. ಮುಕ್ತಾಯಕ್ಕ 'ನುಡಿಯಲು ಬಾರದ ಕೆಟ್ಟ ನುಡಿಗಳ , ನಡೆಯಲು ಬಾರದ ಕೆಟ್ಟ ನಡೆಗಳ', ಎಂದು ಹೇಳಿದರೆ, ಸತ್ಯಕ್ಕ 'ಅರ್ಚನೆ ಪೂಜನೆ ನೇಮವಲ್ಲ, ಮಂತ್ರ–ತಂತ್ರ ನೇಮವಲ್ಲ, ಧೂಪ ದೀಪಾರತಿ ನೇಮವಲ್ಲ, ಪರಧನ, ಪರಸತಿ, ಪರದೈವಂಗಳಿಗೆರದಿಪ್ಪುವುದೇ ನೇಮ' ಎನ್ನುತ್ತಾಳೆ. ನಾಗಲಾಂಬಿಕೆ 'ಮನದೊಡೆಯ ಮಹಾದೇವ, ಮನವ ನೋಡಿಹನೆಂದು ಮನುಜರ ಕೃಪೆಯಿಂದ ಒಂದೊಂದು ನುಡಿಸುವನು, ಇದಕ್ಕೆ ಕಳವಳಿಸದಿರು ಮನವೆ, ಕಾತರಿಸದಿರು ತನುವೆ, ನಿಜವ ಮರೆಯದಿರು ಕಂದಾ ನಿಶ್ಚಿಂತನಾಗಿರು, ಮನವೆ ಬಸವಣ್ಣಪ್ರಿಯ ಚೆನ್ನಸಂಗಯ್ಯನು ಬೆಟ್ಟದಿನಿತಪರಾಧವನು ಒಂದು ಬೊಟ್ಟಿನಲ್ಲಿ ತೊಡುವನು' ಎಂದಿದ್ದಾಳೆ. ಈ ರೀತಿಯಾದ ಶರಣೆಯರು ಸಮಾಧಾನ, ಧೈರ್ಯದ ಮಾತುಗಳನ್ನು ಕೊಟ್ಟು ಇವತ್ತಿಗೂ ನಮ್ಮೊಂದಿಗೆ ಮೌಲ್ಯಗಳೊಂದಿಗೆ ಬದುಕಿದ್ದಾರೆ. ಶರಣರ ವೈಚಾರಿಕ ನಿಲುವನ್ನು ಮೀರಿಸುವಂತಹ ದಿಟ್ಟತನದ ನೇರ ನುಡಿಯ ವಚನಗಳು ಅವು. ಈ ಸಾಲಿನಲ್ಲಿ ಬರುವ ಮತ್ತೊಬ್ಬ ಪ್ರಮುಖ ಶರಣೆಯೆಂದರೆ ವಚನಕಾರ್ತಿ ರೆಮ್ಮವ್ವೆ. ಕವಿಚರಿತೆಕಾರರು ತಿಳಿಸುವಂತೆ ಆಕೆಯ ಕಾಲ ಕ್ರಿ.ಶ.1160. ಹರಿಹರನ ರಗಳೆಗಳಲ್ಲಿ ಇತರ ಶಿವಶರಣೆಯರ

ಜೊತೆಗೆ ರೆಮ್ಮವ್ವೆಯನ್ನೂ ಸ್ಮರಿಸಿರುವುದನ್ನು ಕಾಣುತ್ತೇವೆ. ಪಾಲ್ಕುರಿಕೆ ಸೋಮನಾಥ ಕವಿ 'ಪಂಡಿತಾರಾಧ್ಯ ಚಾರಿತ್ರ್ಯ'ದ ದ ಗಣ ಸಹಸ್ರನಾಮದಲ್ಲಿ ಕದಿರ ರೆಮ್ಮವ್ವೆಯನ್ನು ಉಲ್ಲೇಖಿಸಿರುವುದು, ಬಸವಣ್ಣ, ಪ್ರಭುದೇವ, ಚೆನ್ನಬಸವಣ್ಣ ಇತ್ಯಾದಿ ಹನ್ನೆರಡನೆಯ ಶತಮಾನದ ಶರಣರ ವಚನಗಳ ಸ್ಥಳಕಟ್ಟಿನ ಪ್ರಾಚೀನ ವಚನಸಂಕಲನಗಳಲ್ಲಿ ಮತ್ತು 'ಸಕಲ ಪುರಾತನರ ವಚನಗಳು' ಕಟ್ಟಿನಲ್ಲಿ ಕದಿರ ರೆಮ್ಮವ್ವೆಯ ವಚನಗಳು ಸಿಗುವುದರಿಂದ ಕದಿರ ರೆಮ್ಮವ್ವೆ ಬಸವಣ್ಣನವರ ಸಮಕಾಲೀನ ವಚನಕಾರ್ತಿ ಎನ್ನುವ ಕವಿಚರಿತೆಕಾರರ ಅಭಿಪ್ರಾಯವನ್ನು ವಿದ್ವಾಂಸರು ಅನುಮೋದಿಸಿದ್ದಾರೆ (ಕರ್ನಾಟಕ ಕವಿ ಚರಿತೆ, ಸಂ.1, ಆರ್. ನರಂಸಿಹಾಚಾರ್, 1961, ಪು.264). 'ಕದಿರು' ಹೆಸರಿನೊಂದಿಗಿರುವ ವಿಶೇಷಣದಿಂದಾಗಿ ಕವಿಚರಿತೆಕಾರರು "ಈಕೆ ಕದಿರ ರೆಮ್ಮಯ್ಯನ ಅನುಬಂಧಿನಿ" ಎಂದು ವರ್ಣಿಸಿದ್ದಾರೆ (ಶಿವಶರಣೆಯರ ವಚನ ಸಂಪುಟ 1, ಪು.231). ಕದಿರ ನೂಲುವ ಕಾಯಕದ ವೃತ್ತಿವಿಶೇಷಣ ಪದವಾಗಿ, ರೆಮ್ಮಯ್ಯನ ಸಂದರ್ಭದಲ್ಲಿ ಸ್ಥಳವಾಚಕ ಪದವಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಬರುವ ಒಂದು ಊರು ಕದಿರ. ಲಕ್ಕಣ್ಣ ದಂಡೇಶನು ಶೈವಾಗಮಾಚಾರ್ಯರ ಪಟ್ಟಿಯಲ್ಲಿ ಕದಿರ ರೆಮ್ಮಯ್ಯನವರನ್ನು ಸ್ತುತಿಸಿದ್ದಾನೆ. 'ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ' ಎಂಬ ಅಂಕಿತದೊಂದಿಗೆ ಈಕೆ ಬರೆದಿರುವ ವಚನಗಳು ನಾಲ್ಕು. ರಾಟೆಯಿಂದ ನೂಲು ತೆಗೆಯುವ ಕಾಯಕ ಮಾಡುತ್ತಾ ಅನುಭಾವದ ಸಾಧಕಳಾಗಿದ್ದಾಳೆ.

ಎನ್ನ ಸ್ಥೂಲತನುವೆ ಬಸವಣ್ಣನಯ್ಯಾ
ಎನ್ನ ಸೂಕ್ಷ್ಮತನುವೆ ಚೆನ್ನಬಸವಣ್ಣನಯ್ಯಾ
ಎನ್ನ ಕಾರಣತನುವೆ ಪ್ರಭುದೇವರಯ್ಯಾ
ಇಂತು ಇವರ ಕರುಣದಿಂದಲಾನು ಬದುಕಿದೆನಯ್ಯಾ
ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ

ದೇಹ, ಆತ್ಮ, ಪ್ರಾಣ ಕ್ರಮವಾಗಿ ಸ್ಥೂಲತನು, ಸೂಕ್ಷ್ಮತನು ಮತ್ತು ಕಾರಣತನುವಾಗಿ ವಿಕಸಿತವಾದ ಬಗೆಯನ್ನು ರೆಮ್ಮವ್ವೆ ಇಲ್ಲಿ ಸೂಚಿಸಿದ್ದಾಳೆ. ರೆಮ್ಮವ್ವೆ ಬಸವಾದಿ ಶರಣರ ಪರಿಸರದಲ್ಲಿ ಬೆಳೆದು, ಹಲವಾರು ಶರಣರ ವಿಚಾರಧಾರೆಗಳು ಆಕೆಯ ಮೇಲೆ ಬೀರಿದ ಪ್ರಭಾವದಿಂದಾಗಿ ಮೇಲಿನ ವಚನದಲ್ಲಿ ಅವರನ್ನು ಸ್ಮರಿಸುತ್ತಾಳೆ. ಕಲ್ಯಾಣದ ಸಮತೆಯ ಕ್ರಾಂತಿಯಲ್ಲಿ ಆಕೆಗೆ ಸ್ಥಾನ ದೊರಕಿಸಿಕೊಟ್ಟವರು ಬಸವಣ್ಣನವರು. ಹೀಗಾಗಿ ಸ್ಥೂಲ ತನುವಿನ ಗುರು ಬಸವಣ್ಣನವರು ಎನ್ನುತ್ತಾಳೆ. ಇನ್ನು ಕಣ್ಣಿಗೆ ಕಾಣದ ಭಾವಸೂಕ್ಷ್ಮತೆಯ ಅರಿವಿನ ಸ್ವರೂಪ ಚೆನ್ನಬಸವಣ್ಣನವರು. ಇವರ ಷಟ್‌ಸ್ಥಲದ ಜ್ಞಾನವು ಮನೋವಿಕಾಸಕ್ಕೆ ಕಾರಣವಾಗಿದ್ದರಿಂದ ಸೂಕ್ಷ್ಮತನುವಿನ ಗುರು ಚೆನ್ನಬಸವಣ್ಣ ಎನ್ನುತ್ತಾಳೆ. ಅದೇ ರೀತಿಯಾಗಿ ಆತ್ಮದ ಅರಿವಿನ ತಿಳುವಳಿಕೆ ಕೊಟ್ಟ ಪ್ರಭುದೇವರು ಕಾರಣತನುವಾಗಿ ಮುನ್ನಡೆಸಿದವರು. ಇವರ ಕರುಣೆಯ ಪರಿಸರದಲ್ಲಿ ತಾನು ಬೆಳೆದು ಬಂದವಳೆಂದು ಕೃತಜ್ಞತೆಯಿಂದ ಸ್ಮರಿಸಿದ್ದಾಳೆ.

ನಾ ತಿರಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ
ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ
ಸುತ್ತಿತ್ತು ನೂಲು ಕದಿರು ತುಂಬಿತ್ತು
ರಾಟೆಯ ತಿರುಹಲಾರೆ ಎನ್ನ ಗಂಡ ಕುಟ್ಟಿಹ
ಇನ್ನೇವೆ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ?

ಕಾಯಕ ತತ್ತ್ವವನ್ನು ವಿವರಿಸುವ ಮೇಲಿನ ವಚನವು ಪಾರಮಾರ್ಥಿಕ (ಅನುಭಾವ) ಸಾಧನೆಯ ಸಂಕೇತವಾಗಿ ತನ್ನ ವೃತ್ತಿಯನ್ನು ನಿರೂಪಿಸುವ ರಾಟೆಯನ್ನು ಪ್ರತಿನಿಧಿಸುತ್ತಾ ಬ್ರಹ್ಮ, ವಿಷ್ಣು, ರುದ್ರ ರ ಕಲ್ಪನೆಯನ್ನು ಹೇಳುತ್ತಾಳೆ. ಮಾಡುವ ಕಾಯಕದಲ್ಲಿಯೇ ಪರಮಾತ್ಮನ ಸ್ವರೂಪವನ್ನು ಪರಿಭಾವಿಸಿಕೊಂಡು ಮಾಡುವ ಮಾಟದಲ್ಲಿ ತಾನಿಲ್ಲದಂತಿರಬೇಕು ಎನ್ನುವಂತೆ ಆಕೆಯ ಕಾಯಕದಲ್ಲಿ ತನ್ಮಯತೆ ಕಾಣುತ್ತಿದ್ದಳು. ನೂಲು ತೆಗೆಯುವ ಸಾಧನಗಳಾದ ರಾಟಿ, ಕದಿರು ಮತ್ತು ನೂಲುವ ಕಾಯಕವನ್ನೇ ಅನುಭಾವದ ನಿರೂಪಣೆಯಾಗಿಸಿದ್ದಾಳೆ. ತಾನು ನೂಲುವ ಕದಿರಿನ ಹಲಗೆಯನ್ನು ಬ್ರಹ್ಮ ಎನ್ನುತ್ತಾಳೆ. ಕದಿರು ತೆಗೆಯುವ ಹಲಗೆ ಗಟ್ಟಿಯಾಗಿದ್ದರೆ ಮುಂದಿನ ಎಲ್ಲ ಕೆಲಸಗಳು ಸರಳ. ಅದು ಕದಿರಿನ ಉತ್ತತ್ತಿ ಕೇಂದ್ರ. ಅದೇ ರೀತಿಯಾಗಿ ಕದಿರಿಗೆ ಕಟ್ಟುವ ತೋರಣವು ವಿಷ್ಣು. ಇದು ಸ್ಥಿತಪ್ರಜ್ಞೆಯ ಸ್ವರೂಪ.ಇನ್ನು ರುದ್ರ ಲಯದ ಸಂಕೇತವಾಗಿ ಇಲ್ಲಿ ಕದಿರಿನ ದೊಡ್ಡ ಮೊಳೆ – ಲೋಹದ ತುಂಡು ಕದಿರು ತೆಗೆಯುವ ಸಾಧನ.ಇದರಿಂದ ಸಂಸ್ಕಾರಗೊಂಡು ಹೊರಬರುವ ತಿರುಳೇ ಕದಿರು. ಭಕ್ತಿಯ ಕೈಯಲ್ಲಿ ರಾಟೆ ತಿರುವುತ್ತಾ, ನೂಲು ಸುತ್ತಿಕೊಳ್ಳಲಾಗಿ ಕದಿರು ತುಂಬಿತ್ತು. ಕಾಯಕದೊಂದಿಗಿನ ತಾದ್ಯಾತ್ಮವನ್ನು, ಅಲೌಕಿಕದ ಅನುಭವವಾಗಿಸಿದ್ದಾಳೆ. ಅಷ್ಟೇ ಅಲ್ಲದೆ ಇಲ್ಲಿ ಬರುವ ಕಾಯಕದ ವರ್ಣನೆಯು ಆ ಕಾಲಘಟ್ಟದಲ್ಲಿ ಬಳಸುತ್ತಿದ್ದ ಉಪಕರಣಗಳ ಪರಿಚಯವನ್ನು ತಿಳಿಸುತ್ತದೆ. ಕದಿರು ಅರಿವಿನ ಕದಿರಾಗಿ ಅವಳಲ್ಲಿ ರೂಪಗೊಳ್ಳುವದನ್ನು ವಚನ ನಿರೂಪಿಸುತ್ತದೆ.

ಎಲ್ಲ ಗಂಡಂದಿರು ಪರದಳವಿಭಾಡರು: ಎನ್ನ ಗಂಡ ಮನದವಿಭಾಡ
ಎಲ್ಲ ಗಂಡಂದಿರು ಗಜವೇಂಟೆಕಾರರು: ಎನ್ನ ಗಂಡ ಮನವೇಂಟೆಕಾರ
ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು: ತನ್ನ ಗಂಡ ತಾರದೇ ಇಕ್ಕಿಸಿಕೊಂಬ
ಎಲ್ಲರ ಗಂಡಂದಿರಿಗೆ ಮೂರು: ಎನ್ನ ಗಂಡಂಗೆ ಅದೊಂದೇ
ಅದೊಂದು ಸಂದೇಹ, ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ

ರೆಮ್ಮೆವ್ವೆಯ ಎರಡು ವಚನಗಳು ಮೇಲ್ನೋಟದಲ್ಲಿ ಲೌಕಿಕ ಸಂಸಾರದ ಚಿತ್ರಣ ಎನಿಸಿದರೂ, ಅವುಗಳ ಆಂತರ್ಯದಲ್ಲಿ ಅನುಭಾವದ ಚಿಂತನೆ ಇದೆ. ಸಾಮಾನ್ಯ ನೆಲೆಯಲ್ಲಿ ಗಂಡಹೆಂಡಿರ ಸಂಬಂಧಗಳು ಭೌತಿಕ ಸ್ವರೂಪದ ಹಿನ್ನೆಲೆಯಲ್ಲಿ ಮಾತ್ರ

ಕ್ರಿಯೆಯಲ್ಲಿರುವಂಥವು. ಆದರೆ ರೆಮ್ಮವ್ವೆಯ ಚಿಂತನೆ ಇದಕ್ಕೆ ಭಿನ್ನವಾದ ನೆಲೆಯಲ್ಲಿ ಮೂಡಿಬಂದಿದೆ. ಎನ್ನ ಗಂಡ ಮನದ ಕಷ್ಟವನ್ನು ನಿವಾರಿಸುವವನು, ಅರಿಷಡ್ವರ್ಗಗಳನ್ನು ಕೊಲ್ಲುವವ. ಎಲ್ಲ ಗಂಡಂದಿರು ಸೃಷ್ಟಿ–ಸ್ಥಿತಿ–ಲಯ, ಸ್ಥೂಲ–ಸೂಕ್ಷ್ಮ–ಕಾರಣ ಶರೀರಕ್ಕೆ ಇದ್ದವರು. ನನ್ನ ಗಂಡ ಕಾರಣಶರೀರಕ್ಕೆ ಇದ್ದವನು, ಇದು ಚೈತನ್ಯದ ಸ್ವರೂಪವಾಗಿದೆ ಎನ್ನುತ್ತಾಳೆ. ಈ ರೀತಿ ತನುಗುಣವನ್ನು ಇಲ್ಲವಾಗಿಸಿಕೊಂಡು ಲಿಂಗಗುಣವನ್ನು ಅಳವಡಿಸಿಕೊಂಡ ಅನುಭಾವಿ ಶರಣೆ ಕದಿರ ರೆಮ್ಮವ್ವೆ.

ಎಲ್ಲರ ಹೆಂಡಿರು ತೊಳಸಿಕ್ಕುವರು : ಎನ್ನ ಗಂಡಂಗೆ ತೊಳಸುವುದಿಲ್ಲ
ಎಲ್ಲರ ಗಂಡಂದಿರಿಗೆ ಬಸಿವರು : ಎನ್ನ ಗಂಡಂಗೆ ಬಸಿವುದಿಲ್ಲ
ಎಲ್ಲರ ಗಂಡಂದಿರಿಗೆ ಬೀಜವುಂಟು : ಎನ್ನ ಗಂಡಂಗೆ ಅಂಡದ ಬೀಜವಿಲ್ಲ
ಎಲ್ಲರ ಗಂಡಂದಿರು ಮೇಲೆ : ಎನ್ನ ಗಂಡ ಕೆಳಗೆ, ನಾ ಮೇಲೆ
ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ

ಅಕ್ಕಮಹಾದೇವಿಯ ನಿಲುವಿನಂತೆ ಲೋಕದ ಗಂಡರನ್ನು ನಿರಾಕರಿಸುವ ನಿಲುವನ್ನು ಇಲ್ಲಿ ಕಾಣುತ್ತೇವೆ. ಕದಿರ ರೆಮ್ಮವ್ವೆಯು ಹೆಣ್ತನವನ್ನು ಮೀರಿಯೂ ಅದರಾಚೆ ಅರಿವಿನ ನೆಲೆಯಲ್ಲಿ ನೇರವಾಗಿ ಬಿಚ್ಚುಮಾತಿನಲ್ಲಿ ಅಭಿವ್ಯಕ್ತಿಸುವ ಮಾತುಗಳು ಮೇಲ್ನೋಟಕ್ಕೆ ಲೋಕವಿರೋಧಿ ಸಂಗತಿಗಳಾಗಿ ಕಂಡುಬರುತ್ತವೆ. ಲೌಕಿಕದ ಗಂಡನ ಸ್ವರೂಪದ ಹಿನ್ನೆಲೆಯಲ್ಲಿ ಮಾತನಾಡದೆ ಎನ್ನುವ 'ಎಲ್ಲರ ಗಂಡಂದಿರು ಮೇಲೆ : ಎನ್ನ ಗಂಡ ಕೆಳಗೆ, ನಾ ಮೇಲೆ' ಎನ್ನುವ ಮಾತು ಲೌಕಿಕ ನೆಲೆಯ ಮಹಿಳೆಯರಿಗೆ ಸವಾಲಿನ ಮಾತಾಗುತ್ತದೆ. ಲಿಂಗ ಭೇದದ ನಿರಾಕರಣೆಯ ಜೊತೆಗೆ ನಿರಾಕಾರ ಸ್ವರೂಪದ ಭಕ್ತಿಯ ತೀವ್ರತೆಯನ್ನೂ ಇಲ್ಲಿ ನೋಡುತ್ತೇವೆ. ಲೌಕಿಕ ಗಂಡನ ನಿರಾಕರಣೆಯ ತತ್ತ್ವವನ್ನು ಕಾಣುತ್ತೇವೆ. ಪತಿವ್ರತಾ ಧರ್ಮದ ನಿಲುವಿಗೆ ವಿಭಿನ್ನವಾಗಿ ಇಲ್ಲಿನ ಪ್ರತಿಪಾದನೆ ಇದೆ. ಹೆಣ್ಣು – ಗಂಡಿನ ಲೌಕಿಕ ಆಕರ್ಷಣೆಯ ದೈಹಿಕ ಸಂಬಂಧದ ನೆಲೆಯಲ್ಲಿ ಹೇಳದೆ, ಪರಮಾತ್ಮನ ಅನುಸಂಧಾನದ ನಿಲುವನ್ನು ವ್ಯಕ್ತಪಡಿಸುತ್ತದೆ.

ಕದಿರ ರೆಮ್ಮವ್ವೆಯ ವಚನಗಳು ಅನುಭಾವದ ನೆಲೆಯಲ್ಲಿ ಬಹಳ ಗಟ್ಟಿಯಾಗಿ ನಿಲ್ಲುವ ರಚನೆಗಳಾಗಿದ್ದು, ವೈಚಾರಿಕತೆಯ ದೃಷ್ಟಿಯಿಂದ ಪ್ರಖರ ಚಿಂತನೆಯನ್ನು ಆಭಿವ್ಯಕ್ತಿಸುವ ನುಡಿಗಳಾಗಿವೆ. ಈಕೆಯ ಸತಿ–ಪತಿ ಭಾವದ ವಚನಗಳು ಪ್ರಾಕೃತಿಕ ಸ್ವರೂಪದ ಮಿತಿಯಾಚೆಗೆ ಸ್ವತಂತ್ರವಾದ ನಿಲುವನ್ನು ವ್ಯಕ್ತಪಡಿಸುತ್ತಾ ಲೌಕಿಕದ ನೆಲೆಯನ್ನು ಮೀರಿ ನಿಲ್ಲುವ ದಿಟ್ಟ ನೇರ, ನಿರ್ಭಿಡೆಯ ಅಭಿವ್ಯಕ್ತಿವಿಶೇಷವಾಗಿದೆ. ವಚನ ಕ್ರಾಂತಿಯ ಸಮಾಜಿಕ, ಧಾರ್ಮಿಕ, ವೈಚಾರಿಕ ಚಿಂತನೆಯ ಪ್ರಭಾವದಿಂದಾಗಿ ವಚನಕಾರ್ತಿಯರ ವಚನಗಳು ಕಾಯಕ, ಆತ್ಮ–ಪರಮಾತ್ಮದ ಅನುಸಂಧಾನದ ತಾತ್ವಿಕ ಸೈದ್ಧಾಂತಿಕ ನಿರೂಪಣೆಗಳಾಗಿ ಮೂಡಿಬಂದಿವೆ.

□

# ಅಕ್ಕಮಹಾದೇವಿ : ಒಲವು–ನಿಲುವು

ಡಾ. ವೈ. ಸುಶ್ಮಿತಾ

ಇಪ್ಪತ್ತೊಂದನೆಯ ಶತಮಾನದಲ್ಲಿ ನಿಂತು ನೋಡುವಾಗಲೂ ಅನೇಕ ವಿಚಾರಗಳಲ್ಲಿ ಕಾಡುವಂತಹ, ಹಲವು ಪ್ರಶ್ನೆಗಳನ್ನು ಮೂಡಿಸುವಂತಹ ಹನ್ನೆರಡನೆಯ ಶತಮಾನದ ಶರಣ ಚಳುವಳಿಯ ವಿಶೇಷ ವ್ಯಕ್ತಿತ್ವ ಈ ಅಕ್ಕ. ಈಕೆ ಬಾಲ್ಯದಲ್ಲಿಯೇ ಶಿವಭಕ್ತಿಯಲ್ಲಿ ಅನುರಕ್ತಳಾದವಳು. ಆದರೆ ಅತೀವವಾದ ಶಿವಭಕ್ತಿ ಮತ್ತು ವೈರಾಗ್ಯದೊಂದಿಗೆ ಅವಳ ಬದುಕಿನಲ್ಲಿ ಸವಾಲುಗಳು ಸಹ ಒಂದರ ಮೇಲೊಂದು ತೆರೆದುಕೊಂಡವು. ಅವೆಲ್ಲವನ್ನೂ ಅಕ್ಕ ಏಕಾಂಗಿಯಾಗಿ ಎದುರಿಸಿದ ಬಗೆ ನಿಜಕ್ಕೂ ಬೆರಗು ಮೂಡಿಸುತ್ತದೆ. 'ಏನು ಮಾಡಿದಡೂ ನಾನಂಜುವಳಲ್ಲ' ಎನ್ನುವ ಅವಳ ನಿಲುವು ಅವಳ ಬದುಕಿನುದ್ದಕ್ಕೂ ಅನುರಣಿಸುತ್ತದೆ. ಕನ್ನಡ ಸಾಹಿತ್ಯ ಮತ್ತು ಭಕ್ತಿ ಪರಂಪರೆಯಲ್ಲಿ ಇಂತಹ ದಿಟ್ಟತನದ ಸ್ತ್ರೀವ್ಯಕ್ತಿತ್ವವನ್ನು ಮುಂದಿನ ಅನೇಕ ಶತಮಾನಗಳ ಕಾಲ, ತತ್ವಪದಕಾರ್ತಿಯರು ಬರುವವರೆಗೂ, ಕಾಣಲು ಸಾಧ್ಯವಾಗಿಲ್ಲ. ಸಾಂಸಾರಿಕ, ಕೌಟುಂಬಿಕ ಚೌಕಟ್ಟಿನಾಚೆ ಬದುಕುವ ಹೆಣ್ಣನ್ನು ಸಮಾಜ ಎಂದಿಗೂ ಪುರಸ್ಕರಿಸುವುದಿಲ್ಲ. ಆದರೆ ಅಂತಹ ಬಿರುದುಗಳ ಹಂಗನ್ನು, 'ಒಳ್ಳೆಯ ಹೆಂಗಸು' ಎಂಬಂತಹ ಸಾಂಪ್ರದಾಯಿಕ ಆಸೆಗಳನ್ನು ತೊರೆದು ನಿರ್ಭಯತೆಯ ನಿಲುವು ತಳೆದು, ತನ್ನ ಬದುಕಿನ ಮಾರ್ಗವನ್ನು ತಾನೇ ಕಂಡುಕೊಂಡ, 'ತನ್ನಿಷ್ಟದಂತೆ ತನ್ನ ಬದುಕನ್ನು ಬದುಕಿದ' ಅಕ್ಕನ ನಿಲುವು ನಮಗೆ ಬೆರಗಿನ ಬೆಳಕು.

ಮದುವೆಯೇ ಹೆಣ್ಣಿನ ಬದುಕಿನ ಮಹಾಘಟ್ಟವೆಂಬ ಕಲ್ಪನೆ ಈಗಿನ ಸಮಾಜವನ್ನೂ ಬಾಧಿಸುತ್ತಿದೆ. ಮದುವೆ, ಸಂಸಾರವನ್ನು ಮೀರಿ ತನ್ನಿಚ್ಛೆಯ ಬದುಕನ್ನು ಹೆಣ್ಣು ಬದುಕಲು ಹೊರಟಾಗ ಅವಳು ಕುಟುಂಬ ಮತ್ತು ಸಮಾಜದಿಂದ ತಿರಸ್ಕೃತಳಾಗಬೇಕಾಗುವುದು ಪಿತೃಪ್ರಧಾನ ವ್ಯವಸ್ಥೆ ಚಾಲ್ತಿಯಲ್ಲಿರುವ ಸಮಾಜಗಳಲ್ಲಿ ಸಾಮಾನ್ಯ. ಆದರೆ ಅಂತಹ ಸಾಮಾಜಿಕ ಸಂದರ್ಭದ ಹನ್ನೆರಡನೆಯ ಶತಮಾನದಲ್ಲಿಯೇ ಅಕ್ಕ ತನ್ನಿಚ್ಛೆಯ ಶಿವಭಕ್ತಿ ಮತ್ತು ವೈರಾಗ್ಯದ ಹಾದಿಯನ್ನು ಸಾಧಿಸಿಕೊಳ್ಳುವಲ್ಲಿ ತೋರಿದ ದಿಟ್ಟ ನಿಲುವು ಗಮನಾರ್ಹ. ಬಹುಶಃ ಅವಳಲ್ಲಿ ಚೆನ್ನಮಲ್ಲಿಕಾರ್ಜುನನ ಮೇಲಿದ್ದ ಭಕ್ತಿ ಮತ್ತು ನಂಬಿಕೆಯೇ ಇಂತಹ ಎಲ್ಲ ಮೀರುವಿಕೆಗಳಿಗೆ ಮತ್ತು ಸಮಾಜವನ್ನು ಎದುರಿಸಲು ಮನೋಸ್ಥೈರ್ಯವನ್ನು ತಂದುಕೊಟ್ಟಿರಬಹುದು. ಆದರೂ, ಅಕ್ಕ ತನಗೆ ಇಷ್ಟವಿಲ್ಲದಿದ್ದರೂ ಕೌಶಿಕನೊಂದಿಗೆ

ವೈವಾಹಿಕ ಬಂಧನಕ್ಕೆ ಒಳಗಾಗಿದ್ದಳು ಎನ್ನುವ ಕುರಿತಾಗಿ ಅನೇಕ ಮಾಹಿತಿಗಳು ನಮಗೆ ದೊರೆಯುತ್ತವೆ. ಶಾಸನಗಳಲ್ಲಿ ಉಕ್ತವಾಗಿರುವಂತೆ, ಬಿಜ್ಜಳನ ಪ್ರತಿನಿಧಿಯಾಗಿ ಬಳ್ಳಿಗಾವೆಯನ್ನು ಆಳುತ್ತಿದ್ದ ಕಸಪಯ್ಯ ಅಥವಾ ಕೌಶಿಕನೇ ಅಕ್ಕನ ಪತಿಯಾಗಿದ್ದರ ಬಗೆಗೆ ಕೆಲವು ಪುರಾವೆಗಳು ದೊರಕಿವೆ. ಈತನೇ ಆಕೆಯ ಲೌಕಿಕ ಪತಿಯಾಗಿದ್ದ, ನಂತರದಲ್ಲಿ ಅಕ್ಕ ಆತನನ್ನು ತ್ಯಜಿಸಿದಳು ಎಂಬುದಾಗಿ ಡಾ. ಚಿದಾನಂದಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಬಹುಶಃ ರಾಜನಾದ ಕೌಶಿಕನ ಅಪೇಕ್ಷೆಯನ್ನು ತಳ್ಳಿಹಾಕುವುದು ಅಕ್ಕಮಹಾದೇವಿಯ ಕುಟುಂಬದವರಿಗೆ ಸಾಧ್ಯವಾಗದೆ ಇದ್ದಿರಬಹುದು. ಆರಂಭದಲ್ಲಿ ಮದುವೆಯ ಪ್ರಸ್ತಾಪವನ್ನು ವಿರೋಧಿಸಿಯೂ ರಾಜನ ಕಾರಣದಿಂದ ತನ್ನ ಮನೆಯವರಿಗಾಗಬಹುದಾದ ಆಪತ್ತಿನ ಕಾರಣದಿಂದ ಅಕ್ಕಮಹಾದೇವಿ ಈ ಮದುವೆಗೆ ಒಪ್ಪಿದ್ದಿರಬಹುದು. ಆಕೆ ಆತನಲ್ಲಿ ಹಲವು ಷರತ್ತುಗಳನ್ನು ವಿಧಿಸಿಯೇ ಮದುವೆಗೆ ಒಪ್ಪಿಕೊಂಡು ನಂತರ ಆತ ಷರತ್ತುಗಳನ್ನು ಮೀರಿದಾಗ ಆತನನ್ನು ತ್ಯಜಿಸಿದಳು ಎನ್ನುವ ಮಾತುಗಳೂ ಇವೆ. ಇದು ನಿಜವಾಗಿದ್ದರೆ, ಏಕಕಾಲದಲ್ಲಿ ರಾಜಪ್ರಭುತ್ವ ಮತ್ತು ಲೌಕಿಕ ಪತಿಪ್ರಭುತ್ವದ ಹಂಗನ್ನು ತೊರೆದು ಅರಮನೆಯಿಂದ ಹೊರನಡೆಯುವುದು ಒಬ್ಬ ಸಾಮಾನ್ಯ ಹೆಣ್ಣಿಗೆ ಸುಲಭವಲ್ಲ, ಆದರೆ 'ಅಕ್ಕ' ಅದನ್ನು ಸಾಧ್ಯವಾಗಿಸಿದವಳು ಎನ್ನುವುದೇ ನಮಗೆ ಬೆರಗು ಹುಟ್ಟಿಸುವ ವಿಚಾರ. ಆದರೂ ಅಕ್ಕನಿಗೆ ವಿವಾಹವೇ ಆಗಿರಲಿಲ್ಲ ಎಂದು ಹೇಳುವವರೂ ಇದ್ದಾರೆ. ಒಂದು ವೇಳೆ ಅಕ್ಕನ ಪತಿ ನಾವೆಲ್ಲ ಅಂದುಕೊಂಡಿರುವಂತೆ ಕೌಶಿಕ ಆಗಿಲ್ಲದೆ ಇದ್ದರೂ ಸಹ ಅಕ್ಕ ಒಬ್ಬ ಬಲಿಷ್ಠನಾದ ಪತಿಯನ್ನಂತೂ ಎದುರು ಹಾಕಿಕೊಂಡಿದ್ದಳು ಎನ್ನುವುದಕ್ಕೆ ಮತ್ತು 'ಲೌಕಿಕ ಪತಿ'ಯೊಂದಿಗಿನ ವಿವಾಹವನ್ನು ವಿರೋಧಿಸಿದ್ದಳು ಎನ್ನುವುದಕ್ಕೆ ಅವಳ ವಚನಗಳಲ್ಲಿ ಅನೇಕ ಸುಳಿವು, ಪುರಾವೆಗಳು ಸಿಗುತ್ತವೆ. ಉದಾಹರಣೆಗೆ, ಇಷ್ಟವಿಲ್ಲದಿದ್ದರೂ ಸಂಸಾರಿಯಾಗಬೇಕಾಗಿ ಬಂದಾಗ ತನ್ನ ಆರಾಧ್ಯದೈವ ಚೆನ್ನಮಲ್ಲಿಕಾರ್ಜುನನಲ್ಲಿ "ಎನ್ನ ಮುಟ್ಟಿ ಪಾವನವ ಮಾಡಿ, ಕಷ್ಟ ಸಂಸಾರಿಗೊಪ್ಪಿಸುವಂತೆ ಮಾಡಿದೆಯಯ್ಯಾ!" (ಸಾ.ಶಿ. ಮರುಳಯ್ಯ, ಅ.ವ, ಪು.11), "ಕಾಯದ ನುಂಪನೊಬ್ಬ ಕಂಡು ಬಯಸಿದನು, ಅವಂಗೆ ಮಾಂಸದ ಬೆಲೆ ಮಾಡಿ ಕೊಡುವೆನು, ತನ್ನ ಪ್ರಾಣದೊಡೆಯಂಗೆ ಎನ್ನ ಹೃದಯವ ಸೂರೆಗೊಡುವೆನು!, ಚೆನ್ನಮಲ್ಲಿಕಾರ್ಜುನ ದೇವಯ್ಯನು ಮುನಿದು ಭವಿಗೆ ಮಾರಿದಡೆ ಹೊಲಬುಗೆಡದಿರಾ ಮನವೇ!" (ಅದೇ, ಪು.13) ಎಂದು ಹೇಳಿಕೊಳ್ಳುತ್ತಾಳೆ. ಬಹುಶಃ ಮದುವೆಯ ನಂತರ ಆತ ಭೋಗದ ಬಯಕೆಯಲ್ಲಿ ಆಕೆಯನ್ನು ಒತ್ತಾಯಿಸಿದಾಗ "ಎಮ್ಮೆಗೊಂದು ಚಿಂತೆ ಸಮ್ಮಗಾರಗೊಂದು ಚಿಂತೆ, ಧರ್ಮಿಗೊಂದು ಚಿಂತೆ ಕರ್ಮಿಗೊಂದು ಚಿಂತೆ.. ಬಿಡು ಬಿಡು ಸೆರಗ ಹಿಡಿಯದಿರು ಮರುಳೆ" (ಅದೇ, ಪು.23), "ಎಲೆ ಕಾಮಂಗೆ ಗುರಿಯಾದ ಮರುಳೆ ಬಿಡು ಬಿಡು ಕೈಯ.. ಈ ಸೊನೆಗಾರಂಗೆ ಕುರಿಯು ಮಾರುವರೇ?

ಮಾರಿದರೆಮ್ಮವರೆನ್ನ ನಿನಗೆ! ಎನ್ನತ್ತ ಮುಂದಾಗದಿರು, ಎನ್ನ ಮೇಲೆ ಕಾಲಿಡದಿರು ಚೆನ್ನಮಲ್ಲಿಕಾರ್ಜುನಂಗೆ ಸಲೆ ಮಾರುವೋದವಳಾನು" (ಅದೇ, ಪು.16), "ಲೋಕದೊಳು ಹೆಂಡಿರುಂಟಾದರೆ ಮಾಡಿಕೋ ಎನ್ನ ಬಿಡು ಮರುಳೇ" (ಅದೇ, ಪು.31), ಎಂದು ಪ್ರತಿಭಟಿಸುತ್ತಾಳೆ. ಅಕ್ಕನ ಇಂತಹ ವಚನಗಳ ಆಧಾರದ ಮೇಲೆ ಮತ್ತು ಶಾಸನಗಳ ಉಲ್ಲೇಖಗಳ ಆಧಾರದ ಮೇಲೆ ಸಾ.ಶಿ. ಮರುಳಯ್ಯನವರು ಕೌಶಿಕನೇ ಅಕ್ಕನ ಪತಿಯಾಗಿದ್ದ ಎನ್ನುವುದುದನ್ನು 'ಅಕ್ಕನ ವಚನಗಳು' ಎನ್ನುವ ಕೃತಿಯ ಪ್ರಸ್ತಾವನೆಯಲ್ಲಿ ಸಮರ್ಥಿಸಿದ್ದಾರೆ. ಪ್ರಸ್ತುತ ವಚನಗಳೇ ಆಕೆಯ ಜೀವನಚರಿತ್ರೆಯನ್ನು ತಿಳಿಯಲು ಪ್ರಾಥಮಿಕ ಆಕರಗಳಾಗಿರುವುದರಿಂದ ಅಲ್ಲಿನ ಮಾಹಿತಿಗಳನ್ನೇ ನಾವು ಸತ್ಯಕ್ಕೆ ಹತ್ತಿರವೆಂದು ಪರಿಭಾವಿಸಿಕೊಳ್ಳಬೇಕಾಗುತ್ತದೆ. ಸಂಶೋಧಕ ಚಿದಾನಂದ ಮೂರ್ತಿಯವರು ಸಹ ಕೌಶಿಕನೇ ಅಕ್ಕನ ಲೌಕಿಕ ಪತಿಯಾಗಿದ್ದಿರಬಹುದು ಎನ್ನುವ ಅಭಿಪ್ರಾಯ ತಳೆದಿದ್ದಾರೆ. "ಆಕೆ ಭಕ್ತೆ, ಶಿವಶರಣೆ, ಅನುಭಾವಿ ನಿಜ. ಆದರೆ, ಒಬ್ಬ ಸಾಮಾನ್ಯ ಹೆಣ್ಣುಮಗಳು ತಾನು ಬಲವಂತದಿಂದ ಕೈಹಿಡಿದ ಗಂಡನೊಬ್ಬನನ್ನು ಅದರಲ್ಲೂ 'ರಾಜ'ನೊಬ್ಬನನ್ನು ತಿರಸ್ಕರಿಸಿದ್ದು ನಮಗೆ ಆಶ್ಚರ್ಯವಾಗಿ ಕಾಣುತ್ತದೆ. ವಿವಾಹದ ನಿಯಮಗಳು ಹಿಂದೂ ಸಾಂಪ್ರದಾಯಿಕ ಸಮಾಜದಲ್ಲಿ ತೀರ ಕಠಿಣ. ಗಂಡನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಹೆಣ್ಣಿಗಿಲ್ಲ. ಮದುವೆಯಾದ ಮೇಲಂತೂ ಇಷ್ಟವಿರಲಿ, ಇಲ್ಲದಿರಲಿ ಹೆಣ್ಣುಗಂಡಿನ ಅಧೀನದಲ್ಲಿ ಅವನ ವಸ್ತುವಾಗಿ ಇರಬೇಕು. ಇದು ಹಿಂದೂ ಸಮಾಜ ಒಪ್ಪಿಕೊಂಡು ಬಂದ ನೀತಿಸಂಹಿತೆ. ಆದರೆ ಎಂಟು ನೂರು ವರ್ಷಗಳ ಹಿಂದೆ ಅಕ್ಕಮಹಾದೇವಿ ಏಕಾಂಗಿಯಾಗಿ ಅದನ್ನು ಪ್ರತಿಭಟಿಸಿ ನಿಂತು ಯಶಸ್ವಿಯಾದುದು ಸಾಮಾನ್ಯ ಸಂಗತಿಯೇನೂ ಅಲ್ಲ" (ಚಿ.ಮೂ. ವಚನಸಾಹಿತ್ಯ, ಪು.66). ಈ ಮೊದಲೇ ಹೇಳಿದಂತೆ ಅಕ್ಕನ ಪತಿ ಕೌಶಿಕ ಆಗಿರಲಿ ಅಥವಾ ಆಗಿಲ್ಲದೆ ಇದ್ದಿರಲಿ, ಆದರೆ ಅಕ್ಕನಿಗೆ ವಿವಾಹವಾಗಬೇಕಾದ ಸನ್ನಿವೇಶ ಎದುರಾಗಿತ್ತು ಮತ್ತು ವಿವಾಹದ ನಂತರ ಆಕೆ ತನ್ನ ಲೌಕಿಕ ಪತಿಯನ್ನು ತ್ಯಜಿಸಿದ್ದಳು ಎನ್ನುವ ವಿಚಾರವನ್ನು ಅವಳ ವಚನಗಳಲ್ಲಿಯೇ ಸಿಗುವ ಮಾಹಿತಿಯ ಪ್ರಕಾರ ಒಪ್ಪಬೇಕಾಗುತ್ತದೆ. ಈ ವಿಚಾರ ಈ ಲೇಖನದ ಮುಂದಿನ ಹಂತದಲ್ಲಿ ಇನ್ನಷ್ಟು ಸ್ಪಷ್ಟವಾಗುತ್ತದೆ.

ಅಕ್ಕನ ಸೌಂದರ್ಯಕ್ಕೆ ಮಾರುಹೋಗಿದ್ದ ಲೌಕಿಕ ಪತಿ ಅಥವಾ ಕೌಶಿಕ ರಾಜ ಅವಳನ್ನು ಪಡೆದೇ ತೀರಬೇಕೆಂಬ ಹಠಕ್ಕೆ, ಒತ್ತಾಯಕ್ಕೆ ಮುಂದಾಗಿರುವುದಕ್ಕೆ ಮತ್ತು ಈ ಕಾರಣಕ್ಕಾಗಿ ಅಕ್ಕ ಅವನನ್ನು ವಿರೋಧಿಸಿರುವುದಕ್ಕೆ ಸುಳಿವುಗಳನ್ನು ಈ ಮುಂದಿನ ವಚನಗಳ ಮೂಲಕ ಊಹೆ ಮಾಡಿಕೊಳ್ಳಬಹುದು. "ಚೆನ್ನಮಲ್ಲಿಕಾರ್ಜುನನ ಕೂಡಿ ಲಜ್ಜೆಗೆಟ್ಟವಳ ಉಡುಗೆಯ ಸೆಳೆದುಕೊಂಡಡೆ, ಮುಚ್ಚಿದ ಸೀರೆ ಹೋದರೆ ಅಂಜುವರೆ ಮರುಳೇ?" (ಸಾ.ಶಿ. ಮರುಳಯ್ಯ.ಅ.ವ. ಪು.32), "ಉಟ್ಟ ಉಡುಗೆಯ ಸೆಳೆದುಕೊಂಡರೆ ಮುಚ್ಚಿದ ನಿರ್ವಾಣವ ಸೆಳೆಯಬಹುದೇ? ...ಉಡುಗೆಯ ಹಂಗ ಬಲ್ಲಳೇ ಮರುಳೇ?" (ಅದೇ,

ಪು.32), ಎನ್ನುವಂತಹ ಅನೇಕ ಸಾಲುಗಳು ಆಕೆಯ ಬಟ್ಟೆಯನ್ನು ಸೆಳೆದುಕೊಂಡಿದ್ದರ ಬಗ್ಗೆ ಕುರುಹುಗಳನ್ನು ನೀಡುತ್ತವೆ. ಮುಂದೆ ಅಕ್ಕ ಸರ್ವವನ್ನೂ ತ್ಯಜಿಸಿ ಅರಮನೆಯಿಂದ ಅಥವಾ ಲೌಕಿಕ ಪತಿಯ ಗೃಹದಿಂದ ಹೊರಬರುವಾಗ ಆಕೆ ದಿಗಂಬರೆಯಾಗಿದ್ದಳೋ ಅಥವಾ ಕೇಶಾಂಬರೆಯಾಗಿದ್ದಳೋ ಅಥವಾ ಯಾವ ಸ್ಥಿತಿಯಲ್ಲಿ ಇದ್ದಳು ಎಂಬ ನಿಟ್ಟಿನಲ್ಲಿ ಅನೇಕ ಚರ್ಚೆಗಳು ನಡೆದಿವೆ. ಮಧ್ಯಕಾಲೀನ ಕನ್ನಡ ಸಾಹಿತ್ಯ ಅಕ್ಕ ಕೇಶಾಂಬರೆಯಾಗಿದ್ದಳು ಎಂದು ತಿಳಿಸುತ್ತದೆ. ಕೇಶಾಂಬರೆ ಎಂದರೆ ಕುರಿಯ ತುಪ್ಪಳದಿಂದ ಮಾಡಲ್ಪಟ್ಟ ಕರಿಗಂಬಳಿ ಎಂದರ್ಥ, ತಲೆಕೂದಲಲ್ಲ. ಕರಿಗಂಬಳಿಯನ್ನು ಭಕ್ತರು ಸಂತರು ವೈರಾಗ್ಯದ ಸೂಚಕವಾಗಿ ಬಳಸುತ್ತಿದ್ದರು ಎನ್ನುವ ಮಾಹಿತಿಯಿದೆ. ಆದರೆ ಅಕ್ಕನ ವಚನಗಳನ್ನು ನೋಡಿದರೆ ಈ ಕುರಿತ ಮಾಹಿತಿಗಳು ಲಭ್ಯವಾಗುವುದಿಲ್ಲ. ಅಕ್ಕನ ಯೋಗಾಂಗ ತ್ರಿವಿಧಿಯ ಒಂದು ಕಾವ್ಯಭಾಗ ಅಕ್ಕ ತನ್ನ ಮುಡಿಯನ್ನೇ ಉಡುಗೆಯಾಗಿ ಮಾಡಿಕೊಂಡಳು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಉಟ್ಟ ಸೀರೆಯ ಸೀಳಿ ತೊಟ್ಟ ತೊಡುಗೆಯ ಮುರಿದು
ಬಿಟ್ಟೇನು ನಾನು ಬಿಡುಮುಡಿಯ ಎಲೆ ದೇವ
ಕೊಟ್ಟೆನಾ ಎನ್ನ ತನುಮನವ (ಅದೇ, ಪು. 143)

ಈ ತ್ರಿಪದಿಯಲ್ಲಿ ಅಕ್ಕ ಕೇಶಾಂಬರೆಯಾಗಿದ್ದರ ಬಗ್ಗೆ ಸ್ಪಷ್ಟವಾಗಿ ಹೇಳಿಕೊಂಡಿದ್ದಾಳೆ. ಇನ್ನೊಂದು ವಚನ "ನಾಳದ ಮರೆಯ ನಾಚಿಕೆ ನೂಲ ಮರೆಯಲ್ಲಿ ಅಡಗಿತ್ತೆಂದು ಅಂಜುವರು ಅಳುಕುವರು ಮನ ಮೆಚ್ಚಿದಭಿಮಾನಕ್ಕೆ ಆವುದು ಮರೆ ಹೇಳಾ? ಕಾಯ ಮಣ್ಣೆಂದು ಕಳೆದ ಬಳಿಕ ದೇಹದಭಿಮಾನ ಅಲ್ಲಿಯೇ ಹೋಯಿತ್ತು" (ಅದೇ, ಪು.32) ಎನ್ನುವಲ್ಲಿ ಹೆಣ್ಣಿನ ದೇಹವನ್ನು ವಸ್ತ್ರದಿಂದ ಮುಚ್ಚಿಕೊಂಡ ತಕ್ಷಣ ಅದನ್ನು ಮರ್ಯಾದೆ ಎಂದುಕೊಳ್ಳುವ ಸಾಮಾನ್ಯ ಲೋಕರೂಢಿಯ ಕುರಿತಾದ ಅಕ್ಕನ ಭಿನ್ನ ನಿಲುವು ಹಾಗೂ ಅವಳ ವಿರಾಗಿತನ ಇಲ್ಲಿ ವ್ಯಕ್ತವಾಗುತ್ತಿದೆ. ಆದರೆ ಅಕ್ಕ ಕೊನೆಯವರೆಗೂ ಕೇಶಾಂಬರೆಯಾಗಿದ್ದಳೇ ಎನ್ನುವ ಬಗ್ಗೆ ಮಾಹಿತಿ ದೊರಕಿಲ್ಲ. ಅಕ್ಕನ ಬದುಕಿನ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಿಲ್ಲವಾದ್ದರಿಂದ ಈ ವಿಚಾರದಲ್ಲಿ ಇದಮಿತ್ಥಂ ಎಂದು ಹೇಳುವುದು ಕಷ್ಟ. ಪುರಾಣಕೃತಿಗಳು ಕಟ್ಟಿಕೊಟ್ಟಿರುವ ಅಕ್ಕನ ಬದುಕಿನ ವಿವರಗಳಲ್ಲಿ ಪೂರ್ಣಸತ್ಯವನ್ನು ಅರಸಲು ಸಾಧ್ಯವಿಲ್ಲ. ವಚನಗಳೇ ಆಕೆಯ ಜೀವನಚರಿತ್ರೆಯನ್ನು ಕಟ್ಟಿಕೊಡಲು ಇರುವ ಮುಖ್ಯ ಆಕರ ಸಾಮಗ್ರಿ. ಇಲ್ಲಿ ಹೇಳಿರುವ ಎಲ್ಲ ವಿಚಾರಗಳು ಆಕೆಯ ವಚನಗಳಲ್ಲೇ ಸಿಗುವ ಮಾಹಿತಿಯನ್ನು ಆಧರಿಸಿವೆ.

ಮುಂದೆ ಅಕ್ಕ ಬಳ್ಳಿಗಾವೆಯನ್ನು ತ್ಯಜಿಸಿ ಕಲ್ಯಾಣದತ್ತ ಮುಖ ಮಾಡುವ ಸಂದರ್ಭ ಒದಗುತ್ತದೆ. ಆದರೆ ಆಕೆ ಸರ್ವಸ್ವವನ್ನೂ ತ್ಯಜಿಸಿ ಹೊರಬಿದ್ದಾಗ, ಕುಟುಂಬಬಾಹಿರಳಾದ ಹೆಣ್ಣನ್ನು ಸಮಾಜ ನೋಡಬಹುದಾದ, ನಡೆಸಿಕೊಳ್ಳಬಹುದಾದ ರೀತಿ

ಹೀನಾಯವಾಗಿರುವು ದಂತೂ ಕಟುಸತ್ಯ. ಅವಳ ಲೌಕಿಕ ಪತಿ ಅಥವಾ ಕೌಶಿಕ ಸಾಧುವಂತೆ ನಟಿಸಿ ಅವಳಲ್ಲಿ ತನ್ನ ತಪ್ಪನ್ನು ಮನ್ನಿಸಿಸುವಂತೆ ಕೇಳಿಕೊಂಡು ಮರಳಿ ಬರುವಂತೆ ಕಲ್ಲುಮಠ ಹುಲ್ಲುಮಠ ರಾಜಗುರುಗಳಿಗೆ ಲಂಚಕೊಟ್ಟು ಪ್ರಯತ್ನಿಸಿದ ಎನ್ನುವ ವಿಚಾರವನ್ನು ಡಾ. ಚಿದಾನಂದ ಮೂರ್ತಿಯವರು 'ವಚನ ಸಾಹಿತ್ಯ'ದಲ್ಲಿ ಪ್ರಸ್ತಾಪಿಸಿದ್ದಾರೆ. ಆದರೆ ಅಕ್ಕನ ನಿಲುವಿನ ಮುಂದೆ ಅದ್ಯಾವುದೂ ನಿಲ್ಲಲಿಲ್ಲ. ಅಕ್ಕ ಎಂಬ ಗಟ್ಟಿಗಿತ್ತಿ "ಈ ಮರೀಚಿಕಾಜಲದೊಳಡಗಿದ ಪ್ರಾಣಿ ವ್ಯಾಧನ ಬಲೆಗೆ ಸಿಲುಕುವುದೇ? ನಿನ್ನ ಕೈವಶ ಸಿಕ್ಕಿದಳೆಂಬುದ ಮರೆಯಾ ಮರುಳೇ ...ಪರಪುರುಷ ನಮಗಾಗದ ಮೋರೆ ನೋಡಾ!" (ಅದೇ, ಪು.30) ಎಂಬಂತಹ ದಿಟ್ಟತನವ ತೋರಿದವಳು. ಆದರೂ, ಮುಂದೆ ಅಕ್ಕ ಎದುರಿಸಿದ ಸಮಸ್ಯೆಗಳಾದರೂ ಕಡಿಮೆಯೇನಲ್ಲ. ಮೈತುಂಬ ಬಟ್ಟೆಯಿಲ್ಲದ, ಕೇಶಾಂಬರೆಯಾಗಿರಬಹುದಾದ ಅಕ್ಕ ಅನೇಕ ಕಾಮುಕ ಕಣ್ಣುಗಳಿಂದ ತಪ್ಪಿಸಿಕೊಳ್ಳಬೇಕಾಗಿರುವ ಸನ್ನಿವೇಶಗಳು ಸಹಜವಾಗಿಯೇ ಎದುರಾಗಿರಬಹುದು. ಆದರೂ ದೇಹದ ಚಿಂತೆ, ಮೋಹ ಅವಳಿಗಿರಲಿ.

ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು
ತೃಷೆಯಾದರೆ ಕೆರೆ ಹಳ್ಳ ಬಾವಿಗಳುಂಟು
ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು
ಶಯನಕ್ಕೆ ಹಾಳು ದೇಗುಲಗಳುಂಟು
ಚೆನ್ನಮಲ್ಲಿಕಾರ್ಜುನಯ್ಯಾ
ಆತ್ಮ ಸಂಗಾತಕ್ಕೆ ನೀನೆನಗುಂಟು (ಅದೇ, ಪು.98)

ಈ ವಚನದ ಒಂದು ಮಗ್ಗುಲಲ್ಲಿ ಇಹದ ಬದುಕಿನ ಬಗೆಗೆ ಇರುವ ಅಕ್ಕನ 'ವೈರಾಗ್ಯ' ಕಂಡುಬಂದರೆ ಇನ್ನೊಂದು ಮಗ್ಗುಲಲ್ಲಿ ಅಕ್ಕ ಸಮಾಜದಲ್ಲಿ ಎದುರಿಸಿದ್ದಿರಬಹುದಾದ ಕಠಿಣ ಸನ್ನಿವೇಶಗಳನ್ನು ಕಣ್ಣ ಮುಂದೆ ತರುತ್ತಿದೆ. ಬಹುಶಃ ಬಳ್ಳಿಗಾವೆಯನ್ನು ತ್ಯಜಿಸಿದ ಮೇಲೆ ಸರಿಯಾಗಿ ಮೈಮೇಲೆ ಬಟ್ಟೆಯೂ ಇರದ, ಉಳಿದುಕೊಳ್ಳಲು ಹಾಳು ದೇಗುಲಗಳನ್ನು ಆಶ್ರಯಿಸಿದ ಅಕ್ಕನನ್ನು ಈ ಸಮಾಜ ನೆಮ್ಮದಿಯಿಂದ, ತನ್ನಿಚ್ಛೆಯಂತೆ ಬದುಕಲು ಬಿಟ್ಟಿತ್ತೆಂದು ಸಲೀಸಾಗಿ ಒಪ್ಪುವುದು ಸಾಧ್ಯವೇ? "ಬಟ್ಟಿಹ ಮೊಲೆಯ ಭರದ ಜೌವ್ವನದ ಚೆಲುವ ಕಂಡು ಬಂದಿರಣ್ಣಾ. ಅಣ್ಣಾ ನಾನು ಹೆಂಗೂಸಲ್ಲ, ಅಣ್ಣಾ ನಾನು ಸೂಳೆಯಲ್ಲ" (ಅದೇ, ಪು.38), "ನಾರಿಯೆಂಬ ರೂಹಿಂಗೆ ನೀವು ಒಲಿದು ಬಂದಿರಣ್ಣಾ, ಮೂತ್ರವೆಂಬ ಬಿಂದುನಾಳಕ್ಕೆ ಮುಂದುಗಾಣದೆ ಬಂದಿರಣ್ಣಾ... ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿನ ಪುರುಷರೆನಗೆ ಸಹೋದರರು" (ಅದೇ, ಪು.38), "ಮೊಲೆ ಬಿದ್ದು ಮುಡಿ ಸಡಲಿ, ಗಲ್ಲ ಬತ್ತಿ ತೋಳು ಕಂದಿದವಳ ಎನ್ನನ್ನೇಕೆ ನೋಡುವಿರಿ ಎಲೆ ಅಣ್ಣಗಳಿರಾ?" (ಅದೇ, ಪು.33), "ಮುಡಿ ಬಿಟ್ಟು ಮೊಗ ಬಾಡಿ ತನು ಕರಗಿದವಳ ಎನ್ನನ್ನೇಕೆ ನುಡಿಸುವಿರಿ? ಎಲೆ ತಂದೆಗಳಿರಾ?" (ಅದೇ, ಪು.87), ಎನ್ನುವ ವಚನಗಳ ಸಾಲುಗಳು ಅಕ್ಕನ ಬದುಕಿನ

ಒಂದಿಷ್ಟು ಸವಾಲುಗಳ ಚಿತ್ರಣ ನೀಡುತ್ತಿರುವುದನ್ನು ಅಲ್ಲಗಳೆಯಲು ಸಾಧ್ಯವೇ! ಆದರೆ ಅಕ್ಕ ಮಾತ್ರ ಈ ಯಾವುದಕ್ಕೂ ಅಂಜಿಕೊಂಡು ತನ್ನ ದೃಢ ನಿಲುವಿನಿಂದ ಹಿಂದೆ ಸರಿಯುವುದಿಲ್ಲ. "ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯ." (ಅದೇ, ಪು.82), "ಹೆದರದಿರು ಮನವೆ, ಬೆದರದಿರು ತನುವೆ, ನಿಜವನರಿತು ನಿಶ್ಚಿಂತವಾಗಿರು" (ಅದೇ, ಪು.102), "ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು" (ಅದೇ, ಪು.82), "ನಾಳೆ ಬರುವುದು ನಮಗಿಂದೆ ಬರಲಿ, ಇಂದು ಬಪ್ಪುದು ನಮಗೀಗಲೆ ಬರಲಿ; ಆಗೀಗ ಎನ್ನದಿರೋ ಚೆನ್ನಮಲ್ಲಿಕಾರ್ಜುನ" (ಅದೇ, ಪು.76) ಎನ್ನುವಂತಹ ಸಮದೃಷ್ಟಿ ಅಕ್ಕನದು. ಇಲ್ಲಿ ಮೌನವಾಗಿರುವುದು, ಸಮಾಧಾನಿಯಾಗಿರುವುದು, ಕೋಪವ ತಾಳದಿರುವುದು ಎಂದರೆ ಸ್ತುತಿನಿಂದೆಗಳನ್ನು ಒಪ್ಪುವುದು ಎಂದಲ್ಲ, ಅವುಗಳನ್ನು ಕಡೆಗಣಿಸಿ ಬದುಕುವುದು ಎಂದೇ ಅರ್ಥ. ಮುಂದೆ ಕಲ್ಯಾಣಕ್ಕೆ ಬಂದ ಮೇಲೆ ಅವಳ ಆತ್ಮವಿಶ್ವಾಸ ಇನ್ನೂ ಹೆಚ್ಚಾದಂತಿದೆ. ಮುಖ್ಯವಾಗಿ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭುವಿನ ಮಾರ್ಗದರ್ಶನವನ್ನು ಅಕ್ಕ ತನ್ನ ವಚನಗಳಲ್ಲಿ ಸಾಕಷ್ಟು ಕಡೆ ಸ್ಮರಿಸಿದ್ದಾಳೆ. ಉದಾಹರಣೆಗೆ–

ಬಸವಣ್ಣನ ಮನೆಯ ಮಗಳಾಗಿ ಬದುಕಿದೆನಾಗಿ
ತನ್ನ ಕರುಣಪ್ರಸಾದವ ಕೊಟ್ಟನು
ಚೆನ್ನಬಸವಣ್ಣನ ತೊತ್ತಿನ ಮಗಳಾದ ಕಾರಣ
ಒಕ್ಕ ಪ್ರಸಾದವ ಕೊಟ್ಟನು
ಪ್ರಭುದೇವರ ತೊತ್ತಿನ ಮಗಳಾದ ಕಾರಣ
ಜ್ಞಾನಪ್ರಸಾದವ ಕೊಟ್ಟನು
ಸಿದ್ಧರಾಮಯ್ಯನ ಶಿಶುಮಗಳಾದ ಕಾರಣ
ಪ್ರಾಣಪ್ರಸಾದವ ಕೊಟ್ಟನು
ಮಡಿವಾಳ ಮಾಚಿತಂದೆಯ ಮನೆಯ ಮಗಳಾದ ಕಾರಣ
ನಿರ್ಮಳಪ್ರಸಾದವ ಕೊಟ್ಟನು
ಇಂತು ಅಸಂಖ್ಯಾತರೆಲ್ಲರೂ ತಮ್ಮ ಕರುಣದ ಕಂದನೆಂದು
ತಲೆದಡವಿ ರಕ್ಷಿಸಿದ ಕಾರಣ
ಚೆನ್ನಮಲ್ಲಿಕಾರ್ಜುನನ ಶ್ರೀಪಾದಕ್ಕೆ ಯೋಗ್ಯಳಾದೆನು (ಅದೇ, ಪು.35)

ಸ್ವಭಾವತಃ ಅಕ್ಕ ಗಟ್ಟಿಗಿತ್ತಿಯಾದರೂ ಅವಳ ಭಕ್ತಿ–ವೈರಾಗ್ಯ ಪಥದಲ್ಲಿ ಮಾರ್ಗದರ್ಶಕರಾಗಿ ನಿಂತವರು ಅನೇಕ ಶರಣರು ಎನ್ನುವುದು ಗಮನಾರ್ಹ. ಕನ್ನಡ ನೆಲದಲ್ಲಿ ಸ್ತ್ರೀವಾದದ ಚಹರೆಗಳನ್ನು ನಾವು ಮೊದಲಿಗೆ ವಚನಸಾಹಿತ್ಯದಲ್ಲಿಯೇ ಕಾಣುವುದು. ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳು ಸಾಮಾನ್ಯವಾಗಿ ಹೆಣ್ಣನ್ನು ಭೋಗ, ಕಾಮದ ನೆಲೆಯಲ್ಲಿಯೇ ವರ್ಣಿಸಿವೆ. ಆದರೆ ಹನ್ನೆರಡನೆಯ ಶತಮಾನದಲ್ಲಿ ಹುಟ್ಟಿದ ಶರಣ ಚಳುವಳಿ ಹೆಣ್ಣಿನ ಭಕ್ತಿ ಮತ್ತು ಮುಕ್ತಿಯಂತಹ ಪರಿಕಲ್ಪನೆಗಳಿಗೆ ತೆರೆದುಕೊಂಡಿತು.

ಸ್ತ್ರೀಯರ ಸ್ವಾತಂತ್ರ್ಯಕ್ಕೆ, ಸಮಾನತೆಗೆ ಆದ್ಯತೆ ಕೊಟ್ಟ ಕನ್ನಡದ ಸಾಹಿತ್ಯ ಚೇತನಗಳೆಂದರೆ ಶರಣ ಸಾಹಿತ್ಯ ಚಳುವಳಿ ಮತ್ತು ತತ್ವಪದಕಾರರು. 'ಹೆಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ' ಎಂಬ ತಿಳುವಳಿಕೆಯನ್ನು ಮೊದಲು ಹೇಳಿದವರು ವಚನಕಾರರು. ಬಸವಾದಿಗಳು ಹೆಣ್ಣನ್ನು ಗಂಡಿನ ಸರಿಸಮಾನವಾಗಿ ಕಾಣಲು ಪ್ರಯತ್ನಿಸಿದ್ದು ಅನೇಕ ಶರಣೆಯರಿಗೆ ಸ್ಫೂರ್ತಿಯೂ ಆಯಿತು. ಅಕ್ಕಮಹಾದೇವಿ ವೈಯಕ್ತಿಕವಾಗಿ ಸಾಮಾಜಿಕ ನಿಂದನೆಗಳನ್ನು ಎದುರಿಸುವ ಸನ್ನಿವೇಶಗಳು ಎದುರಾದಾಗ ಆಸರೆಯಾದದ್ದು ಈ ಶರಣ ಚಳುವಳಿಯ ಚಲನೆಗಳೇ ಎನ್ನಬಹುದು.

ಇಷ್ಟಲ್ಲದೆ ಬಳ್ಳಿಗಾವೆ ತ್ಯಜಿಸಿ ಕಲ್ಯಾಣದ ದಾರಿ ಹಿಡಿದಾಗ ಆಕೆ ಕಂಡುಕೊಂಡ ಬದುಕಿನ ಜ್ಞಾನ ಸಹ ಕಡಿಮೆಯೇನಲ್ಲ. ಹೀಗಾಗಿ ಹೆಣ್ಣಿನ ಬಗ್ಗೆ, ಹೆಣ್ಣಿನ ದೇಹದ ಬಗ್ಗೆ ಅಕ್ಕ ಕೊಡುವ ಪರಿಕಲ್ಪನೆ ವಿಭಿನ್ನವಾದುದು. "ಅಮೇಧ್ಯದ ಮಡಿಕೆಯ ಮೂತ್ರದ ಕುಡಿಕೆಯ ಎಲುವಿನ ತಡಿಕೆಯ ಕೀವಿನ ಹಡಿಕೆಯ ಸುಡಲೀ ದೇಹವ ಬಿಡು ಬಿಡು, ವಿಷಯ ಸಂಗವ, ಒಡಲುವಿಡಿದು ಕೆಡದಿರು" (ಅದೇ, ಪು.16) ಎನ್ನುತ್ತಾಳೆ ಅಕ್ಕ. ಇಲ್ಲಿ ಆಕೆ ಕೊಡುವ ಹೆಣ್ಣಿನ ದೇಹಕಲ್ಪನೆ ವೈರಾಗ್ಯದ ನೆಲೆಯಿಂದ ಪ್ರೇರೇಪಿತವಾಗಿದ್ದರೂ, ಅದು ವೈಜ್ಞಾನಿಕವಾದುದು ಕೂಡ. ಹೆಣ್ಣನ್ನು ಕೇವಲ ಭೋಗದ ವಸ್ತುವಾಗಿಯೇ ನೋಡುವವರಿಗೆ ಅಕ್ಕ ಕೊಟ್ಟ ದೇಹದ ಪರಿಕಲ್ಪನೆ. ಇದು ಹೆಣ್ಣಿನ ದೇಹವನ್ನು ವಿಶೇಷವಾದುದೆಂದು ಬಣ್ಣಿಸುವ ಕ್ರಮವೇ ಅಸಹಜ. ಅಂತಹ ಬಣ್ಣನೆಗಳು ಹೆಣ್ಣನ್ನು ಭೋಗದ ವಸ್ತುವಾಗಿ ಕಾಣಲು, ಅವಳನ್ನು ದಾಸ್ಯದ ನೆಲೆಗೆ ತಳ್ಳಲು ಪ್ರಮುಖ ಕಾರಣವಾಗಬಹುದು. ಹಾಗಾಗಿ ಅಕ್ಕ ಕೊಟ್ಟ ಹೆಣ್ಣಿನ ದೇಹಕಲ್ಪನೆ ವೈಜ್ಞಾನಿಕ ಮನೋಧರ್ಮಕ್ಕೆ ಹತ್ತಿರವಾದುದೇ ಆಗಿದೆ. ಹಾಗೆ, ತನುವಿಗಿಂತ ಮನಕ್ಕೆ, ಬಹಿರಂಗಕ್ಕಿಂತ ಅಂತರಂಗಕ್ಕೆ ಪ್ರಾಮುಖ್ಯತೆ ನೀಡಿರುವುದು ಅಕ್ಕನ ವಚನಗಳಲ್ಲಿ ಕಂಡುಬರುವ ಸಾಮಾನ್ಯ ವಿಚಾರ. "ಕಾಯ ಕರ್ರಗೆ ಕಂದಿದರೇನಯ್ಯ? ಕಾಯ ಮಿರ್ರಗೆ ಮಿಂಚಿದಡೇನಯ್ಯ, ಅಂತರಂಗ ಶುದ್ಧವಾದ ಬಳಿಕ" (ಅದೇ, ಪು.64) ಎನ್ನುವುದು ಅವಳ ಅಂತರಾಳದ ನಿಲುವು. ಅದುವರೆಗೂ ಸಮಾಜದಲ್ಲಿ ಹೆಣ್ಣಿನ ದೇಹಸೌಂದರ್ಯ, ವ್ಯಕ್ತಿತ್ವ, ಮನಸ್ಸು ಮತ್ತು ಸಾಂಸಾರಿಕ ಮತ್ತು ವೈವಾಹಿಕ ಬದುಕನ್ನು ಕುರಿತು ಯಾವ್ಯಾವ ಕಲ್ಪನೆಗಳಿದ್ದವೋ ಅವೆಲ್ಲವನ್ನೂ ಅಕ್ಕ ಮೀರುತ್ತಾಳೆ. ಅವಳ ವೈರಾಗ್ಯಜೀವನವನ್ನು ಕೊನೆಗೊಳಿಸಿ ಆಕೆಯನ್ನು ಸಂಸಾರಿಯಾಗಿಸುವ ನಿಟ್ಟಿನಲ್ಲಿ ಸಮಾಜ ಹೇರಿದ ಯಾವ ಒತ್ತಡ–ಬೆದರಿಕೆಗಳಿಗೂ ಆಕೆ ಸೊಪ್ಪು ಹಾಕಿದಂತಿಲ್ಲ. "ಸತ್ತಾದಡೆ ಶರೀರಂ ಪೋದಡೆ ಪೋಗಲಿ ಲೋಕದ ಗಂಡರನೊಲ್ಲೆ" (ಅದೇ, ಪು.95) ಎನ್ನುವ ನಿಲುವಿನಿಂದ ಆಕೆ ಎಂದೂ ಕದಲುವುದಿಲ್ಲ. "ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ? ಲೌಕಿಕಕ್ಕೊಬ್ಬ ಗಂಡನೆ? ಪಾರಮಾರ್ಥಕ್ಕೊಬ್ಬ ಗಂಡನೆ? ಎನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ ಮಿಕ್ಕಿನ ಗಂಡರೆಲ್ಲ ಮುಗಿಲ ಮರೆಯ ಬೊಂಬೆಯಂತೆ" (ಅದೇ, ಪು.55), "ಕಾಮನ

ತಲೆಯ ಕೊರೆದು, ಕಾಲನ ಕಣ್ಣ ಕಳೆದು, ಸೋಮಸೂರ್ಯರ ಹುರಿದು ಹುಡಿ ಮಾಡಿ ತಿಂಬವಳಿಗೆ ನಾಮವನಿಡಬಲ್ಲವರಾರು ಹೇಳಿರೆ" (ಅದೇ, ಪು.62), "ಕಂಗಳ ಕಳೆದು ಕರುಳ ಕಿತ್ತು ಕಾಮನ ಮೂಗ ಕೊಯ್ದು, ಭಂಗದ ಬಟ್ಟೆಯ ಭವ ಗೆಲಿದವಳಿಗಂಗವೆಲ್ಲಿಯದು ಹೇಳಾ!" (ಅದೇ, ಪು.60), ಎನ್ನುವ ದಿಟ್ಟತನದಲ್ಲಿಯೇ ಆಕೆ ತನ್ನದೆ ವೈರಾಗ್ಯಪಥದಲ್ಲಿ ಕೊನೆಯವರೆಗೂ ಸಾಗುತ್ತಾಳೆ.

ಬಹುಶಃ ಚೆನ್ನಮಲ್ಲಿಕಾರ್ಜುನ ಎಂಬ ದೈವವನ್ನು ಅವಳು ಪತಿಯೆಂದು ಭಾವಿಸಿದ್ದರಿಂದ ಸಮಾಜ ಒಡ್ಡುವ ಸವಾಲುಗಳನ್ನು ಎದುರಿಸಲು ಅದೊಂದು ಸಮರ್ಥವಾದ ಮಾಧ್ಯಮವೂ ಆಯಿತು. ಭಕ್ತ ಮತ್ತು ದೈವದ ನಡುವಣ ಸಂಬಂಧವನ್ನು ಶರಣರು ಸತಿ ಮತ್ತು ಪತಿ ಎಂಬ ಪರಿಕಲ್ಪನೆಯಲ್ಲಿ ಕಂಡವರು. ಅಕ್ಕ ಸಹ ಆ ಕಲ್ಪನೆಯಲ್ಲಿಯೇ ಚೆನ್ನಮಲ್ಲಿಕಾರ್ಜುನ ನನ್ನು ಭಾವಿಸಿರುವುದು ಕಂಡುಬರುತ್ತದೆ. ಆದರೆ ಚೆನ್ನಮಲ್ಲಿಕಾರ್ಜುನನನ್ನು ಆಕೆ ಕೇವಲ ಪತಿ ಎಂದು ಕರೆದಿಲ್ಲ; ಕೆಲವೊಂದು ಕಡೆಗಳಲ್ಲಿ ತಂದೆಯೆಂತಲೂ ಕರೆದಿದ್ದಾಳೆ ಎನ್ನುವ ವಿಚಾರವನ್ನೂ ಸಹ ಗಮನಿಸಬೇಕು. ಹಾಗಾಗಿ ಅಕ್ಕ ದೈವವನ್ನು ಕಂಡ ಬಗೆಯನ್ನು ಒಂದೇ ನೆಲೆಯಲ್ಲಿ ನಾವು ಗ್ರಹಿಸುವುದು ತಪ್ಪಾಗಲೂಬಹುದು. ಅಷ್ಟಲ್ಲದೆ, ಈ ಸತಿಪತಿ ಭಾವದ ಬಗ್ಗೆಯೂ ಅನೇಕ ಪ್ರಶ್ನೆಗಳಿವೆ. ಚೆನ್ನಮಲ್ಲಿಕಾರ್ಜುನ ಮತ್ತು ಅಕ್ಕನ ಸಂಬಂಧವನ್ನು ಸತಿ–ಪತಿ ಎಂಬ ದಾಸ್ಯ ಎಂದು ವಿವರಿಸುವವರೂ ಇದ್ದಾರೆ. ಆ ಅಭಿಪ್ರಾಯಗಳು ಅಂತಿರಲಿ; ಆದರೆ ದೈವ ಚೆನ್ನಮಲ್ಲಿಕಾರ್ಜುನನೇ ತನ್ನ ಪತಿ ಎಂಬ ಅಕ್ಕನ ಕಲ್ಪನೆ ಸಮಾಜ ಒಡ್ಡುವ ಪ್ರಶ್ನೆಗಳನ್ನು ಎದುರಿಸಿ ನಿಲ್ಲಲು ಆಕೆಗೊಂದು ಊರುಗೋಲು ಆದದ್ದಂತೂ ನಿಜ. ವೈರಾಗ್ಯ ಮತ್ತು ಭಕ್ತಿ ಅಕ್ಕ ಆರಿಸಿಕೊಂಡ ದಾರಿ ಮತ್ತು ಅದು ಅವಳ ಇಷ್ಟದ ಮಾರ್ಗ; ಅದನ್ನು ನಾವು ನಮ್ಮ–ನಮ್ಮ ನಿಲುವುಗಳಲ್ಲಿ ನಿಂತು ಪುರುಷಪ್ರಾಧಾನ್ಯ, ಮೌಢ್ಯ, ದಾಸ್ಯ ಎಂದು ಕರೆಯುವುದು ಎಷ್ಟರಮಟ್ಟಿಗೆ ಸರಿಯೆಂಬುದನ್ನು ಮತ್ತೆ ಅವಲೋಕನ ಮಾಡಬೇಕಾಗಿದೆ. ಕೆಳಗಿನ ವಚನವೊಂದು ಅಕ್ಕನ ಭಕ್ತಿಭಾವದ ಬಗೆಗೆ ಇನ್ನಷ್ಟು ಸ್ಪಷ್ಟತೆಯನ್ನು ನೀಡುತ್ತದೆ.

> ಕಿಡಿ ಕಿಡಿ ಕೆದರಿದಡೆ ಎನಗೆ ಹಸಿವು ತೃಷೆಯಡಗಿತ್ತೆಂಬೆನು
> ಮುಗಿಲು ಹರಿದುಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂಬೆನು
> ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು
> ಚೆನ್ನಮಲ್ಲಿಕಾರ್ಜುನಯ್ಯ
> ಶಿರ ಹರಿದು ಬಿದ್ದಡೆ ಪ್ರಾಣ ನಿಮಗರ್ಪಿತವೆಂಬೆನು (ಅದೇ, ಪು.64, 65)

ಇಂತಹ ವಚನಗಳನ್ನು ಗಮನಿಸಿದಾಗ ಚೆನ್ನಮಲ್ಲಿಕಾರ್ಜುನ ಎಂಬ ಭಾವವೇ ಅಕ್ಕನ ಬದುಕಿಗೆ ಬಿಡುಗಡೆಯ ಮಾರ್ಗವೂ ಆಗಿತ್ತೆನ್ನುವುದನ್ನು ಅಲ್ಲಗಳೆಯಲು ಸಾಧ್ಯವೇ! 'ಶಿರ ಹರಿದು ಬಿದ್ದಡೆ ಪ್ರಾಣ ನಿಮಗರ್ಪಿತವೆಂಬೆನು' ಎನ್ನುವ ಅವಳ ಮಾತಿನಲ್ಲಿ

ಚೆನ್ನಮಲ್ಲಿಕಾರ್ಜುನ ಎಂಬ ಭಾವ ಆಕೆಗೆ ಪ್ರಾಣಕ್ಕಿಂತಲೂ ಪ್ರಿಯವಾಗಿತ್ತೆಂಬುದು ಸ್ಪಷ್ಟ. ಅವಳು ಇಲ್ಲಿ ಆರಿಸಿಕೊಂಡದ್ದು ಭಕ್ತಿ ಮತ್ತು ವೈರಾಗ್ಯದ ಮಾರ್ಗ. ಅದರಲ್ಲಿಯೇ ಅವಳು ಬದುಕಿನ ಸಾರ್ಥಕತೆಯನ್ನು ಕಂಡುಕೊಂಡವಳು. ಅದು ದಾಸ್ಯವಲ್ಲ, ಸಾಂಸಾರಿಕ ಬದುಕಿನ ಬದಲಿಗೆ ಅವಳು ನೆಚ್ಚಿಕೊಂಡ ಮಾರ್ಗ. ಇದೇ ಅವಳ ಒಲವು ಮತ್ತು ನಿಲುವು.

ಅತ್ತೆ ಮಾಯೆ ಮಾವ ಸಂಸಾರಿ
ಮೂವರು ಮೈದುನರು ಹುಲಿಯಂತವದಿರು
ನಾಲ್ವರು ನಗೆವೆಣ್ಣು ಕೇಳು ಕೆಳದಿ
ಐವರು ಬಾವಂದಿರನೊಯ್ವ ದೈವವಿಲ್ಲ
ಆರು ಪ್ರಜೆಯತ್ತಿಗೆಯರ ಮೀರಲಾರೆನು
ತಾಯೆ, ಹೇಳುವಡೆ ಏಳು ಪ್ರಜೆ ತೊತ್ತಿರ ಕಾಹು
ಕರ್ಮವೆಂಬ ಗಂಡನ ಬಾಯ ಟೊಣೆದು
ಹಾದರನಾಡುವೆನು ಹರನ ಕೂಡೆ
ಮನವೆಂಬ ಸಖಿಯ ಪ್ರಸಾದದಿಂದ
ಅನುಭಾವವ ಕಲಿತೆನು ಶಿವನೊಡನೆ
ಕರಚೆಲುವ ಶ್ರೀಶೈಲ ಚೆನ್ನಮಲ್ಲಿಕಾರ್ಜುನನೆಂಬ
ಸಜ್ಜನ ಗಂಡನ ಮಾಡಿಕೊಂಡೆ (ಅದೇ, ಪು.45)

ಈ ಮೇಲಿನ ವಚನದ ಸಾಲುಗಳು ಅಕ್ಕ ಆರಿಸಿಕೊಂಡ ವೈರಾಗ್ಯದ ಬದುಕಿನ ಕಾರಣಗಳನ್ನು ಸ್ಪಷ್ಟಪಡಿಸುತ್ತಿವೆ. ಅತ್ತೆಯೆಂಬ ಮೋಹ, ಮಾವನೆಂಬ ಸಂಸಾರದ ಆಸೆ, ಮೈದುನರೆನ್ನುವ ಮಲತ್ರಯಗಳು ಹುಲಿಯಂತೆ ಆವರಿಸಿಕೊಳ್ಳುತ್ತವೆ; ನಾಲ್ವರು ನಗೆವೆಣ್ಣು ಎಂದರೆ ಮನ, ಬುದ್ಧಿ, ಚಿತ್ತ, ಅಹಂಕಾರಗಳೆಂಬವು; ಐವರು ಭಾವಂದಿರು ಎಂದರೆ ಪಂಚೇಂದ್ರಿಯಗಳ ಸುಖಗಳು; ಆರು ಪ್ರಜೆಯತ್ತಿಗೆಯರು ಎಂದರೆ ಅರಿಷಡ್ವರ್ಗಗಳು; ಈ ಎಲ್ಲ ಸಾಂಸಾರಿಕ ಬಂಧನಗಳನ್ನೂ ಮೀರಿ, ಕರ್ಮವೆಂಬ ಗಂಡನ ಬಾಯಿಯನ್ನು ಕಟ್ಟಿಹಾಕಿ ಮನವೆಂಬ ಸಖಿಯ ಪ್ರಸಾದದಿಂದ ಅನುಭಾವವನ್ನು ಕಲಿತೆನು, ಲೌಕಿಕ ಸಂಸಾರದ ಆಸೆ–ಆಮಿಷಗಳನ್ನು ತೊರೆದು ಸಜ್ಜನನಾದ ಶ್ರೀಶೈಲಮಲ್ಲಿಕಾರ್ಜುನನನ್ನು ಗಂಡನಾಗಿ ಮಾಡಿಕೊಂಡೆ ಎನ್ನುತ್ತಾಳೆ ಅಕ್ಕ. ಈ ಬೆಡಗಿನ ವಚನದಲ್ಲಿ ವೈರಾಗ್ಯದ ಹಾದಿಯ ಕುರಿತಂತೆ ಅಕ್ಕನ ಸ್ಪಷ್ಟ ನಿಲುವಿನ ಜೊತೆಗೆ ಅವಳ ನಿರೂಪಣೆಯ ಶೈಲಿ ಮತ್ತು ಕಾವ್ಯಗುಣ ಓದುಗರನ್ನು ಸೆಳೆಯುತ್ತದೆ. ಈವರೆಗೂ ಗಮನಿಸಿದಂತೆ ಅಕ್ಕನ ನಿಲುವು, ಒಲವುಗಳ ಬಗ್ಗೆ ಹೊರಗಿನ ಅಭಿಪ್ರಾಯಗಳಿಗಿಂತ ಅಕ್ಕನ ವಚನಗಳು ಮತ್ತು 'ಯೋಗಾಂಗ ತ್ರಿವಿಧಿ' ಎಂಬ ಕಾವ್ಯವು ಸ್ಪಷ್ಟ ಚಿತ್ರಣ ನೀಡುತ್ತವೆ. ಹಾಗಾಗಿ ಇವುಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದರೆ ಅಕ್ಕನ ವ್ಯಕ್ತಿತ್ವದ ಕುರಿತಂತೆ ಇನ್ನಷ್ಟು ವಿಚಾರಗಳು ಬೆಳಕಿಗೆ ಬರಬಹುದು.

□

# ವಾರ್ತಾವಿಹಾರ

ಕುಮಾರಸ್ವಾಮಿ ವಿರಕ್ತಮಠ

**ಆತ್ಮವಿಶ್ವಾಸವಿದ್ದರೆ ಏನನ್ನಾದರೂ ಸಾಧಿಸಬಹುದು**

ವೈದ್ಯಕೀಯ ಪದವಿ ಮುಗಿಸಿರುವ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವಿದ್ದರೆ ಏನನ್ನಾದರೂ ಸಾಧಿಸಬಹುದು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗದ ಮೆಡಿಕಲ್ ಅಸೆಸ್ಮೆಂಟ್ ಮತ್ತು ರೇಟಿಂಗ್ ಬೋರ್ಡ್ ಅಧ್ಯಕ್ಷರಾದ ಡಾ. ಎಂ.ಕೆ. ರಮೇಶ್‌ರವರು ಏಪ್ರಿಲ್ 4ರಂದು ಮೈಸೂರು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ತಿಳಿಸಿದರು. ವೈದ್ಯಕೀಯ ಸೇವೆಯಲ್ಲಿರುವವರು ಪುಸ್ತಕಗಳನ್ನು ಓದಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಜ್ಞಾನ ಹೆಚ್ಚಾದಂತೆ ಆತ್ಮವಿಶ್ವಾಸ ವೃದ್ಧಿಯಾಗುತ್ತದೆ. ಆತ್ಮವಿಶ್ವಾಸದಿಂದ ಕೆಲಸ ಮಾಡಿದಾಗ ನಿಮ್ಮಲ್ಲಿನ ಸಾಮರ್ಥ್ಯ ಹೊರಹಾಕಲ್ಪಡುತ್ತದೆ. ವಾರ್ಡಿನಲ್ಲಿ ರೋಗಿಗಳ ಜತೆ ಹೆಚ್ಚು ಸಮಯ ಕಳೆಯಬೇಕು. ಆಗ ನಿಮ್ಮಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ಪರಿಣಿತಿ ಲಭಿಸುತ್ತದೆ. ಇದರಿಂದ ಸಮಾಜ ನಿಮ್ಮನ್ನು ಹೆಚ್ಚು ಗೌರವಿಸುವುದಲ್ಲದೇ ನಿಮ್ಮ ಮೇಲೆ ಬಹಳ ನಂಬಿಕೆ ಇಡುತ್ತದೆ. ಇಂದಿನ ದಿನಗಳಲ್ಲಿ ಹೆಚ್ಚಾಗಿ ಮೊಬೈಲ್ ಗೀಳಿಗೆ ಬಲಿಯಾಗುತ್ತಿದ್ದಾರೆ. ಯುವ ಸಮೂಹ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ, ತಂತ್ರಜ್ಞಾನ ಸದ್ಬಳಕೆಗೆ ಮುಂದಾಗಬೇಕು. ಅದರಲ್ಲೂ ವೈದ್ಯಕೀಯ ಕ್ಷೇತ್ರದವರು ನವೀನ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಬೇಕು, ಹೊಸ ತಂತ್ರಜ್ಞಾನ ಗಳನ್ನು ಕಲಿಯ ಬೇಕು. ಒತ್ತಡವನ್ನು ಸಮರ್ಥವಾಗಿ ನಿಭಾಯಿಸಬೇಕು ಎಂದು ಹೇಳಿದರು.

ಸಮಾರಂಭದಲ್ಲಿ 195 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 4 ಪ್ರತಿಭಾವಂತ ವಿದ್ಯಾರ್ಥಿಗಳಿಗೆ 11 ಚಿನ್ನದ ಪದಕಗಳು ಹಾಗೂ 13 ನಗದು ಬಹುಮಾನಗಳನ್ನು ನೀಡಲಾಯಿತು.

ಡಾ. ಸಿ.ಜಿ. ಬೆಟಸೂರಮಠ ವಿಶೇಷ ಸಂಚಿಕೆ ಬಿಡುಗಡೆಗೊಳಿಸಿದರು. ಡಾ. ಹೆಚ್. ಬಸವನಗೌಡಪ್ಪ, ಡಾ. ಬಿ. ಮಂಜುನಾಥ್, ಡಾ. ಎನ್. ಸುಧೀಂದ್ರ ಭಟ್, ಡಾ. ಎಂ.ಎನ್. ಸುಮಾ, ಡಾ. ಸಿ.ಪಿ. ಮಧುರವರುಗಳು ಉಪಸ್ಥಿತರಿದ್ದರು. ಕು. ಪಾರ್ವತಿ ವೆಂಕಟೇಶ್ ಹಾಗೂ ಕು. ಭುವನಾ ಪ್ರಾರ್ಥಿಸಿದರು. ಡಾ. ಡಿ. ನಾರಾಯಣಪ್ಪ ಸ್ವಾಗತಿಸಿದರು. ಡಾ. ಮಾಂತಪ್ಪ ವಂದಿಸಿದರು. ಡಾ. ಡಿ. ಸಂಧ್ಯಾ ಹಾಗೂ ಡಾ. ಶಿವಾನಂದ್ ಮನೋಹರ್ ಕಾರ್ಯಕ್ರಮ ನಿರೂಪಿಸಿದರು.

### ಕಲೆ ಮತ್ತು ಸಾಹಿತ್ಯ ಮನಸ್ಸಿಗೆ ಸಾಂತ್ವನ ನೀಡುವ ಅದ್ಭುತ ಶಕ್ತಿಗಳು

ಕಲೆ ಮತ್ತು ಸಾಹಿತ್ಯ ಮನುಷ್ಯನ ಮನಸ್ಸಿಗೆ ಸಾಂತ್ವನ ನೀಡುವ ಅದ್ಭುತ ಶಕ್ತಿಗಳು ಎಂದು ಪರಮಪೂಜ್ಯ ಜಗದ್ಗುರುಗಳವರು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಏಪ್ರಿಲ್ 15ರಂದು ನಡೆದ 2023, 2024 ಮತ್ತು 2025ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ವಚನ ಚಿತ್ರರಚನಾ ಪಿತಾಮಹ ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿ ಹಾಗೂ ಕಲಾಗುರು ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಗಳ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕಲಾವಿದ ರಚಿಸುವ ಚಿತ್ರಗಳಿಗೆ ಮನುಷ್ಯನನ್ನೇ ಮರೆಸುವಂಥ ಶಕ್ತಿಯಿರುತ್ತದೆ. ಕಲೆ, ಸಾಹಿತ್ಯ, ಸಂಗೀತ ಮತ್ತು ನೃತ್ಯಗಳಲ್ಲಿ ಸಂಪೂರ್ಣವಾಗಿ ತಲ್ಲೀನವಾದರೆ ಅವುಗಳು ಅದ್ಭುತವಾಗಿ ಮೂಡಿಬರುತ್ತವೆ. ಅವು ನೋಡುಗರು ಮತ್ತು ಓದುಗರ ಮನಸ್ಸುಗಳಿಗೂ ಮುದ ನೀಡುತ್ತವೆ. ಸಾಹಿತ್ಯ ಮತ್ತು ಕಲಾಕ್ಷೇತ್ರದಲ್ಲಿ ಅಂತಹ ಪ್ರಾವೀಣ್ಯತೆಯನ್ನು ಹೊಂದಿರುವವರನ್ನು ಗುರುತಿಸಿ ಇಲ್ಲಿ ಗೌರವಿಸಲಾಗಿದೆ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಡಾ. ಬಿ.ಎಸ್. ಮಂಜುನಾಥ ಸ್ವಾಮಿಯವರು ಹಿಂದೆ ರಾಜ–ಮಹಾರಾಜರುಗಳ ಕಾಲದಲ್ಲಿ ಕಲೆ, ಸಂಸ್ಕೃತಿಯನ್ನು ಗೌರವಿಸಲಾಗುತ್ತಿತ್ತು. ಅಂತಹ ಅದ್ಭುತವಾದ ಕಾರ್ಯವನ್ನು ಶ್ರೀಮಠ ಮಾಡಿಕೊಂಡು ಬರುತ್ತಿದೆ. ನಿಜವಾದ ಕಲಾವಿದರ ಕಾರ್ಯಗಳನ್ನು ಗುರುತಿಸಿ ಇಲ್ಲಿ ಸನ್ಮಾನಿಸಿ ಪ್ರೋತ್ಸಾಹಿಸಲಾಗಿದೆ. ಇಂದು ಪುಸ್ತಕ ಸಂಸ್ಕೃತಿ ಹೆಚ್ಚುತ್ತಿದೆ. ಬರೆಯುವವರು ಹೆಚ್ಚಾಗಿದ್ದಾರೆ ಆದರೆ ಓದುವವರ ಸಂಖ್ಯೆಯಲ್ಲಿ ಕೊರತೆಯಿದೆ. ಒರೆಗೆ ಹಚ್ಚಿ ವಿಮರ್ಶೆ ಮಾಡುವವರು ಹೆಚ್ಚಬೇಕಿದೆ. ಸಂಸ್ಕೃತಿಯ ಬೆಳವಣಿಗೆಯಲ್ಲಿ ಕಲೆ ಮತ್ತು ಸಾಹಿತ್ಯದ ಪಾತ್ರ ಅಪಾರವಾದುದು. ಪೂಜ್ಯರು ಇಂತಹ ಅತ್ಯುತ್ತಮವಾದ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ನಮಗೆಲ್ಲ ಮಾರ್ಗದರ್ಶಕರಾಗಿದ್ದಾರೆ ಎಂದರು.

ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿಯವರು ಕಲೆ ಜನರ ಬದುಕಿನ ಭಾಗವಾಗಿದೆ. ದೃಶ್ಯಕಲೆಯಲ್ಲಿ ವ್ಯಕ್ತಿ, ಮೌಲ್ಯ ಮತ್ತು ಚಿಂತನೆಗಳು ಬಹಳ ಮುಖ್ಯವಾದವು. ಶ್ರೀಮಠ ಅಕ್ಷರ ಸಂಸ್ಕೃತಿಯ ಜೊತೆಗೆ ಅನಕ್ಷರತಾ ಪ್ರಜ್ಞೆಯನ್ನು ಗುರುತಿಸಿ ಗೌರವಿಸುತ್ತಿದೆ. ಇಂದು ಸನ್ಮಾನಿಸಿರುವ ಕಲಾವಿದರೆಲ್ಲರೂ ಪರಂಪರೆಯ ವಕ್ತಾರರಾಗಿ ನಿಲ್ಲುವಂಥವರು ಎಂದು ಹೇಳಿದರು.

ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಯನ್ನು ಡಾ. ಓ.ಎಲ್. ನಾಗಭೂಷಣಸ್ವಾಮಿ, ಶ್ರೀ ಎಚ್.ಎಸ್. ಸಿದ್ಧಗಂಗಪ್ಪ, ಡಾ. ಎಸ್. ಶಿವಾನಂದ ಬ್ಯಾಲಹುಣಸಿ, ಡಾ. ಅಜಯ ಕುಮಾರ್ ತಾಂಡೂರ ಹಾಗೂ ದಿ. ಪ್ರೊ. ಭಾಲಚಂದ್ರ ಜಯಶೆಟ್ಟಿ ಅವರ ಪರವಾಗಿ ಅವರ ಕುಟುಂಬದವರಿಗೆ, ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿಯನ್ನು ಶ್ರೀ ಸಂಗಪ್ಪ ನಿಂಗಪ್ಪ

ಮಲಗೊಂಡ, ಶ್ರೀ ಶಿವಪುತ್ರಪ್ಪ ಎಂ. ಬಡಿಗೇರ ಮತ್ತು ಶ್ರೀ ಚಂದ್ರಶೇಖರ ಭೀಮಣಪ್ಪ ಸೋಮಶೆಟ್ಟಿಯವರುಗಳಿಗೆ ಹಾಗೂ ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಯನ್ನು ಪ್ರೊ. ಕೆ.ಎಸ್. ಅಪ್ಪಾಜಯ್ಯ, ಶ್ರೀ ವಿಜಯ ರಾವ್ ಹಾಗೂ ಶ್ರೀ ಕಿಶೋರ್‌ಕುಮಾರ್ ಹಿರೇಮಠರವರುಗಳಿಗೆ ಪ್ರದಾನ ಮಾಡಲಾಯಿತು.

ಶ್ರೀ ಸತೀಶ್ ಪ್ರಫುಲ್ಲಚಂದ್ರ, ಶ್ರೀ ಸುರೇಶ್ ಡಿ. ಹಾಲಭಾವಿ, ಶ್ರೀಮತಿ ಪಾರ್ವತಿ ಹಾಲಭಾವಿ, ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ ಹಾಗೂ ಶ್ರೀ ಸುದರ್ಶನ್‌ರವರುಗಳು ಉಪಸ್ಥಿತರಿದ್ದರು. ಧ್ವನಿ ಫೌಂಡೇಷನ್‌ನ ಅಧ್ಯಕ್ಷರಾದ ಡಾ. ಶ್ವೇತಾ ಮಡಪ್ಪಾಡಿಯವರು ಕೃತಿಗಳ ಪರಿಚಯವನ್ನು ಮಾಡಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರು. ಶ್ರೀ ರೂಪ ಗುರುಪ್ರಸಾದ್ ಹಾಗೂ ಶ್ರೀ ಕೆ.ಜಿ. ವಿನುತಾ ಪ್ರಾರ್ಥಿಸಿದರು. ಶ್ರೀ ನಗರ್ಲೆ ಶಿವಕುಮಾರ, ಕು. ಎಚ್.ಎಸ್. ಅಂಬಿಕಾ ಶಿವನಂಜಪ್ಪ, ಶ್ರೀ ಎನ್.ಪಿ. ಪರಶಿವಮೂರ್ತಿ, ಡಾ. ಹೆಚ್.ಆರ್. ಮಮತಾ, ಶ್ರೀ ಜಿ.ಎಂ. ಪ್ರಸಾದ್, ಶ್ರೀಮತಿ ನಾಗಲಾಂಬಿಕಾ ನಾಗಲಿಂಗಸ್ವಾಮಿ, ಶ್ರೀ ಕುಮಾರಸ್ವಾಮಿ ವಿರಕ್ತಮಠ, ಶ್ರೀಮತಿ ಸೌಮ್ಯ, ಶ್ರೀ ಎಸ್.ಸಿ. ಚನ್ನಬಸಪ್ಪ, ಶ್ರೀಮತಿ ಡಿ.ಎಸ್. ಅಂಬಿಕಾ ಮತ್ತು ಶ್ರೀಮತಿ ಎಂ. ದೇವಿಕಾರವರುಗಳು ಪ್ರಶಸ್ತಿಪುರಸ್ಕೃತರ ಸ್ವಸ್ತಿ ವಾಚನ ಮಾಡಿದರು. ಡಾ. ರೇಚಣ್ಣ ವಂದಿಸಿದರು. ಶ್ರೀ ಬಿ. ನಿರಂಜಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಸಾಹಿತ್ಯಕ್ಕೆ ಜಾನಪದ ಬುನಾದಿ**

ಸಾಹಿತ್ಯ ಕ್ಷೇತ್ರಕ್ಕೆ 'ಜಾನಪದ ಸಾಹಿತ್ಯ' ಭದ್ರ ಬುನಾದಿಯಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 16ರಂದು ಪಾಂಡವಪುರದಲ್ಲಿ ನಡೆದ ಜಾನಪದ ತಜ್ಞರು ಮತ್ತು ಲೇಖಕರಾದ ಡಾ. ಕ್ಯಾತನಹಳ್ಳಿ ರಾಮಣ್ಣನವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡುತ್ತಾ ತಿಳಿಸಿದರು. ಜಾನಪದ ಸಾಹಿತ್ಯದಲ್ಲಿ ಎಂ.ಎ. ಪಡೆದವರಿಗೆ ಕನ್ನಡ ಪ್ರಾಧ್ಯಾಪಕರ ಹುದ್ದೆಗಳು ದೊರೆಯುತ್ತಿಲ್ಲ. ಸರ್ಕಾರಗಳು ಪರಿಶೀಲಿಸಿ ಜಾನಪದ ಸಾಹಿತ್ಯ ಓದಿಕೊಂಡವರಿಗೂ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುವ ಅವಕಾಶಗಳನ್ನು ನೀಡಿ ಪ್ರೋತ್ಸಾಹಿಸಬೇಕು. ನಾಗರಿಕರ ಸಹಜ ಮಾತುಗಳು ಮತ್ತು ಜನರ ಹೃದಯದಿಂದ ಹುಟ್ಟುವ ಜಾನಪದ ಸಾಹಿತ್ಯವು ಗ್ರಾಮೀಣ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕೆಲಸ ಮಾಡುತ್ತಿದೆ. ಒಂದು ಜಾನಪದ ಹಾಡು ಮನುಷ್ಯನ ಮನಸ್ಸನ್ನು ಮೃದುಗೊಳಿಸುತ್ತದೆ. ಇಂತಹ ಜನಪದ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ತಿಳಿಸುವ ಕೆಲಸವಾಗಬೇಕಿದೆ. ಕ್ಯಾತನಹಳ್ಳಿ ರಾಮಣ್ಣನವರು ಮಿತಭಾಷಿ, ಸರಳ, ಸಜ್ಜನಿಕೆಯ ವ್ಯಕ್ತಿತ್ವ ಉಳ್ಳವರು. ಜೊತೆಗೆ ಹಿಂಜರಿಕೆಯ ಮನೋಭಾವ ರೂಢಿಸಿಕೊಂಡಿದ್ದಾರೆ. ಕ್ಷೇತ್ರ ಕಾರ್ಯ ಮಾಡಿ ಜನಪದ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ವಿಶ್ವ ಒಕ್ಕಲಿಗರ ಮಠದ ಡಾ. ಶ್ರೀ ನಿಶ್ಚಲಾನಂದನಾಥ ಸ್ವಾಮಿಗಳು, ನಾಡೋಜ ಡಾ. ಗೊ.ರು. ಚನ್ನಬಸಪ್ಪ, ಶಾಸಕರಾದ ಶ್ರೀ ದರ್ಶನ್ ಪುಟ್ಟಣ್ಣಯ್ಯ, ಮಾಜಿ ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜು, ವಿಶ್ರಾಂತ ಕುಲಪತಿಗಳಾದ ಡಾ. ಅಂಬಳಿಕೆ ಹಿರಿಯಣ್ಣ, ಶ್ರೀ ಎಸ್.ಎ. ಮಲ್ಲೇಶಪ್ಪ, ಶ್ರೀ ಮೇನಾಗರ ಪ್ರಕಾಶ್, ಪ್ರೊ. ವ.ನಂ. ಶಿವರಾಮು ಮೊದಲಾದವರು ಉಪಸ್ಥಿತರಿದ್ದರು. ಪ್ರೊ. ಎಂ. ಕೃಷ್ಣೇಗೌಡ ಅಭಿನಂದನಾ ನುಡಿಗಳನ್ನಾಡಿದರು. ಶ್ರೀ ಕೆ.ಟಿ. ಗೋವಿಂದೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಎ.ಎಲ್. ಕೆಂಪೂಗೌಡ ಸ್ವಾಗತಿಸಿದರು. ಶ್ರೀ ಎಚ್.ಆರ್. ಧನ್ಯಕುಮಾರ್ ವಂದಿಸಿದರು. ಪ್ರೊ. ಜಿ. ಉಷಾರಾಣಿ ಕಾರ್ಯಕ್ರಮ ನಿರೂಪಿಸಿದರು.

**ಸಮಸಮಾಜದ ನಿರ್ಮಾಣಕ್ಕೆ ಶ್ರಮಿಸಿದ ಬಸವಣ್ಣನವರು**

ಬಸವಣ್ಣನವರು 12ನೇ ಶತಮಾನದಲ್ಲೇ ಸಾಮಾಜಿಕ ಚಳುವಳಿ ಮೂಲಕ ಸಮಸಮಾಜದ ನಿರ್ಮಾಣಕ್ಕೆ ಶ್ರಮಿಸಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 20ರಂದು ಮೈಸೂರು ಕಲಾಮಂದಿರದಲ್ಲಿ ಜಿಲ್ಲಾಡಳಿತ ಮತ್ತು ಬಸವ ಬಳಗಗಳ ಒಕ್ಕೂಟವು ಆಯೋಜಿಸಿದ್ದ ಬಸವ ಜಯಂತಿಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮೈಸೂರಿನಲ್ಲಿ ಕಳೆದ 29 ವರ್ಷಗಳಿಂದ ಎಲ್ಲಾ ಸಂಘಸಂಸ್ಥೆಗಳು ಒಗ್ಗಟ್ಟಿನಿಂದ ಬಸವಜಯಂತಿ ಆಚರಿಸಿಕೊಂಡು ಬರುತ್ತಿರುವುದು ಇಡೀ ರಾಜ್ಯಕ್ಕೆ ಮಾದರಿಯಾಗಿದೆ. ಲಿಂಗತಾರತಮ್ಯವಿಲ್ಲದೇ ಪ್ರತಿಯೊಬ್ಬರೂ ಭಗವಂತನ ಆರಾಧನೆ ಮಾಡುವುದನ್ನು ಬಸವಣ್ಣನವರು ತೋರಿಸಿಕೊಟ್ಟಿದ್ದಾರೆ. ಜನಸಾಮಾನ್ಯರ ಭಾಷೆಯನ್ನು ದೈವಭಾಷೆಯನ್ನಾಗಿ ಮಾಡಿದ ಕೀರ್ತಿ ಅವರಿಗೆ ಸಲ್ಲಬೇಕು. ಅವರ ಆದರ್ಶಗಳು ಶ್ರೀ ಸಿದ್ದರಾಮಯ್ಯನವರ ಸರ್ಕಾರಕ್ಕೆ ಮಾದರಿಯಾಗಿವೆ. ಅವರು ಮುಖ್ಯಮಂತ್ರಿ ಆದ ಬಳಿಕ ಬಸವಣ್ಣನವರ ತತ್ತ್ವದ ಆಧಾರದ ಮೇಲೆ ಆಡಳಿತವನ್ನು ನಡೆಸುತ್ತಿದ್ದಾರೆ. ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸುವುದರ ಜೊತೆಗೆ ಅವರ ಭಾವಚಿತ್ರಗಳನ್ನು ಸರ್ಕಾರಿ ಕಚೇರಿಯಲ್ಲಿ ಹಾಕುವುದನ್ನು ಕಡ್ಡಾಯ ಮಾಡಿ ಆದೇಶಿಸಿರುವುದು ಶ್ಲಾಘನೀಯ ಎಂದರು.

ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಬಸವಣ್ಣನವರು ಪ್ರತಿಪಾದಿಸಿದ ಸಮಾನತೆಯ ಸಮಾಜ ನಿರ್ಮಿಸುವುದೇ ನಮ್ಮ ಸರ್ಕಾರದ ಮೂಲ ಉದ್ದೇಶ. ಬಸವಣ್ಣನವರು ಮೇಲ್ಜಾತಿಯಲ್ಲಿ ಹುಟ್ಟಿದರೂ ಜಾತಿ ವ್ಯವಸ್ಥೆ ತಿರಸ್ಕರಿಸಿ, ತಳ ಸಮುದಾಯದವರೊಂದಿಗೆ ಗುರುತಿಸಿಕೊಂಡಿದ್ದ ಕ್ರಾಂತಿಕಾರಿಗಳು. ಲಿಂಗಾಯತ ಧರ್ಮವು ಸಮಾನತೆಯ ಸಂಕೇತ. ಬಸವಣ್ಣನವರು ಮಾನವೀಯತೆ ಮತ್ತು ಸಮಾನ ಅವಕಾಶವುಳ್ಳ ಲಿಂಗಾಯತ ಧರ್ಮ ಸ್ಥಾಪಿಸಿದರು. ಅಕ್ಷರ ಸಂಸ್ಕೃತಿಯಿಂದ ವಂಚಿತರಾದವರಿಗೆ ಶರಣರು ದನಿಯಾದರು. ಬಸವಣ್ಣನವರ ಸಮಾಜದಲ್ಲಿ ಅನುಷ್ಠಾನಗೊಂಡಿದ್ದ ಕುಳಿತು ತಿನ್ನುವಂತಿಲ್ಲ,

ಪ್ರತಿಯೊಬ್ಬರೂ ಉತ್ಪಾದನೆಯಲ್ಲಿ ತೊಡಗಬೇಕು ಮತ್ತು ಸಮಾನವಾಗಿ ಹಂಚಿಕೊಳ್ಳಬೇಕು ಎಂಬ ಕಾಯಕ–ದಾಸೋಹ ತತ್ತ್ವವನ್ನೇ ನಮ್ಮ ಸರ್ಕಾರ ಅನುಸರಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಬೆಲ್ದಾಳ ಶ್ರೀ ಸಿದ್ದರಾಮ ಶರಣರಿಗೆ ರಾಷ್ಟ್ರೀಯ ಬಸವ ಪುರಸ್ಕಾರವನ್ನು ಪ್ರದಾನ ಮಾಡಲಾಯಿತು. ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ಶಿವರಾಜ್ ತಂಗಡಗಿ, ಶಾಸಕರಾದ ಶ್ರೀ ಕೆ. ಹರೀಶ್‌ಗೌಡ, ಶ್ರೀ ತನ್ವೀರ್ ಸೇಠ್, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಕೆ. ಶಿವಕುಮಾರ್, ಡಾ. ಡಿ. ತಿಮ್ಮಯ್ಯ, ಶ್ರೀ ಸಿ.ಎನ್. ಮಂಜೇಗೌಡ, ಶ್ರೀ ಕೆ. ವಿವೇಕಾನಂದ, ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷರಾದ ಡಾ. ಪುಷ್ಪಾವತಿ ಅಮರನಾಥ್, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಂ. ಚಂದ್ರಶೇಖರ್ ಮೊದಲಾದವರು ಇದ್ದರು.

**ಶರಣರ ವಚನ ಸಂರಕ್ಷಣೆಗೆ ಮಠಗಳು ಮುಂದಾಗಬೇಕು**

12ನೇ ಶತಮಾನದ ಬಸವಾದಿ ಶರಣರ ವಚನಗಳು ಕನ್ನಡ ಸಾಹಿತ್ಯದ ವಿಶಿಷ್ಟ, ಸರಳ ಹಾಗೂ ಅನುಭಾವಿಕ ಕಾವ್ಯ ಪ್ರಕಾರಗಳಾಗಿದ್ದು, ಅವುಗಳ ಸಂರಕ್ಷಣೆ ಮತ್ತು ಬೆಳವಣಿಗೆಗೆ ಮಠಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 27ರಂದು ಹಾಸನದ ಶ್ರೀ ತಣ್ಣೀರುಹಳ್ಳ ಮಠದಲ್ಲಿ ಆಯೋಜಿಸಿದ್ದ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಬಸವಾದಿ ಶರಣರ ವಚನಗಳು ಸಮಾಜಕ್ಕೆ ದಿಕ್ಕು ತೋರಿಸುವ ಶಾಶ್ವತ ಸಂದೇಶಗಳಾಗಿವೆ. ಸಮಾನತೆ, ಕಾಯಕ ತತ್ತ್ವ, ಜಾತಿ–ಲಿಂಗ ಭೇದ ನಿರ್ಮೂಲನೆ, ಸತ್ಯ ಮತ್ತು ಶುದ್ಧಭಕ್ತಿ ಮುಂತಾದ ಮೌಲ್ಯಗಳನ್ನು ವಚನಗಳು ಪ್ರತಿಪಾದಿಸುತ್ತವೆ. ಸಾಮಾನ್ಯ ಜನರೂ ಅರ್ಥ ಮಾಡಿಕೊಳ್ಳುವ ಸರಳ ಕನ್ನಡದಲ್ಲಿ ರಚನೆಯಾಗಿರುವ ವಚನಗಳು ಅಂತರಂಗದ ಶುದ್ಧಿ ಮತ್ತು ಸಾಮಾಜಿಕ ಪರಿವರ್ತನೆಗೆ ದಾರಿದೀಪವಾಗಿವೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಶಿವಸಿದ್ಧೇಶ್ವರ ಮಹಾಸ್ವಾಮಿಗಳವರು ಮಠಗಳು ಕೇವಲ ಪೂಜೆ–ಪುರಸ್ಕಾರಗಳ ಕೇಂದ್ರಗಳಾಗದೆ, ವಿದ್ಯಾರ್ಥಿಗಳಿಗೆ ಅಕ್ಷರ ದಾಸೋಹ, ವಸ್ತ್ರ ದಾಸೋಹ ಹಾಗೂ ವಸತಿ ದಾಸೋಹ ನೀಡುವ ತ್ರಿವಿಧದಾಸೋಹದ ಕೇಂದ್ರಗಳಾಗಬೇಕು. ಶಿಕ್ಷಣದಲ್ಲಿ ಸಂಸ್ಕಾರ ತುಂಬಿದಾಗ ಮಾತ್ರ ಭವ್ಯ ಭಾರತ ನಿರ್ಮಾಣ ಸಾಧ್ಯವಾಗುತ್ತದೆ ಎಂದರು.

ಪುಷ್ಪಗಿರಿ, ಕನಕಪುರ, ಬೆಳಗೋಡು, ಅರಮೇರಿ, ತಣ್ಣೀರುಹಳ್ಳ, ಆದಿಚುಂಚನಗಿರಿ ಹಾಸನ ಶಾಖಾಮಠದ ಶ್ರೀಗಳು, ಸಂಸದರಾದ ಶ್ರೀ ಶ್ರೇಯಸ್ ಎಂ. ಪಟೇಲ್, ಶಾಸಕರಾದ ಶ್ರೀ ಸ್ವರೂಪ್ ಪ್ರಕಾಶ್, ಕರ್ನಾಟಕ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಶಿವಾನಂದ ತಗಡೂರು, ಮಾಜಿ ಶಾಸಕರಾದ ಶ್ರೀ ಕೆ.ಎಸ್. ಲಿಂಗೇಶ್ ಹಾಗೂ ಶ್ರೀ ಗುರುದೇವ್,

ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಾದ ಶ್ರೀ ನವಿಲೆ ಪರಮೇಶ್, ತಾಲ್ಲೂಕು ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಾದ ಶ್ರೀ ಕಟ್ಟಾಯ ಶಿವಕುಮಾರ್ ಉಪಸ್ಥಿತರಿದ್ದರು.

**ಶ್ರೀ ಹೆಚ್.ಡಿ. ದೇವೇಗೌಡರು ಅಪ್ಪಟ ಗ್ರಾಮೀಣ ಪ್ರತಿಭೆ**

ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರು ಅಪ್ಪಟ ಗ್ರಾಮೀಣ ಪ್ರತಿಭೆ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 27ರಂದು ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಬಸವ ವೇದಿಕೆಯಿಂದ ಆಯೋಜಿಸಿದ್ದ ಬಸವ ಜಯಂತಿಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಶ್ರೀ ದೇವೇಗೌಡರು ಪ್ರಧಾನಿಗಳಾದರೂ ಜನಸಾಮಾನ್ಯರು ದೈನಂದಿನ ಜೀವನದಲ್ಲಿ ಎದುರಿಸುವ ಕಷ್ಟ ಸುಖಗಳನ್ನು ಮರೆಯಲಿಲ್ಲ. ಪ್ರಧಾನಿಯಾದ ಬಳಿಕವೂ ಜನಸಾಮಾನ್ಯರ ಜೊತೆ ಇರುವುದಾಗಿ ಅವರು ಹೇಳುತ್ತಿದ್ದರು. ಹಳ್ಳಿಗಳಿಗೆ ವಿದ್ಯುತ್, ರಸ್ತೆ, ನೀರು, ಶಿಕ್ಷಣದಂತಹ ಅಗತ್ಯ ಸೌಲಭ್ಯಗಳನ್ನು ನೀಡಬೇಕು. ಜನರ ಕಷ್ಟಗಳು, ಸಮಸ್ಯೆಗಳನ್ನು ಪರಿಹರಿಸಿದರೆ ಅಭಿವೃದ್ಧಿ ತಾನಾಗಿಯೇ ಆಗುತ್ತದೆ ಎಂದು ಹೇಳುತ್ತಿದ್ದರು. ಇಂದಿಗೂ ಅವರ ಮಾತುಗಳು ಪ್ರಸ್ತುತವಾಗಿವೆ. ಡಾ. ಗುರುರಾಜ್ ಕರ್ಜಗಿಯವರು ಆಳವಾದ ಅಧ್ಯಯನವನ್ನು ಮಾಡಿ ಅರ್ಥೈಸಿಕೊಂಡು ಸಹೃದಯರಿಗೆ ತಿಳಿಸುವ ವಿನಯಶೀಲ ವ್ಯಕ್ತಿತ್ವವನ್ನು ಹೊಂದಿರುವವರು. ಅವರು ನೀಡುವ ಉಪನ್ಯಾಸಗಳಲ್ಲಿ ಕಥೆಗಳು ಮತ್ತು ಉದಾಹರಣೆಗಳು ಅತ್ಯಂತ ಮೌಲ್ಯಯುತವಾಗಿರುತ್ತವೆ. ಸಂವೇದನಾಶೀಲ ಮತ್ತು ಸರಳ ಮಾತುಗಳಿಂದ ಮನುಷ್ಯರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ನೈತಿಕಪ್ರಜ್ಞೆಯನ್ನು ಮೂಡಿಸುತ್ತಿದ್ದಾರೆ. ಅನೇಕ ಶಿಕ್ಷಣಸಂಸ್ಥೆಗಳಿಗೆ ಮಾರ್ಗದರ್ಶನ ನೀಡಿ ಗುಣಾತ್ಮಕವಾಗಿ ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಹೇಳಿದರು.

ಶ್ರೀ ಹೆಚ್.ಡಿ. ದೇವೇಗೌಡರ ಅನುಪಸ್ಥಿತಿಯಲ್ಲಿ 2026ನೇ ಸಾಲಿನ ಬಸವಶ್ರೀ ಪ್ರಶಸ್ತಿ ಹಾಗೂ ಶಿಕ್ಷಣತಜ್ಞ ಡಾ. ಗುರುರಾಜ ಕರ್ಜಗಿಯವರಿಗೆ ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೇಂದ್ರದ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣ ಮಾಜಿ ಮುಖ್ಯಮಂತ್ರಿಗಳು ಹಾಗೂ ಸಂಸದರಾದ ಶ್ರೀ ಬಸವರಾಜ ಬೊಮ್ಮಾಯಿ, ಸಚಿವರಾದ ಶ್ರೀ ಎಚ್.ಕೆ. ಪಾಟೀಲ್, ಸಂಸದರಾದ ಡಾ. ಸಿ.ಎನ್. ಮಂಜುನಾಥ್ ಉಪಸ್ಥಿತರಿದ್ದರು. ಡಾ. ಸಿ. ಸೋಮಶೇಖರ ಸ್ವಾಗತಿಸಿದರು. ಶ್ರೀ ಎಸ್. ಷಡಕ್ಷರಿ ಮತ್ತು ಶ್ರೀ ಎಂಡಿ. ಮಹಾಬಲೇಶ್ ಪ್ರಶಸ್ತಿ ವಾಚನ ಮಾಡಿದರು. ಶ್ರೀ ರುದ್ರಯ್ಯ ವಂದಿಸಿದರು. ಶ್ರೀಮತಿ ದಿವ್ಯ ಆಲೂರು ಕಾರ್ಯಕ್ರಮ ನಿರೂಪಿಸಿದರು.

**ಮಠಗಳ ಸಾಮಾಜಿಕ ಸೇವೆ ಅಪಾರ**

ರಾಜ್ಯದಲ್ಲಿ ಮಠಮಾನ್ಯಗಳು ಸಮಾಜಕ್ಕೆ ಸಲ್ಲಿಸುವ ಸೇವೆ ಅಪಾರ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 28ರಂದು ಗುಂಡ್ಲುಪೇಟೆ ತಾಲ್ಲೂಕು ಚಿಕ್ಕತುಪ್ಪೂರು ಶ್ರೀ ಶಿವಪೂಜಾ ಮಠದ ಶತಮಾನೋತ್ಸವ, ಪಟ್ಟದ ಶ್ರೀ ದಯಾನಂದ ಸ್ವಾಮಿಗಳ 22ನೇ ವರ್ಷದ ಸಂಸ್ಮರಣೋತ್ಸವ ಹಾಗೂ ಶ್ರೀಮಠದ ನೂತನ ಕಟ್ಟಡ ಉದ್ಘಾಟನೆಯ ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ರಾಜ್ಯದಲ್ಲಿ ಅನ್ನ, ಜ್ಞಾನ, ಆರೋಗ್ಯ ದಾಸೋಹಕ್ಕೆ ರಾಜ್ಯದ ಪ್ರತಿಯೊಂದು ಮಠವೂ ತನ್ನದೇ ಆದ ಕೊಡುಗೆ ನೀಡುತ್ತಿದೆ. ಎಲ್ಲಾ ಕ್ಷೇತ್ರದ ಅಭಿವೃದ್ಧಿಗೂ ಕೈ ಜೋಡಿಸಿವೆ. ಎಲ್ಲ ಮಠಮಾನ್ಯಗಳು ರಾಜ್ಯ ಹಾಗೂ ಜನರ ಕಲ್ಯಾಣ ಬಯಸಿವೆ. ಚಿಕ್ಕತುಪ್ಪೂರು ಪಟ್ಟದ ಶ್ರೀ ದಯಾನಂದ ಸ್ವಾಮಿಗಳು ಶಿವಪೂಜಾನಿಷ್ಠರಾಗಿದ್ದರು. ಈಗಿನ ಶ್ರೀ ಚನ್ನವೀರ ಸ್ವಾಮಿಗಳ ಸಾರಥ್ಯದಲ್ಲಿ ಮಠ ಪ್ರಗತಿಯನ್ನು ಕಂಡಿದೆ ಎಂದರು.

ಸಿದ್ಧಗಂಗಾ, ಕನಕಪುರ, ಪಡುಗೂರು, ಕುಂದೂರು, ದೇವನೂರು, ಹರವೆ, ಸಾಲೂರು, ವಾಟಾಳು ಮಠಗಳ ಶ್ರೀಗಳು, ಶಾಸಕರಾದ ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಎಚ್.ಎಸ್. ನಂಜಪ್ಪ, ಶ್ರೀ ಹೆಚ್.ಎಸ್. ನಂಜುಂಡ ಪ್ರಸಾದ್, ಶ್ರೀ ಹೆಚ್.ಎಸ್. ಪ್ರಭುಸ್ವಾಮಿ, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಕೆ.ಎಸ್. ರವಿ ಮೊದಲಾದವರು ಉಪಸ್ಥಿತರಿದ್ದರು.

□

ತನುಶೀಲವಂತರುಂಟು, ಧನಶೀಲವಂತರುಂಟು
ಧರೆಶೀಲವಂತರುಂಟು, ಕನಕ ವನಿತೆಶೀಲವಂತರುಂಟು
ಕೆಯಿ ತೋಟ ಹಿಂದೆಸೆ ಮುಂದೆಸೆ ನಿಳಯಶೀಲವಂತರುಂಟು
ಫಲ ಕುಸುಮ ವಿದಳ ಬಹುಧಾನ್ಯ ಮುಂತಾದ
ರಸದ್ರವ್ಯ ಪಶು ಪಾಷಾಣ ವಸ್ತ್ರ ಪರಿಮಳ
ಛತ್ರ ಚಾಮರ ಅಂದಳ ಕರಿ ತುರಗಂಗಳು
ಮುಂತಾದವೆಲ್ಲಕ್ಕೂ ಶೀಲವಂತರುಂಟು
ಅನುಸರಣೆಯ ಕಂಡಲ್ಲಿ, ಆಚಾರ ತಪ್ಪಿದಲ್ಲಿ, ಲಿಂಗ ಬಾಹ್ಯವಾದಲ್ಲಿ
ಆಗವೆ ಅಂಗವ ಬಿಟ್ಟು ಲಿಂಗದೊಡಗೂಡುವ ಶೀಲವಂತರಂಗವ ಕಾಣೆ
ಎನ್ನ ಕ್ರೀ ಭಂಗವಹುದಕ್ಕೆ ಮುನ್ನವೆ ನಿರಂಗವ ಹೇಳಾ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವೆ

**ಅಕ್ಕಮ್ಮ**

# ಪ್ರಸಾದ



## ಕೃತಿ–ಸ್ವೀಕೃತಿ

**ಕಾವಿ ಚಿತ್ರಕಲೆ**
ಶ್ರೀ ಗಂಜೀಫಾ ರಘುಪತಿಭಟ್ಟ
ಪ್ರ: ದಿವ್ಯ ಪ್ರಕಾಶನ
ಶೇಷಾದ್ರಿಪುರಂ, ಬೆಂಗಳೂರು
ಪು: 128, ಬೆಲೆ: 500/–

**ಅಮೃತ ರಾಮಾಯಣ ಮಹಾಕಾವ್ಯ (ಸಂಪುಟ 2)**
ಶ್ರೀ ಕೃಷ್ಣ ತಿಪ್ಪೂರು
ಪ್ರ: ಶ್ರೀ ವಾಸವಿ ಪ್ರಕಾಶನ
ವಿದ್ಯಾರಣ್ಯಪುರಂ, ಮೈಸೂರು
ಪು: 1226, ಬೆಲೆ: 1000/–

**ಸ್ವಯಂ ಜೊತೆ ಸಮರ**
ಶ್ರೀ ಹರ್ಕ್ಯುಲಿಸ್‌ನ ಆಂತರಿಕ ಶೋಧ
ಪ್ರ: ವಾವ್ ಪಬ್ಲಿಷಿಂಗ್ಸ್ ಪ್ರೈ.ಲಿ., ಪುಣೆ
ಪು: 196, ಬೆಲೆ: 225/–

**ಗಿರೀಶ್ ಕರ್ನಾಡರ ನಾಟಕಗಳು**
ಡಾ. ವಿಜಯಕುಮಾರಿ ಎಸ್. ಕರಿಕಲ್
ಪ್ರ: ಉನ್ನತಿ ಪ್ರಕಾಶನ
ಹೆಬ್ಬಾಳ್ 2ನೇ ಹಂತ, ಮೈಸೂರು
ಪು: 148, ಬೆಲೆ: 220/–

**ಯುಗಾಂತ**
ಪ್ರೊ. ವಿಜಯಕುಮಾರಿ ಕರಿಕಲ್
ಪ್ರ: ಉನ್ನತಿ ಪ್ರಕಾಶನ
ಹೆಬ್ಬಾಳ್ 2ನೇ ಹಂತ, ಮೈಸೂರು
ಪು: 492, ಬೆಲೆ: 740/–

**ಬ್ರೆಜಿಲ್ ಪಯಣ**
ವಸಂತ ಕಲ್‌ಬಾಗಲ್
ಪ್ರ: ಸಾಹಿತ್ಯಲೋಕ
ರಾಜಾಜಿನಗರ, ಬೆಂಗಳೂರು
ಪು: 96, ಬೆಲೆ: 130/–

**ಜ್ಞಾನಾಮೃತ ನುಡಿಮುತ್ತುಗಳು**
ಶ್ರೀ ಎಸ್. ಶ್ರೀನಿವಾಸಮೂರ್ತಿ
ನಂ.21, 2ನೇ ಕ್ರಾಸ್, ಮಿಷನ್ ರಸ್ತೆ
ಬೆಂಗಳೂರು
ಪು: 424, ಬೆಲೆ: 300/–

**ದ್ರೇಷ್ಕಾಣ ಫಲಸಂಚಯ (ಮೇಷಾದ್ರಿ)**
ಶ್ರೀ ಶ್ರೀಧರ ಗೋರೆ
ಪ್ರ: ಕ್ರಿಯೇಟಿವ್ ಪುಸ್ತಕ ಮನೆ
ಜೋಡು ರಸ್ತೆ, ಕಾರ್ಕಳ
ಪು: 144, ಬೆಲೆ: 160/–

**ವಚನ ವೈವಿಧ್ಯ**
ಶ್ರೀ ಎಂ.ಬಿ. ಸಂತೋಷ್
ಪ್ರ: ಡಿ.ವಿ. ಪಬ್ಲಿಕೇಷನ್
ಕಡಕೊಳ, ಮೈಸೂರು
ಪು: 160, ಬೆಲೆ: 200/–

**ಕಾಯಕಾರ್ಥ ಕ್ರಾಂತಿ**
ಡಾ. ಬಸವರಾಜ ಸಾದರ
ಪ್ರ: ಬೆರಗು ಪ್ರಕಾಶನ, ಕಡನಿ
ಅಲಮೇಲ ತಾ., ವಿಜಯಪುರ ಜಿಲ್ಲೆ
ಪು: 104, ಬೆಲೆ: 135/–

**ಮೌನ ಮಾತಾದಾಗ**
ಡಾ. ವೆಂ. ವನಜ
ವಿಜಯನಗರ, ಮೈಸೂರು
ಪು: 232, ಬೆಲೆ: 250/–

**ಅನುಕವನ (ಇಂಗ್ಲಿಷ್ ಪದ್ಯಗಳ ಕನ್ನಡ ಅನುವಾದ)**
ಪ್ರೊ. ಎ.ಪಿ. ಮಹಾದೇವಪ್ಪ
ಪ್ರ: ಪೂರ್ವಜ್ ಪ್ರಕಾಶನ
ರಾಜರಾಜೇಶ್ವರಿ ನಗರ, ಬೋಗಾದಿ
ಮೈಸೂರು
ಪು: 282, ಬೆಲೆ: 260/–

**ಅಮೃತ ರಾಮಾಯಣ ಮಹಾಕಾವ್ಯ (ಸಂಪುಟ 1)**
ಶ್ರೀ ಕೃಷ್ಣ ತಿಪ್ಪೂರು
ಪ್ರ: ಶ್ರೀ ವಾಸವಿ ಪ್ರಕಾಶನ
ವಿದ್ಯಾರಣ್ಯಪುರಂ, ಮೈಸೂರು
ಪು: 1226, ಬೆಲೆ: 1000/–

## ಲೇಖಕರ ವಿಳಾಸ

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ್ ಆಯುರ್ವೇದ
ಚಿಕಿತ್ಸಾಲಯ
ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್
ಬಿ.ಹೆಚ್. ರಸ್ತೆ
ತುಮಕೂರು 572 102
ಮೊ : 98809 96196

**ಡಾ. ಡಿ.ಎಸ್. ಗುರು**
ನಂ.830, ವಿಷೇಶಾಪೇಕ್ಷ
ಕನಕದಾಸನಗರ
3ನೇ ಹಂತ
ದಟ್ಟಗಳ್ಳಿ
ಮೈಸೂರು 570 022
ಮೊ : 96202 28005

**ಡಾ. ಉಷಾದೇವಿ ಹಿರೇಮಠ**
ಮುಖ್ಯಸ್ಥರು, ಕನ್ನಡ ವಿಭಾಗ
ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ.ವಿಜ್ಞಾನ
ಮಹಾವಿದ್ಯಾಲಯ
ಬಿ.ಎಲ್.ಡಿ.ಇ. ಸಂಸ್ಥೆ
ವಿಜಯಪುರ
ಮೊ : 90358 10016

**ಡಾ. ವೈ. ಸುಶ್ಮಿತಾ**
ಸಹ ಸಂಶೋಧಕರು
ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ
ಭಾರತೀಯ ಬಾಷಾ ಸಂಸ್ಥಾನ
ಮಾನಸ ಗಂಗೋತ್ರಿ
ಮೈಸೂರು 570 006
ಮೊ: 99026 83715

ಹಿಂಬದಿ ಪುಟದ ಚಿತ್ರ

ಮೈಸೂರು ಜೆಎಸ್ಎಸ್ ವೈದ್ಯಕೀಯ ಕಾಲೇಜಿನ ಪದವೀಧರರ ದಿನಾಚರಣೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಡಾ. ಎಂ.ಎನ್. ಸುಮಾ, ಡಾ. ಡಿ. ನಾರಾಯಣಪ್ಪ, ಡಾ. ಬಿ. ಮಂಜುನಾಥ್, ಡಾ. ಹೆಚ್. ಬಸವನಗೌಡಪ್ಪ, ಡಾ. ಎಂ.ಕೆ. ರಮೇಶ್, ಡಾ. ಸಿ.ಜಿ. ಬೆಟಸೂರಮಠ, ಡಾ. ಎನ್. ಸುಧೀಂದ್ರ ಭಟ್, ಡಾ. ಸಿ.ಪಿ. ಮಧು, ಡಾ. ಪ್ರಶಾಂತ್ ವಿಶ್ವನಾಥ್ ಹಾಗೂ ಡಾ. ಮಾಂತಪ್ಪನವರುಗಳೊಂದಿಗೆ ಪದಕ ಪುರಸ್ಕೃತ ಪದವೀಧರರುಗಳಿದ್ದಾರೆ (4 ಏಪ್ರಿಲ್ 2026)



ಮಂಡ್ಯ ತಾಲ್ಲೂಕು ಎಲೆಚಾಕನಹಳ್ಳಿಯಲ್ಲಿ ತೂಬಿನಕೆರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬಿಸಲು ಕಾರಣಕರ್ತರಾದ ಮಾಜಿ ಮುಖ್ಯಮಂತ್ರಿಗಳು ಹಾಗೂ ಸಂಸದರಾದ ಶ್ರೀ ಬಸವರಾಜ ಬೊಮ್ಮಾಯಿಯವರಿಗೆ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ಆದಿಚುಂಚನಗಿರಿ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಎ.ಬಿ. ರಮೇಶ್ ಬಂಡಿಸಿದ್ಧೇಗೌಡ, ಶ್ರೀ ಎನ್. ಚಲುವರಾಯಸ್ವಾಮಿ, ಡಾ. ಸಿ.ಎನ್. ಅಶ್ವಥ್‌ನಾರಾಯಣ, ಶ್ರೀಮತಿ ವಿಜಯಲಕ್ಷ್ಮೀ ಬಂಡಿಸಿದ್ಧೇಗೌಡ ಹಾಗೂ ಶ್ರೀ ಬಸವರಾಜ ಬೊಮ್ಮಾಯಿಯವರುಗಳಿದ್ದಾರೆ (7 ಏಪ್ರಿಲ್ 2026)



ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಬಸವ ವೇದಿಕೆಯ ವತಿಯಿಂದ ಏರ್ಪಡಿಸಿದ್ದ ಬಸವ ಜಯಂತಿ, ಬಸವಶ್ರೀ ಮತ್ತು ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಎಸ್. ಷಡಕ್ಷರಿ, , ಶ್ರೀ ವಿ. ಸೋಮಣ್ಣ, ಶ್ರೀ ರುದ್ರಯ್ಯ, ಶ್ರೀ ಬಸವರಾಜ ಬೊಮ್ಮಾಯಿ, ಡಾ. ಸಿ.ಎನ್ ಮಂಜುನಾಥ್, ಶ್ರೀ ಹೆಚ್.ಕೆ ಪಾಟೀಲ್, ಡಾ. ಸಿ. ಸೋಮಶೇಖರ್ ಹಾಗೂ ಡಾ. ಗುರುರಾಜ ಕರ್ಜಗಿ ಮೊದಲಾದವರುಗಳಿದ್ದಾರೆ (27 ಏಪ್ರಿಲ್ 2026)



ಕುರುಬೂರು ಶ್ರೀ ಪಟ್ಟದ ಮಠದಲ್ಲಿ ಆಯೋಜಿಸಿದ್ದ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಬೆಟ್ಟದಪುರ, ಕುಂತೂರು, ಕುರುಬೂರು, ವಾಟಾಳು, ಕೆಸ್ತೂರು, ಕಳ್ಳೀಪುರ, ಆದಿಚುಂಚನಗಿರಿ ಬೆಂಗಳೂರು ಶಾಖೆ ಹಾಗೂ ಸಾಲೂರು ಮಠದ ಶ್ರೀಗಳಿದ್ದಾರೆ (30 ಏಪ್ರಿಲ್ 2026)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ 290ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಉಸ್ತಾದ್ ಡಾ. ಮೊಹಸಿನ್ ಖಾನ್‌ರವರು ಸಿತಾರ್ ವಾದನ ಪ್ರಸ್ತುತಿಪಡಿಸಿದರು. ಪಕ್ಕವಾದ್ಯದಲ್ಲಿ ಪಂ. ರಾಜೇಂದ್ರ ನಾಕೋಡ ಹಾಗೂ ಡಾ. ಅರ್ಚನರವರುಗಳಿದ್ದಾರೆ (1 ಏಪ್ರಿಲ್ 2026)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ 2023, 2024 ಮತ್ತು 2025ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿ ಹಾಗೂ ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿಗಳನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರದಾನ ಮಾಡಲಾಯಿತು. ಶ್ರೀ ಕಿಶೋರ್‌ಕುಮಾರ್ ಹಿರೇಮಠ, ಶ್ರೀ ವಿಜಯ ರಾವ್, ಪ್ರೊ. ಕೆ.ಎಸ್. ಅಪ್ಪಾಜಯ್ಯ, ಶ್ರೀಮತಿ ಪುಷ್ಪಾ ಬಿ. ಜಯಶೆಟ್ಟಿ, ಶ್ರೀ ಎಚ್.ಎಸ್. ಸಿದ್ಧಗಂಗಪ್ಪ, ಡಾ. ಓ.ಎಲ್. ನಾಗಭೂಷಣಸ್ವಾಮಿ, ಶ್ರೀ ಅನೂಪ್ ಬ್ಯಾಲಹುಣಸಿ, ಶ್ರೀ ಸಂಗಪ್ಪ ನಿಂಗಪ್ಪ ಮಲಗೊಂಡ, ಶ್ರೀ ಶಿವಪುತ್ರಪ್ಪ ಎಂ. ಬಡಿಗೇರ ಮತ್ತು ಶ್ರೀ ಚಂದ್ರಶೇಖರ ಭೀಮಣಪ್ಪ ಸೋಮಶೆಟ್ಟಿ, ಶ್ರೀಮತಿ ಪಾರ್ವತಿ ಹಾಲಭಾವಿ, ಶ್ರೀ ಸುರೇಶ್ ಹಾಲಭಾವಿ, ಶ್ರೀ ಸುದರ್ಶನ್, ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ, ಶ್ರೀ ಶಿರೀಷ್ ಜಯಶೆಟ್ಟಿ, ಡಾ. ಚಿತ್ಕಲಾ ಪಾಟೀಲ್, ಡಾ. ಬಿ.ಎಸ್. ಮಂಜುನಾಥಸ್ವಾಮಿ, ಡಾ. ಎಂ.ಎಸ್. ಮೂರ್ತಿ, ಡಾ. ಶ್ವೇತಾ ಮಡಪ್ಪಾಡಿ, ಶ್ರೀ ಆರ್. ರತಾಂಗ್ ಚಂದ್ರ, ಶ್ರೀಮತಿ ಸುಶೀಲ ಸತೀಶ್, ಶ್ರೀ ಸತೀಶ್ ಪ್ರಫುಲ್ಲಚಂದ್ರ, ಶ್ರೀ ಬಸವಕುಮಾರ್ ಸೋಮಶೆಟ್ಟಿ, ಶ್ರೀಮತಿ ವೀಣಾ ಬಸವಕುಮಾರ್‌ವರುಗಳಿದ್ದಾರೆ (15 ಏಪ್ರಿಲ್ 2026)

Registered with the Registrar of Newspapers in India Under No. 50622 / 1986
'Prasada' Monthly, Vol. 41 Issue No. 4, April 2026




ISSN 2583-7648
9 772583 764006

ಬಿಡಿ ಪ್ರತಿ : ರೂ.10/–
e-mail: prasada@jssonline.org * www.jssonline.org